Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–18 ಮೇ 1–7, 2023 ಪುಟ 16 ರೂ. 10/–
Volume-17 Issue-18 May 1-7, 2023 Pages:16 Price: 10/-



ಕ್ರಾಂತಿಕಾರಿ MAY ದಿನ


ಹಕ್ಕುಗಳನ್ನು ಉಳಿಸಿಕೊಳ್ಳಲು ಮತ್ತಷ್ಟು ಪಡೆಯಲು ಪಣ



ಕರ್ನಾಟಕ : ಆರಂಭವಾಗಿದೆ ಚುನಾವಣಾ ಅಂತಿಮ ಕದನ

ಸ್ತ್ರೀ ದ್ವೇಷಿ ಬಿಜೆಪಿ


ಬಿಜೆಪಿ ಸೋಲಿಸುವ ಭಿನ್ನ ದಾರಿಗಳ ನಡೆ ಯಾವ ಕಡೆ?



ವ್ಹಿ.ಪಿ.ಕುಲಕರ್ಣಿ : ನೊಂದವರ ಒಡಲಾಳದ ಅಗ್ನಿಕುಂಡ ಇನ್ನಿಲ್ಲ

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–27

ಡಾ.ಶಮ್ಸುಲ್ ಇಸ್ಲಾಂ
ಅನು:ಟಿ.ಸುರೇಂದ್ರರಾವ್

ಇದುವರೆಗೆ ಐದು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ

ಮಿಥ್ಯೆ 1 : ‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!?

ಮಿಥ್ಯೆ 2 : ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?

ಮಿಥ್ಯೆ 3 : ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?

ಮಿಥ್ಯೆ 4 : ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು !?

ಮಿಥ್ಯೆ 5 : ಸಾವರ್ಕರ್ ಒಬ್ಬ ವಿಚಾರವಾದಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು !?

ಈಗ ಮಿಥ್ಯೆ 6 : ಗಾಂಧಿ ಹತ್ಯೆಯ ಪ್ರಕರಣದಲ್ಲಿ ಆರೋಪಗಳು ಸಾಬೀತಾಗಲೇ ಇಲ್ಲ!?

ಸಾವರ್ಕರ್‌ರನ್ನು ನ್ಯಾಯಾಲಯ ಖುಲಾಸೆಗೊಳಿಸಿತು, ಆದರೂ ಕಳಂಕ ಮುಂದುವರಿಯುತ್ತಿದೆ ಎಂದು ಸಾವರ್ಕರ್‌ವಾದಿಗಳು ಅನೇಕ ವೇಳೆ ವಾದಿಸುತ್ತಾರೆ. ನಿಜ, ಗಾಂಧಿಯವರನ್ನು ಕೊಲ್ಲಲು ಮಾಡಿದ ಪಿತೂರಿಯಲ್ಲಿ ಸಾವರ್ಕರ್ ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂಬ ಆರೋಪಿಗಳಲ್ಲಿ ಒಬ್ಬರಾದ ದಿಗಂಬರ್ ಬಡ್ಗೆಯವರ ಸಾಕ್ಷ್ಯದ ಹೊರತಾಗಿಯೂ ಪಿತೂರಿಯನ್ನು ಸಾಬೀತುಪಡಿಸಲು ‘ಸ್ವತಂತ್ರ ಸಾಕ್ಷ್ಯ’ ಇರಲಿಲ್ಲ ಎಂಬ ಕಾರಣಕ್ಕಾಗಿ ಬಿಡುಗಡೆ ಮಾಡಲಾಯಿತು. ಆದರೆ ಬಡ್ಗೆಯವರು ವಿವರವಾಗಿ ನಿರೂಪಿಸಿದ ಕಥನವು ಒಟ್ಟಿನಲ್ಲಿ ಸರಿಯಾಗಿದೆ ಎಂದು ಪೂರ್ಣ ಪೀಠದ ತೀರ್ಪನ್ನು ಬರೆದ ನ್ಯಾಯಮೂರ್ತಿಗಳೇ ಅಭಿಪ್ರಾಯಪಟ್ಟಿರುವುದು ಕೂಡ ನಿಜ ಎಂಬುದನ್ನೂ ಗಮನಿಸಬೇಕು. ಮುಂದೆ ಓದಿ..

ಆರ್‌ಎಸ್‌ಎಸ್ ನ ಮಾರ್ಗದರ್ಶಕರಾಗಿ ಸಾವರ್ಕರ್

ಸೋಜಿಗವೆಂದರೆ ಇವತ್ತು ಸಾವರ್ಕರ್ ಅವರನ್ನು ವೈಭವೀಕರಿಸುವ ಕಾರ್ಯದಲ್ಲಿ ಮುಂಚೂಣಿಯಲ್ಲಿರುವ ಆರ್‌ಎಸ್‌ಎಸ್ ಗಾಂಧೀಜಿಯವರ ಹತ್ಯೆಯ ನಂತರ ತಮಗೂ ಸಾವರ್ಕರ್ ಮತ್ತು ಅವರ ನೇತೃತ್ವದ ಹಿಂದೂ ಮಹಾಸಭಾಕ್ಕೂ ಯಾವುದೇ ಸಂಬಂಧವಿಲ್ಲವೆಂದು ನಿರಾಕರಿಸಿತ್ತು ಮತ್ತು ಆ ಮೂಲಕ ಗಾಂಧಿಯ ಹತ್ಯೆಯಲ್ಲಿ ಸಾವರ್ಕರ್ ಅವರ ಪಾತ್ರ ಇತ್ತು ಎನ್ನುವ ನಂಬಿಕೆಯನ್ನು ಗಟ್ಟಿಗೊಳಿಸಿತ್ತು. ಗಾಂಧಿ ಹತ್ಯೆಯಲ್ಲಿ ಆರ್‌ಎಸ್‌ಎಸ್‌ನ ಪಾತ್ರವೂ ಇತ್ತು ಎಂದು ಯಾರಾದರೂ ಕೇಳಿದರೆ ಈಗಲೂ ಅದು ಕೋಪದಿಂದ ಪ್ರತಿಕ್ರಿಯಿಸುತ್ತದೆ. ಈ ಖಚಿತ ಕಾರಣಕ್ಕಾಗಿಯೇ ಮಾಜಿ ಮಾನವ ಸಂಪನ್ಮೂಲ ಸಚಿವ, ಅರ್ಜುನ್ ಸಿಂಗ್ ಅವರಿಗೆ ಕಾನೂನು ನೋಟೀಸನ್ನು ಆರ್‌ಎಸ್‌ಎಸ್ ಕಳಿಸಿತ್ತು. ಆರ್‌ಎಸ್‌ಎಸ್‌ನ ಈ ವಿರೋಧಾಭಾಸದ ನಿಲುವುಗಳು ಸ್ವಾರಸ್ಯಕರ ಸನ್ನಿವೇಶವನ್ನು ಸೃಷ್ಟಿಸುತ್ತವೆ. ಆರ್‌ಎಸ್‌ಎಸ್ ಪ್ರಕಾರ ಸಾವರ್ಕರ್ ಮಹಾನ್ ರಾಷ್ಟ್ರೀಯವಾದಿ, ಅವರ ಹಿಂದುತ್ವ ಸಿದ್ಧಾಂತವು ಭಾರತೀಯ ರಾಷ್ಟ್ರೀಯವಾದವಾಗಿದೆ ಮತ್ತು ಸಾವರ್ಕರ್ ಕನಸುಗಳ ಭಾರತವನ್ನು ನಿರ್ಮಿಸಲು ಅದು ಬದ್ಧವಗಿದೆ. ಆದರೆ ಸಾವರ್ಕರ್ ಅವರನ್ನು ಗಾಂಧಿಯ ಹಂತಕ ಎಂದು ಆರೋಪಿಸಿದರೆ ತಾವು ಆ ಗುಂಪಿಗೆ ಸೇರಿದವರೆಂದು ಹೇಳಿಕೊಳ್ಳಲು ಬಯಸುವುದಿಲ್ಲ. ತೀರ ಇತ್ತೀಚೆಗೆ ಮಾತ್ರವೇ ಅದು ಗಾಂಧಿಯ ಹತ್ಯೆಯಲ್ಲಿ ಸಾವರ್ಕರ್ ಅವರ ಪಾತ್ರವಿರಲಿಲ್ಲ ಎಂದು ನಿರಾಕರಿಸಲು ಶುರುಮಾಡಿದೆ. ಆದರೆ ಅದು ಆರ್‌ಎಸ್‌ಎಸ್‌ಗೆ ಬಹಳ ಸಮಸ್ಯೆಯನ್ನು ತಂದೊಡ್ಡಿದೆ. ಸಾವರ್ಕರ್ ಅವರು ಗಾಂಧಿಯ ಹತ್ಯೆಯಲ್ಲಿ ಪಾತ್ರ ವಹಿಸಿರಲಿಲ್ಲ ಎನ್ನುವುದಾದರೆ 1940 ರ ದಶಕದ ಕೊನೆಯಲ್ಲಿ ಆರ್‌ಎಸ್‌ಎಸ್ ಏಕೆ ಸಾವರ್ಕರ್ ಅವರೊಂದಿಗಿನ ತನ್ನ ಸಂಬಂಧವನ್ನು ನಿರಾಕರಿಸುತ್ತಿತ್ತು ಎಂಬ ಪ್ರಶ್ನೆಯನ್ನು ನ್ಯಾಯೋಚಿತವಾಗಿ ಕೇಳಬಹುದಲ್ಲವೆ?

ಸಾವರ್ಕರ್ ಕುರಿತು ಪದೇ ಪದೇ ಬದಲಾಗುತ್ತಿರುವ ಆರ್‌ಎಸ್‌ಎಸ್‌ನ ನಿಲುವುಗಳೇನೇ ಇರಲಿ, ಗಾಂಧಿ ಹತ್ಯೆಯಲ್ಲಿ ಸಾವರ್ಕರ್ ಅವರ ಜತೆ ಆರ್‌ಎಸ್‌ಎಸ್‌ನ ಪಾತ್ರವೂ ಇತ್ತು ಎಂದು ಭಾರತದ ಮೊದಲ ಗೃಹ ಸಚಿವ ಸರ್ದಾರ್ ಪಟೇಲ್ ಅವರು ದೃಢವಾಗಿ ನಂಬಿದ್ದರು. ಸೆಪ್ಟೆಂಬರ್ 11, 1948 ರಂದು ಅವರು ಗೋಲ್ವಾಲ್ಕರ್ ಅವರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದರು:

“ಹಿಂದೂಗಳನ್ನು ಸಂಘಟಿಸುವುದು ಮತ್ತು ಅವರಿಗೆ ಸಹಾಯ ಮಾಡುವುದು ಒಂದು ವಿಷಯ. ಆದರೆ ಅವರ ಸಂಕಟಗಳಿಗೆ ಅಮಾಯಕ ಹಾಗೂ ಅಸಹಾಯಕ ಪುರುಷರು, ಮಹಿಳೆಯರು ಮತ್ತು ಮಕ್ಕಳ ಮೇಲೆ ಪ್ರತೀಕಾರ ಸಾಧಿಸುವುದು ಬೇರೆಯೇ ವಿಚಾರ. . . ಇದೂ ಸಾಲದೆಂಬಂತೆ, ಕಾಂಗ್ರೆಸ್‌ಗೆ ಅವರ ವಿರೋಧ, ವ್ಯಕ್ತಿತ್ವ, ಶಿಷ್ಟಾಚಾರ ಹಾಗೂ ಸಭ್ಯ ನಡವಳಿಕೆಗಳೆಲ್ಲವನ್ನೂ ಕಡೆಗಣಿಸಿ ಉಗ್ರ ವೈಷಮ್ಯದಂತಹ ಧೋರಣೆಯು ಜನರಲ್ಲಿ ಒಂದು ರೀತಿಯ ಅಶಾಂತಿಯನ್ನು ಹುಟ್ಟುಹಾಕಿದೆ. ಅವರ ಎಲ್ಲಾ ಭಾಷಣಗಳು ಕೋಮುವಾದಿ ವಿಷಗಳಿಂದ ತುಂಬಿ ತುಳುಕುತ್ತವೆ. ಹಿಂದೂಗಳನ್ನು ಹುರಿದುಂಬಿಸಲು ಮತ್ತು ಅವರ ರಕ್ಷಣೆಗಾಗಿ ಸಂಘಟಿಸುವ ಸಲುವಾಗಿ ವಿಷವನ್ನು ಹರಡುವ ಅಗತ್ಯವಿಲ್ಲ. ಈ ವಿಷದ ಅಂತಿಮ ಫಲಿತಾಂಶವೇನಾಯಿತೆಂದರೆ, ಗಾಂಧೀಜಿಯಂಥವರ ಅಮೂಲ್ಯವಾದ ಜೀವವನ್ನು ದೇಶವು ಕಳೆದುಕೊಳ್ಳುವ ದುಃಸ್ಥಿತಿಗೆ ಬಂತು. ಆರ್‌ಎಸ್‌ಎಸ್ ಬಗ್ಗೆ ಈಗ ಸರ್ಕಾರಕ್ಕಾಗಲೀ ಅಥವಾ ಜನರಿಗಾಗಲೀ ಕಿಂಚಿತ್ತೂ ಸಹಾನುಭೂತಿ ಉಳಿದಿಲ್ಲ. ನಿಜ ಹೇಳಬೇಕೆಂದರೆ ಅದರ ಬಗ್ಗೆ ವಿರೋಧ ಬೆಳೆಯುತ್ತಿದೆ. ಗಾಂಧೀಜಿ ಕೊಲೆಯಾದಾಗ ಆರ್‌ಎಸ್‌ಎಸ್‌ನವರು ಸಿಹಿ ಹಂಚಿ ಸಂತೋಷದಿಂದ ಸಂಭ್ರಮಿಸಿದಾಗಲಂತೂ ಅವರ ವಿರುದ್ಧದ ಭಾವನೆ ಇನ್ನೂ ತೀಕ್ಷ್ಣವಾಯಿತು. ಇಂತಹ ಸನ್ನಿವೇಶದಲ್ಲಿ ಆರ್‌ಎಸ್‌ಎಸ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾದ್ದು ಸರ್ಕಾರಕ್ಕೆ ಅನಿವಾರ್ಯವಾಯಿತು.”

ಹಿಂದೂ ಮಹಾಸಭಾ ಮತ್ತು ಆರ್‌ಎಸ್‌ಎಸ್ ಯಾವಾಗಲೂ ಒಂದೇ ನಾಣ್ಯದ ಎರಡು ಮುಖಗಳು. ಸಾವರ್ಕರ್ ಅವರ ಜೀವನಚರಿತ್ರಕಾರ ಧನಂಜಯ ಕೀರ್ “ಆರ್‌ಎಸ್‌ಎಸ್‌ನ್ನು ಹಿಂದೂ ಮಹಾಸಭಾದ ಉಗ್ರಗಾಮಿ ದಾಳಿ ಪಡೆ ಎಂದು ಪರಿಗಣಿಸಲಾಗಿತ್ತು. ಗೊಡ್ಸೆ ತನ್ನ ಯೌವನದ ಹೊಸ್ತಿಲಲ್ಲಿ ಆರ್‌ಎಸ್‌ಎಸ್‌ನ ಕಾರ್ಯಕರ್ತನಾಗಿದ್ದರು ಮತ್ತು ನಂತರ ಹಿಂದೂ ಮಹಾಸಭಾದ ಅಖಿಲ ಭಾರತ ಸಮಿತಿಯ ಪ್ರಮುಖ ಸದಸ್ಯನಾಗಿದ್ದರು”ಎಂದು ಒಪ್ಪಿಕೊಳ್ಳುತ್ತಾರೆ.

ಕೀರ್ ಅವರು ಸಾವರ್ಕರ್ ಜೀವನವೃತ್ತಾಂತದಲ್ಲಿ ಬಹು ಮುಖ್ಯವಾದ ಅಂಶವೊಂದನ್ನು ಉಲ್ಲೇಖಿಸುತ್ತಾರೆ:

“ಆರ್‌ಎಸ್‌ಎಸ್ ಎಂಬ ಸ್ವಯಂಸೇವಾ ಸಂಘಟನೆಯೊಂದನ್ನು ಆರಂಭಿಸುವ ಮೊದಲು ಡಾ.ಹೆಡ್ಗೆವಾರ್ ಅವರು ಸಾವರ್ಕರ್ ಅವರೊಂದಿಗೆ ಸಂಘಟನೆಯ ನಂಬಿಕೆ ಸ್ವರೂಪ ಹಾಗೂ ಭವಿಷ್ಯದ ಬಗ್ಗೆ ದೀರ್ಘ ಚರ್ಚೆ ಮಾಡಿದ್ದರು. . . ಗಾಂಧಿಯವರ ಅಸಹಕಾರ ಚಳವಳಿಯು ಕುಸಿದುಹೋದ ನಂತರ ಮತ್ತು ಖಿಲಾಫತ್ ಚಳವಳಿಯು ವಿಫಲವಾಗಿ ಕೊನೆಯಾದ ಮೇಲೆ ದೇಶವು ಸ್ಥೈರ್ಯಗೆಟ್ಟು ವಿದ್ಯಾರ್ಥಿ ಜಗತ್ತಿನಲ್ಲಿ ಸಂಪೂರ್ಣ ಅವ್ಯವಸ್ಥೆ ಹಾಗೂ ಗೊಂದಲ ವ್ಯಾಪಿಸಿತ್ತು. ಈ ಗೊಂದಲದ ಪರಿಣಾಮವಾಗಿ ಮತ್ತು ಸಾವರ್ಕರ್ ಮತ್ತಿತರರ ಜತೆ ಸಮಾಲೋಚನೆ ಮಾಡಿದ ಹೆಡ್ಗೆವಾರ್ ಅವರು ಹಿಂದೂ ಸಮಾಜಕ್ಕೆ ಶಕ್ತಿ ತುಂಬಲು ಮತ್ತು ಆಧಾರ ಸ್ತಂಭವಾಗಿ ನಿಲ್ಲಲು ಒಂದು ಸಂಘಟನೆಯನ್ನು ಕಟ್ಟಬೇಕು ಎಂದು ನಿರ್ಧರಿಸಿದರು.”

ಹೆಡ್ಗೆವಾರ್ ಅವರು ತಮ್ಮ ಬದುಕಿನುದ್ದಕ್ಕೂ ಈ ಸಂಪರ್ಕ ವ್ಯವಸ್ಥೆಯನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬಂದರು. ಅವರು 1940 ರಲ್ಲಿ ನಿಧನರಾಗುವ ತನಕವೂ ಹಿಂದೂ ಮಹಾಸಭಾದ ಪ್ರತಿಯೊಂದು ಅಧಿವೇಶನದಲ್ಲೂ ತಪ್ಪದೇ ಭಾಗವಹಿಸಿದರು. ಅವರ ನಂತರ ಹೆಡ್ಗೆವಾರ್ ಅವರು ಬದುಕಿದ್ದಾಗಲೇ ಅವರಿಂದ ಅವರ ಪ್ರಧಾನ ಉತ್ತರಾಧಿಕಾರಿಯಾಗಿ 1940 ರಲ್ಲಿ ನೇಮಕಗೊಂಡ ಎಂ.ಎಸ್.ಗೋಲ್ವಾಲ್ಕರ್ ಎರಡನೇ ಸರ್‌ಸಂಘಚಾಲಕ್ ಆಗಿ ದುಡಿದರು ಮತ್ತು ಅದೇ ಆವೇಗವನ್ನು ಉಳಿಸಿಕೊಂಡು ಬಂದರು. ಸಾವರ್ಕರ್ ಮತ್ತು ಗೋಲ್ವಾಲ್ಕರ್ ಇಬ್ಬರೂ ಪರಸ್ಪರ ಸೌಹಾರ್ದ ಸಂಬಂಧವನ್ನು ಇಟ್ಟುಕೊಂಡಿದ್ದರು. ಗಾಂಧಿ ಹತ್ಯೆಯ ನಂತರ ನಿಷೇಧಕ್ಕೊಳಪಟ್ಟಿದ್ದ ಆರ್‌ಎಸ್‌ಎಸ್‌ನ ಮೇಲಿನ ನಿಷೇಧವನ್ನು ತೆಗೆದುಹಾಕಿ ಗೋಲ್ವಾಲ್ಕರ್ ಅವರನ್ನು 1949 ರ ಜುಲೈನಲ್ಲಿ ಜೈಲಿನಿಂದ ಬಿಡುಗಡೆ ಮಾಡಿದಾಗ ಸಾವರ್ಕರ್ ಅವರು ಕಳಿಸಿದ್ದ ಟೆಲಿಗ್ರಾಂನ್ನು ಗಮನಿಸಿದರೆ ಅದು ಸ್ಪಷ್ಟವಾಗಿ ಗೋಚರವಾಗುತ್ತದೆ. ಆ ಟೆಲಿಗ್ರಾಂ ಹೀಗಿತ್ತು: “ಹಿಂದುತ್ವದ ವೀರ ಪ್ರತಿಪಾದಕ ಸಂಘವು ಚಿರಾಯುವಾಗಲಿ.”

ಸಾವರ್ಕರ್ ಅವರಿಗೆ ಗೋಲ್ವಾಲ್ಕರ್ ಬಗ್ಗೆ ಬಹಳ ಅಕ್ಕರೆಯಿತ್ತು, ಅವರ ಹುಟ್ಟಿದ ದಿನಗಳಲ್ಲಿ ಒಂದು ಬಾರಿ ಟೆಲಿಗ್ರಾಂ ಮೂಲಕ ಅಭಿನಂದಿಸುವಾಗ ‘ಗೋಲ್ವಾಲ್ಕರ್ ಹಿಂದೂ ರಾಷ್ಟ್ರದ ಆಧಾರ ಸ್ತಂಭ’ ಎಂದಿದ್ದರು. ಗಾಂಧಿ ಹತ್ಯೆಯ ನಂತರದ ಹಂತದಲ್ಲಿ ಸಾವರ್ಕರ್ ಅವರು ಏರ್ಪಡಿಸಿದ ಹಲವಾರು ಸಭೆಗಳಲ್ಲಿ ಗೋಲ್ವಾಲ್ಕರ್ ಒಬ್ಬ ಪ್ರಮುಖ ಭಾಷಣಕಾರರಾಗಿ ಕಾಣಿಸಿಕೊಳ್ಳುತ್ತಿದ್ದರು. ಆರ್‌ಎಸ್‌ಎಸ್ ಕೂಡ ಅವರ ಬಗ್ಗೆ ಇದೇ ಉತ್ಸಾಹ ತೋರುತ್ತಿತ್ತು. ಆರ್‌ಎಸ್‌ಎಸ್ ತನ್ನ ಸಂಸ್ಥಾಪಕ, ಕೆ.ಬಿ.ಹೆಡ್ಗೆವಾರ್ ನೆನಪಿನಲ್ಲಿ ಒಂದು ಸ್ಮಾರಕವನ್ನು ರಚಿಸಿ ಅದನ್ನು ಆಶೀರ್ವದಿಸಲು ಏಪ್ರಿಲ್ 5, 1962 ರಂದು ಸಾವರ್ಕರ್‌ರನ್ನು ಆಹ್ವಾನಿಸಿತ್ತು. ಸಾವರ್ಕರ್ ಅವರ ಜೀವನಚರಿತ್ರಕಾರ ಕೀರ್ ಅವರ ಪ್ರಕಾರ ಸಾವರ್ಕರ್‌ರಿಗೆ ಮಾರ್ಚ್ 16, 1962 ರಲ್ಲಿ ಬರೆದ ಪತ್ರವೊಂದರಲ್ಲಿ ಗೋಲ್ವಾಲ್ಕರ್ ಹೀಗೆ ಹೇಳಿದ್ದರು:

“ಸಾವರ್ಕರ್ ಅವರು ಆ ಸಮಾರಂಭದಲ್ಲಿ ಭಾಗವಹಿಸಬೇಕು ಮತ್ತು ಶುಭ ಕೋರಬೇಕು ಎಂಬುದು ಎಲ್ಲರ ಅಪೇಕ್ಷೆಯಾಗಿತ್ತು. ಏಕೆಂದರೆ ಡಾ.ಹೆಡ್ಗೆವಾರ್ ಬಗ್ಗೆ ಸಾವರ್ಕರ್ ಅವರಿಗೆ ಅಪಾರ ಗೌರವವಿತ್ತು ಮತ್ತು ಇವರ ಕೆಲಸ ಕಾರ್ಯಗಳ ಬಗ್ಗೆ ಅವರಿಗೆ ಅಪಾರ ಮೆಚ್ಚುಗೆ ಇತ್ತು. ಗೋಲ್ವಾಲ್ಕರ್ ಅವರೇ ಒಮ್ಮೆ ಅವರ ಅಪರೂಪದ ಉಪಸ್ಥಿತಿಯೇ ನಮಗೆಲ್ಲಾ ಹೆಮ್ಮೆ ಎಂದು ಹೇಳಿದ್ದರು. ಹಾಗಾಗಿ ಅವರಿಗೆ ಆಹ್ವಾನ ಕಳಿಸಿ ಬರಲೇಬೇಕು ಮತ್ತು ಸಮಾರಂಭದಲ್ಲಿ ಪಾಲ್ಗೊಳ್ಳಲೇಬೇಕು ಎಂದು ಒತ್ತಾಯಿಸಿದ್ದರು.”

ಗಂಭೀರ ಅನಾರೋಗ್ಯದಿಂದಾಗಿ ಸಾವರ್ಕರ್ ಅವರು ಆ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಅವರು ಗೋಲ್ವಾಲ್ಕರ್‌ರಿಗೆ ಒಂದು ಸಂದೇಶವನ್ನು ಕಳಿಸಿ ಆರ್‌ಎಸ್‌ಎಸ್ ಕೈಗೊಂಡಿರುವ ಮಹಾನ್ ಕಾರ್ಯವು ಮುಂದುವರಿಯಲಿ ಎಂದು ಕೋರುತ್ತಾರೆ. ಗೋಲ್ವಾಲ್ಕರ್ ಅವರು ಬದುಕಿನುದ್ದಕ್ಕೂ ಸಾವರ್ಕರ್ ಅವರ ಚಿಂತನೆಗಳಿಗೆ ಉಪಕೃತರಾಗಿದ್ದರು:

“ಸಾವರ್ಕರ್ ಅವರ ಮಹಾನ್ ಕೃತಿ ಹಿಂದುತ್ವದಲ್ಲಿ ವೈಜ್ಞಾನಿಕವಾಗಿ ವಿವರಿಸಿದ ರಾಷ್ಟ್ರೀಯತೆಯ ತತ್ವಗಳಿಗೆ ಅವರು ಋಣಿಯಾಗಿದ್ದರು. ಅವರಿಗೆ ಅದು ಒಂದು ಪಠ್ಯ ಪುಸ್ತಕವಾಗಿತ್ತು, ವಿಜ್ಞಾನದ ಪುಸ್ತಕವಾಗಿತ್ತು.”

ಸಾವರ್ಕರ್ ಅವರು ಆರ್‌ಎಸ್‌ಎಸ್‌ಗೆ ಎಷ್ಟು ನಿಕಟವಾಗಿದ್ದರು ಎಂದು ಅರಿಯಲು ಹೆಡ್ಗೆವಾರ್ ಅವರು ಜೂನ್ 22, 1940 ರಂದು ನಿಧನರಾದಾಗ ಅವರು ಕಳಿಸಿದ ಟೆಲಿಗ್ರಾಮಿನಿಂದಲೇ ನೋಡಬಹುದು: “ಹಿಂದೂ ಮಹಾಸಭಾವು ಡಾಕ್ಟರ್ ಹೆಡ್ಗೆವಾರ್ ಅವರ ನಿಧನಕ್ಕೆ ಅತ್ಯಂತ ದುಃಖದಿಂದ ಸಂತಾಪ ವ್ಯಕ್ತಪಡಿಸುತ್ತದೆ. ಹೆಡ್ಗೆವಾರ್ ಇನ್ನಿಲ್ಲ – ಹೆಡ್ಗೆವಾರ್ ಚಿರಾಯುವಾಗಲಿ; ಹೆಡ್ಗೆವಾರ್ ಇನ್ನಿಲ್ಲ – ಸಂಘ ಚಿರಾಯುವಾಗಲಿ!!!”

ಸಾವರ್ಕರ್ ಹಿಂದೂ ಮಹಾಸಭಾದ ಎಲ್ಲ ಘಟಕಗಳಿಗೂ ನಿರ್ದೇಶನ ನೀಡಿ ಜೂನ್ 30, 1940 ದಿನವನ್ನು ಡಾ.ಹೆಡ್ಗೆವಾರ್ ದಿನವನ್ನಾಗಿ ಆಚರಿಸಬೇಕೆಂದು ಹೇಳುತ್ತಾರೆ. ಹಿಂದೂ ಮಹಾಸಭಾದ ಎಲ್ಲಾ ಕಛೇರಿಗಳಿಗೂ ಹೀಗೆ ಕರೆ ನೀಡುತ್ತಾರೆ:

“ಹಿಂದೂ ಧ್ವಜವನ್ನು ಅರ್ಧಮಟ್ಟಕ್ಕೆ ಇಳಿಸಿ ಹಾರಿಸಬೇಕು ಮತ್ತು ಸಾರ್ವಜನಿಕ ಸಭೆಯನ್ನು ನಡೆಸಿ ಮಹಾನ್ ಹಿಂದೂ ಸಂಘಟಕನ ಸಾವಿಗೆ ಸಂತಾಪ ಸೂಚಿಸಿ ನಿರ್ಣಯಗಳನ್ನು ಕೈಗೊಳ್ಳಬೇಕು. ಆ ನಿರ್ಣಯವನ್ನು ನಾಗ್ಪುರದ ಪ್ರಾಂತೀಯ ಹಿಂದೂ ಮಹಾಸಭಾದ ಅಧ್ಯಕ್ಷ ಶ್ರೀಮಂತ ಎಂ.ಜಿ.ಚಿಟಾನಿಸ್, ಶಾಸಕರು, ಚಿಟ್ನವಿಸ್‌ಪುರ, ನಾಗ್ಪುರ, ಮಧ್ಯಪ್ರಾಂತ ಅವರಿಗೆ ಕಳಿಸಬೇಕು. 28–06–40.”

ಮುಖ್ಯವಾಗಿ, ಹೆಡ್ಗೆವಾರ್ ಅವರನ್ನು ಸಾವರ್ಕರ್ ಅವರು ‘ಹಿಂದೂ ಸಂಘಟಕ’ ಎಂದು ಉಲ್ಲೇಖಿಸುತ್ತಾರೆ, ಸಾಮಾನ್ಯವಾಗಿ ಆ ಪದವನ್ನು ಹಿಂದೂ ಮಹಾಸಭಾದ ಸದಸ್ಯರಿಗೆ ಬಳಸುತ್ತಾರೆ.

1938 ರಿಂದ 1941 ರ ನಡುವಿನ ಅವಧಿಯಲ್ಲೇ ದೇಶದ ವಿವಿಧ ಭಾಗಗಳಲ್ಲಿ ನಡೆದ ಆರ್‌ಎಸ್‌ಎಸ್ ಕಾರ್ಯಕ್ರಮಗಳಿಗೆ ಸಾವರ್ಕರ್ ಅವರು ನಲವತ್ತಕ್ಕೂ ಹೆಚ್ಚು ಭೇಟಿ ನೀಡಿರುವುದನ್ನು ಭಿಡೆಯವರ ಹಿಂದೂ ಮಹಾಸಭಾದ ಸಾಕ್ಷ್ಯಪತ್ರಗಳ ಸಂಗ್ರಹವು ದಾಖಲಿಸುತ್ತದೆ. ಈ ಕಾರ್ಯಕ್ರಮಗಳಲ್ಲಿ ಸಾವರ್ಕರ್ ಮಾತನಾಡಿದ ವಿಷಯಗಳು: ‘ಮಿಲಿಟರಿ ತರಬೇತಿ’, ‘ಹಿಂದೂಗಳಲ್ಲಿ ಐಕಮತ್ಯ ಸಾಧಿಸಲು ಸಂಘ ಮಾಡುತ್ತಿರುವ ಕಾರ್ಯವನ್ನು ಮೆಚ್ಚುವುದು’, ‘ಸಂಘದ ಕಾರ್ಯಗಳ ಬಗ್ಗೆ ಅವರು ಇಟ್ಟಿರುವ ಭರವಸೆ ಮತ್ತು ನಂಬಿಕೆ’, ‘ಸಂಘವು ಪ್ರತಿನಿಧಿಸುವ ಮಹಾನ್ ಗುರಿಗಳು’, ‘ಭಾವೀ ಹಿಂದೂ ಪಕ್ಷದ ಕಾರ್ಯಕ್ರಮಗಳು’, ‘ಹಿಂದೂ ಸಂಘಟನಾ ಚಳವಳಿಯ ಭವಿಷ್ಯದ ಕಾರ್ಯಕ್ರಮಗಳು’, ‘(ಬ್ರಿಟಿಷರ)ಮಿಲಿಟರಿ ಪಡೆಗಳನ್ನು ಸೇರಲು ವಿದ್ಯಾರ್ಥಿಗಳಿಗೆ ಕರೆ ನೀಡುವುದು’. ಇಲ್ಲಿ ನಾವು ಗಮನಿಸಬೇಕಾದ ಬಹಳ ಮುಖ್ಯ ಅಂಶವೇನೆಂದರೆ ಸಾವರ್ಕರ್ ಅವರು ಆರ್‌ಎಸ್‌ಎಸ್ ಕಾರ್ಯಕರ್ತರಿಗೆ

ಪುಟ 07 ಕ್ಕೆ

ಬಿಜೆಪಿ ಸೋಲಿಸುವ ಭಿನ್ನದಾರಿಗಳ ನಡೆ ಯಾವ ಕಡೆ?

ಯು. ಬಸವರಾಜ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಕರ್ನಾಟಕಲ್ಲಿ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯಲು ಅನುಸರಿಸಬೇಕಾದ ಚುನಾವಣಾ ತಂತ್ರದ ಕುರಿತು ಬುದ್ಧಿಜೀವಿಗಳು, ದಲಿತ ಮತ್ತಿತರೆ ಸಂಘಟನೆಗಳು, ಎಡ ಶಕ್ತಿಗಳ ನಡುವೆ ಹಲವು ವಿಭಿನ್ನ ಅಭಿಪ್ರಾಯಗಳಿವೆ. ಗುರಿಯ ಬಗ್ಗೆ ಒಮ್ಮತವಿದ್ದರೂ ಸಾಧಿಸುವ ಕಾರ್ಯತಂತ್ರದ ಬಗ್ಗೆ ಭಿನ್ನ ಅಭಿಪ್ರಾಯಗಳು ಅವಾಗಿವೆ. ರಾಜ್ಯದ ರಾಜಕೀಯ ವಸ್ತುಸ್ಥಿತಿಯಲ್ಲಿ ಅನುಸರಿಸಬೇಕಾದ ವಾಸ್ತವಿಕ ನಿಲುಮೆ, ಕಾರ್ಯತಂತ್ರದ ಬಗೆಗಿನ ವಿಶ್ಲೇಷಣೆ ಈ ಲೇಖನದಲ್ಲಿ.

ಕೆಲವು ಮತೀಯ ಹಾಗೂ ಜಾತೀಯ ಸಂಘಟನೆಗಳನ್ನು ಬಿಟ್ಟರೆ, ರಾಜ್ಯದ ಬಹುತೇಕ ಎಡ ಮತ್ತು ಜಾತ್ಯಾತೀತ, ಪ್ರಜಾಸತ್ತಾತ್ಮಕ ಸಂಘಟನೆಗಳು ಹಾಗೂ ಪಕ್ಷಗಳು ಮತ್ತು ಕಾಂಗ್ರೆಸ್, ಜೆಡಿಎಸ್, ಆಪ್ ಮತ್ತಿತರೆ ಬಿಜೆಪಿಯೇತರ ಬಹುತೇಕ ಪಕ್ಷಗಳು, ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಬಾರದು ಎಂದು ಈ ವಿಧಾನಸಭಾ ಚುನಾವಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಈ ಒಂದು ವಿಷಯದಲ್ಲಿ ಎಲ್ಲರ ಅಭಿಪ್ರಾಯಗಳು ಸಮಾನ ಹಾಗೂ ಒಂದೇ ಆಗಿವೆ. ಇದು ಈಗಾಗಲೇ ಎಲ್ಲರಿಗೂ ತಿಳಿದಿರುವ ಸತ್ಯವಾಗಿದೆ. ಆದರೇ, ಈ ಶಕ್ತಿಗಳು ಬಿಜೆಪಿಯನ್ನು ಸೋಲಿಸಲು ಹಾಗೂ ಅದನ್ನು ಅಧಿಕಾರಕ್ಕೆ ಬರದಂತೆ ತಡೆಯಲು ಅವರವರು ಹಿಡಿದಿರುವ ದಾರಿಗಳು ಮಾತ್ರ ಬಿನ್ನ ಬಿನ್ನವಾಗಿವೆ. ಈ ಬಿನ್ನ ಭಿನ್ನವಾದ ದಾರಿಗಳು, ನಡೆಗಳು ಈ ಎಲ್ಲರ ಗುರಿಯನ್ನು ಈಡೇರಿಸಬಲ್ಲವೇ?!

ನಮ್ಮ ಮತದಾರರು ಈ ಚುನಾವಣೆಯಲ್ಲಿ ಈ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗಿದೆ ಮತ್ತು ಸರಿಯಾಗಿ ಉತ್ತರಿಸಿಕೊಂಡು ಮುಂದೆ ಸಾಗುವುದು ಉಚಿತವಾಗಿದೆ.

ಕಾಂಗ್ರೆಸ್ ಮತ್ತು ಕೆಲವು ಎಡ ಮತ್ತು ಜಾತ್ಯತೀತ, ಪ್ರಜಾಸತ್ತಾತ್ಮಕ ಪಕ್ಷಗಳು ಮತ್ತು ಸಂಘಟನೆಗಳಾದ ಸಿಪಿಐ, ಸರ್ವೋದಯ ಕರ್ನಾಟಕ, ದಲಿತ ಸಂಘಟನೆಗಳ ಐಕ್ಯ ಸಮಿತಿ, ಕೆಲ ಬುದ್ದಿಜೀವಿ ವಲಯಗಳು, ಕಾಂಗ್ರೆಸ್ ಒಂದೇ ಬಿಜೆಪಿಗೆ ಪರ್ಯಾಯವಾಗಿದೆ ಎನ್ನುತ್ತಿವೆ! ಇದನ್ನೇ ಪ್ರಚುರಿಸುತ್ತಿವೆ. ರಾಜ್ಯದ ಜೆಡಿಎಸ್ ನಂಬಲರ್ಹವಲ್ಲ(?). ಅದು ಬಿಜೆಪಿ ಜೊತೆ ಸಖ್ಯತೆ ಹೊಂದದಿರುವ ಕುರಿತು ಗ್ಯಾರಂಟಿ ಇಲ್ಲ! ಹೀಗಾಗಿ, ಬಿಜೆಪಿಗೆ, ಕಾಂಗ್ರೆಸ್ ಮಾತ್ರವೇ ಪರ್ಯಾಯವೆಂದು, ಕಾಂಗ್ರೆಸ್ ಜೊತೆ ಈ ಎಲ್ಲರೂ ಗುರುತಿಸಿಕೊಂಡು ಆ ಪಕ್ಷವನ್ನು ಗೆಲ್ಲಿಸಲು ಕ್ರಮವಹಿಸುತ್ತಿವೆ.

ರಾಜ್ಯದ ರಾಜಕೀಯ ಸನ್ನಿವೇಶ ಏನು ಹೇಳುತ್ತದೆ

ವಾಸ್ತವವಾಗಿ ಗಮನಿಸಿದಲ್ಲಿ ಬಿಜೆಪಿಯನ್ನು ಸೋಲಿಸಲು ಸ್ಪರ್ಧೆಯೊಡ್ಡುವ ಪಕ್ಷ ಕಾಂಗ್ರೆಸ್ ಮಾತ್ರವೇ ಆಗಿಲ್ಲ ಎಂಬ ಸತ್ಯವನ್ನು ಅದು ತೆರೆದು ತೋರುತ್ತದೆ. ಹಿಂದಿನ ಚುನಾವಣೆಯ ಫಲಿತಾಂಶವು ಸ್ಪಷ್ಟವಾಗಿ ಅದನ್ನು ಹೇಳುತ್ತದೆ. ಬಿಜೆಪಿ ಗೆದ್ದಿರುವುದು ಕೇವಲ 102 ಸ್ಥಾನಗಳಲ್ಲಿ ಮಾತ್ರವೇ ಆಗಿದೆ. 78 ಕ್ಷೇತ್ರಗಳಲ್ಲಿ ಮಾತ್ರ ಕಾಂಗ್ರೆಸ್ ಪಕ್ಷವು ಬಿಜೆಪಿ ಅಥವಾ ಕೆಲವೆಡೆ ಜೆಡಿಎಸ್ ಪಕ್ಷಗಳನ್ನು ಸೋಲಿಸಿದೆ. ಉಳಿದ 44 ಕ್ಷೇತ್ರಗಳಲ್ಲಿ ಬಿಜೆಪಿ ಅಥವಾ ಕಾಂಗ್ರೆಸ್ ಪಕ್ಷವನ್ನು ಸೋಲಿಸಿದವರಲ್ಲಿ ಜೆಡಿಎಸ್ ಪಕ್ಷವು ಸೇರಿದಂತೆ ಹಲವರಿದ್ದಾರೆ.

ಈ 44 ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಈ ಎರಡೂ ಪಕ್ಷಗಳು ಮತದಾರರಿಂದ ತಿರಸ್ಕರಿಸಲ್ಪಟ್ಟಿವೆ ಎಂಬುದನ್ನು ಗಮನಿಸಬೇಕು. ಮಾತ್ರವಲ್ಲ, ಇನ್ನು ಸುಮಾರು 20 ಕ್ಕೂ ಹೆಚ್ಚು ಕ್ಷೇತ್ರಗಳಿಗೂ ಹೆಚ್ಚಿನ ಪ್ರದೇಶದಲ್ಲಿ ಬಿಜೆಪಿಯನ್ನು ಸೋಲಿಸಬಲ್ಲ ಪಕ್ಷವೆಂದು ಗುರುತಿಸಲಾಗಿರುವ ಕಾಂಗ್ರೆಸ್ ಮೂರನೇ ಸ್ಥಾನದಲ್ಲಿರುವುದು ಕಂಡು ಬಂದಿದೆ.

ರಾಜ್ಯದ ರಾಜಕೀಯ ಸನ್ನಿವೇಶ ಏನು ಹೇಳುತ್ತದೆ. ವಾಸ್ತವವಾಗಿ ಗಮನಿಸಿದಲ್ಲಿ ಬಿಜೆಪಿಯನ್ನು ಸೋಲಿಸಲು ಸ್ಪರ್ಧೆಯೊಡ್ಡುವ ಪಕ್ಷ ಕಾಂಗ್ರೆಸ್ ಮಾತ್ರವೇ ಆಗಿಲ್ಲ ಎಂಬ ಸತ್ಯವನ್ನು ಅದು ತೆರೆದು ತೋರುತ್ತದೆ.

ಹೀಗಾಗಿ ಈ ಎಲ್ಲ 64 ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳ ವಿರುದ್ದ ಬಲವಾದ ಸ್ಪರ್ಧೆ ಒಡ್ಡಬಲ್ಲ ಮತ್ತು ಗೆಲ್ಲಬಲ್ಲ ಕಾಂಗ್ರೆಸ್ಸೇತರ ಈ ಪಕ್ಷಗಳಿಗೆ ಬೆಂಬಲ ನೀಡಬೇಕೇ ಅಥವಾ ಕುರುಡಾಗಿ ಕಾಂಗ್ರೆಸ್ ಪಕ್ಷಕ್ಕೆ ಮಾತ್ರವೇ ಬೆಂಬಲ ನೀಡಬೇಕೇ?! ಎಂಬ ಈ ಪ್ರಶ್ನೆಯನ್ನು ರಾಜ್ಯದ ಈ ವಾಸ್ತವಿಕ ರಾಜಕೀಯ ಸನ್ನಿವೇಶವು ಕೆಲವು ಪ್ರಗತಿಪರರು ಮುಂದಿಡುತ್ತಿದೆ.

ಕಾಂಗ್ರೆಸ್ ಅನ್ನೇ ರಾಜ್ಯದಾದ್ಯಂತ ಬೆಂಬಲಿಸಬೇಕೆನ್ನುವವರು ಹೇಳುವುದೇನು? 64 ಕ್ಷೇತ್ರಗಳಲ್ಲಿ ಜೆಡಿಎಸ್ ಮತ್ತಿತರರನ್ನು ಗೆಲ್ಲಿಸಲು ಕ್ರಮವಹಿಸಿದರೇ, ಜೆಡಿಎಸ್ ಮತ್ತೆ ಬಿಜೆಪಿ ಜೊತೆ ಕೈ ಜೋಡಿಸುತ್ತದೆ ಎಂಬುದಾಗಿದೆ. ಚುನಾವಣೆಯ ನಂತರ ಏನಾಗುತ್ತದೆ ಎಂದು ಈಗ ಹೇಳಲಾಗುತ್ತದೆಯೇ? ಏನೂ ಆಗಬಹುದು.

ಕಳೆದ ಚುನಾವಣೆಯ ನಂತರ ಜೆಡಿಎಸ್ ಪಕ್ಷವು ಕಾಂಗ್ರೆಸ್ ಜೊತೆ ಸೇರಿ ಸರಕಾರ ರಚಿಸಿದ್ದನ್ನು ನಾವು ನೋಡಿದ್ದೇವೆ. ಅವುಗಳೊಳಗಿನ ಅಸಂತೃಪ್ತಿಯನ್ನು ಬಳಸಿಕೊಂಡ ಬಿಜೆಪಿ, ಆಪರೇಷನ್ ಕಮಲದ ಮೂಲಕ ಬಲವಂತವಾಗಿ ಅಧಿಕಾರ ದುರುಪಯೋಗ ಮಾಡಿಕೊಂಡು ಸರಕಾರ ನಡೆಸಿದ್ದು ಆಗಿದೆ.

ಆದ್ದರಿಂದ ಚುನಾವಣೆಯ ನಂತರ ಸರಕಾರದ ರಚನೆ ಯಾವ ರೀತಿಯಲ್ಲಾದರೂ ಆಗಬಹುದು. ಚುನಾವಣೆಯ ನಂತರ



ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಕೆಲಸ ಜಾತ್ಯತೀತ ಪಕ್ಷಗಳೆಂದು ಗುರುತಿಸಿಕೊಳ್ಳುವ ಮುಖ್ಯವಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ಈ ಎರಡು ಪಕ್ಷಗಳ ಮೇಲಿರುತ್ತದೆ. ಅದಕ್ಕೆ ಈ ದಿನದ ರಾಜಕೀಯ ಸನ್ನಿವೇಶ ಪೂರಕವಾಗಿದೆ. ಒಕ್ಕೂಟ ಸರಕಾರದ ನೇತೃತ್ವವನ್ನು ಬಿಜೆಪಿಯೇ ವಹಿಸಿರುವುದರಿಂದ ಅದರ ದುರುಪಯೋಗ ಮತ್ತು ಅಪರೇಷನ್ ಕಮಲದ ಕಾರಣದಿಂದ ಬಿಜೆಪಿಯೇತರ ಶಾಸಕರು, ಎಲ್ಲಿ ಎಷ್ಠರ ಮಟ್ಟಿಗೆ ಗಟ್ಟಿಯಾಗಿ ನಿಲ್ಲಬಲ್ಲರೆಂಬುದು ಪ್ರಶ್ನಾರ್ಹವಾಗಿದೆ. ಅದೇನೇ ಇರಲಿ,

ಆದರೇ, ಜೆಡಿಎಸ್ ಪಕ್ಷವು ಬಿಜೆಪಿ ಜೊತೆ ಕೈ ಜೋಡಿಸಬಹುದೆಂದು ಊಹಿಸಿ, ಈ 64 ಕ್ಷೇತ್ರಗಳಲ್ಲಿ ಗೆಲುವು ಪಡೆಯಲಾಗದ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವುದು ಸರಿಯೇ?! ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ ಗೆ ಮತ ನೀಡಬೇಕೆಂಬ ರೀತಿಯ ತಪ್ಪು ಮಾಡಿದ್ದರಿಂದ ಸುಮಾರು 20ಕ್ಕೂ ಅಧಿಕ ಸ್ಥಾನಗಳಲ್ಲಿ ಬಿಜೆಪಿ ಗೆಲ್ಲುವಂತಾಯಿತೆಂದು ಮತ್ತು ಕಾಂಗ್ರೆಸ್ ಪಕ್ಷ ಮೂರನೇ ಸ್ಥಾನ ಪಡೆಯುಂತಾಯಿತೆಂದು ಅಲ್ಪ ಸಂಖ್ಯಾತ ಸಮುದಾಯದ ನಡುವೆ ಚರ್ಚೆ ನಡೆಯುತ್ತಿರುವುದನ್ನು ನಾವಿಲ್ಲಿ ಸಕಾರಾತ್ಮಕವಾಗಿ ಗುರುತಿಸಬೇಕಾಗಿದೆ.

ಈ ಅನುಭವದಂತೆ ಸುಮಾರು ಈ 20ಕ್ಕೂ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಗೆಲುವಿಗೆ ನೆರವಾಗಿರುವುದು ಅನುಭವವಲ್ಲವೇ? ಆ ನಿಲುಮೆಯು ಬಿಜೆಪಿ ದುರ್ಬಲಗೊಳ್ಳುವುದನ್ನು ತಡೆಯುವುದಿಲ್ಲವೇ?! ಈ ಕಾರಣದಿಂದಾಗಿಯೇ ಆಪರೇಷನ್ ಕಮಲದ ಹಾಗೂ ಅಧಿಕಾರ ದುರುಪಯೋಗದ ಮೂಲಕ ಅಧಿಕಾರ ಪಡೆಯಲು ಸಾಧ್ಯವಾದುದು.

ಈಗಿನ ಪ್ರಶ್ನೆ, ಬಿಜೆಪಿಯನ್ನು ದುರ್ಬಲಗೊಳಿಸುವುದೋ ಅಥವಾ ಬಿಜೆಪಿ ಮತ್ತೊಂದು ಪಕ್ಷದ ಜೊತೆ ಸೇರಿ ಸರಕಾರ ರಚಿಸುವುದನ್ನು ತಡೆಯುವುದೋ? ಈಗಿನ ಪ್ರಶ್ನೆ ಇರುವುದು ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿ ದುರ್ಬಲ ಗೊಳಿಸುವುದಾಗಿದೆ. ಒಟ್ಟಾರೆ ಆಪರೇಷನ್ ಕಮಲದ ಮೂಲಕವೂ ಸೇರಿ ಅದು ಸ್ವತಂತ್ರವಾಗಿ ಸರಕಾರ ರಚಿಸದಂತೆ ದುರ್ಬಲ ಗೊಳಿಸುವುದೇ ಆಗಿದೆ.

ಮತ್ತೊಂದು ವಿಚಾರವನ್ನು ಇಲ್ಲಿ ಗಮನಿಸಬೇಕಾಗಿದೆ. ಬಿಜೆಪಿ ಹಾಗೂ ಕಾಂಗ್ರೆಸ್ಸೇತರ ಮೂರನೆ ಅಥವಾ ಇತರೆ ರಾಜಕೀಯ ರಚನೆ ಬೆಳೆಯುವುದು, ರೂಪುಗೊಳ್ಳುವುದು ರಾಜ್ಯಕ್ಕೆ ಅವಶ್ಯವಿಲ್ಲವೆಂದು ಭಾವಿಸಲಾಗುತ್ತಿದೆಯೇ? ಖಂಡಿತಾ ಅವರ್ಯಾರೂ ಈ ರೀತಿ ಆಲೋಚಿಸುತ್ತಿದ್ದಾರೆಂದು ಭಾವಿಸಬೇಕಾಗಿಲ್ಲ. ಖಂಡಿತಾ ಆ ಎಲ್ಲರು ಪರ್ಯಾಯ ರಾಜಕಾರಣ ಬಯಸುವವರೇ.

ನಿಜ, ಪರ್ಯಾಯದ ಕಡೆ ಸಾಗಬೇಕೆಂದರೆ ದೊಡ್ಡ ಬಂಡವಾಳಿಗರು ಮತ್ತು ಕಾರ್ಪೊರೇಟ್ ಸಂಸ್ಥೆಗಳ ಲೂಟಿಗಾಗಿ ಕಾರ್ಯ ನಿರ್ವಹಿಸುತ್ತಿರುವ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ದುರ್ಬಲಗೊಳ್ಳುವುದು ಅವಶ್ಯವಿವೆ. ಈ ಪ್ರಕ್ರಿಯೆ ಈಗಾಗಲೇ ಬೆಳೆದು ಬಂದಿದೆ. ಅದಾಗಲೇ ದೇಶದಾದ್ಯಂತ ತೆಲಂಗಾಣ, ಆಂದ್ರಪ್ರದೇಶ, ತಮಿಳುನಾಡು, ಬಿಹಾರ, ಉತ್ತರ ಪ್ರದೇಶ ಮುಂತಾದ ಹಲವು ರಾಜ್ಯಗಳಲ್ಲಿ ಪ್ರಾದೇಶಿಕ ಬಂಡವಾಳದಾರ ಪಕ್ಷಗಳು ಬೆಳೆದುಬಂದಿವೆ. ಅವುಗಳು ಈ ಮೊದಲು ಎಡಪಕ್ಷಗಳು ಪ್ರಭಲವಾಗಿರುವಾಗ ಎಡ ಪಕ್ಷಗಳ ಜೊತೆ, ನಂತರ ಒಕ್ಕೂಟ ಸರಕಾರದ ಆಡಳಿತ ಪಕ್ಷಗಳ ಜೊತೆ ಸೇರಿರುವುದನ್ನು ಕಾಣುತ್ತೇವೆ. ಇದೂ ಹೀಗೆಯೇ! ಪ್ರಾದೇಶಿಕ ಪಕ್ಷಗಳ ಜೊತೆಗಿನ ಜನ ಚಳುವಳಿಗಳು ಜನ ಪರ್ಯಾಯಕ್ಕೆ ಹಾದಿ ಮಾಡಿಕೊಡಲಿವೆ. ಈ ಕಾರಣಕ್ಕಾಗಿಯೇ ಎಡ ಪಕ್ಷಗಳ ನೇತೃತ್ವದಲ್ಲಿದ್ದ ಬಿಜೆಪಿ ಹಾಗೂ ಕಾಂಗ್ರೆಸ್ಸೇತರ ರಾಜಕೀಯವನ್ನು ದುರ್ಬಲಗೊಳಿಸುವ ಹುನ್ನಾರ ದೇಶದಲ್ಲಿ ಬೆಳೆದು ಬಂದಿತು.

ಮತ್ತೊಂದು ವಿಚಾರ: ಹೀಗೆ, ಕಾಂಗ್ರೆಸ್ಸೇತರ ಪಕ್ಷಗಳನ್ನು ದುರ್ಬಲಗೊಳಿಸುವುದರಿಂದ ದೇಶದ ದೊಡ್ಡ ಬಂಡವಾಳಿಗರ ಮತ್ತು ಬಿಜೆಪಿಯ ತಂತ್ರ ಫಲಿತಕ್ಕೆ ನೆರವಾದಂತಾಗುವುದಿಲ್ಲವೆ? ದೇಶದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಇದನ್ನೇ ಬಯಸುತ್ತಿರುವುದಲ್ಲವೇ? ಅವುಗಳ ಆಶಯ, ದೇಶದ ರಾಜಕಾರಣದಲ್ಲಿ ಎರಡು ಪಕ್ಷಗಳ ವ್ಯವಸ್ಥೆ ಇರಲಿ ಎಂಬುದೇ ಆಗಿದೆ. ನಮ್ಮ ಈ ನಿಲುಮೆ ಇದಕ್ಕೆ ಇಂಬು ಗೊಟ್ಟಂತಾಗುವುದಿಲ್ಲವೇ?

ಇದು ಸಿಪಿಐಎಂ ನ ಸೈದ್ಧಾಂತಿಕ ರಾಜಿಯೇ?!

ಖಂಡಿತಾ ಅಲ್ಲ. ಇದು, ಕರ್ನಾಟಕದ ವಾಸ್ತವಿಕ ರಾಜಕಾರಣ ಮತ್ತು ಪರ್ಯಾಯ ರಾಜಕಾರಣ ರೂಪುಗೊಳ್ಳುವ ಪಥದ ಅರಿವಿನ ಕೊರತೆಯಿಂದ ಸಿಪಿಐಎಂ ಮೇಲೆ ಮಾಡುವ ಆರೋಪವಷ್ಟೇ.

ಜೆಡಿಎಸ್ ಪಕ್ಷವು ಈ ಚುನಾವಣೆಯಲ್ಲಿ ಒಂದೆರಡು ಕ್ಷೇತ್ರಗಳಲ್ಲಿ ಸಿಪಿಐಎಂ ಪಕ್ಷವನ್ನು ಬೆಂಬಲಿಸುತ್ತಿರುವುದರಿಂದ ಅವರ ಪರವಾಗಿ ಮಾತನಾಡುತ್ತಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐಎಂ ನ್ನು ಜೆಡಿಎಸ್ ಬೆಂಬಲಿಸಿರಲಿಲ್ಲ. ಜೆಡಿಎಸ್ ಸ್ಪರ್ಧೆಯ ಕಾರಣದಿಂದ ಬಾಗೇಪಲ್ಲಿ ಕ್ಷೇತ್ರದಲ್ಲಿ ಸೋಲಬೇಕಾಯ್ತು. ಆದಾಗಲು ಅಂದಿನ ರಾಜಕೀಯ ನಿಲುಮೆಯಲ್ಲಿ ಯಾವುದೇ ಬದಲಾವಣೆ ಇರಲಿಲ್ಲ. ಕೇವಲ ಒಂದೆರಡು ಕ್ಷೇತ್ರಗಳ ಅಧಿಕಾರದ ಕಾರಣದಿಂದ ಸಿಪಿಐಎಂ ರಾಜ್ಯದ ಮತ್ತು ಪರ್ಯಾಯ ರಾಜಕಾರಣದ ಹಿತಾಸಕ್ತಿಯನ್ನು ಬಿಟ್ಟುಕೊಡುವಷ್ಟು ದಿವಾಳಿತನ ಹೊಂದಿಲ್ಲ.

ಹೌದು, ಕೆಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು, ಪ್ರಗತಿಪರರು ತಮ್ಮ ಹೆಜ್ಜೆಯನ್ನು ಸರಿಯಾದ ಕಡೆ ತಿರುಗಿಸಲು ಈಗಲೂ ಕಾಲ ಮಿಂಚಿಲ್ಲ.

ವ್ಹಿ.ಪಿ. ಕುಲಕರ್ಣಿ ನಿಧನ; ಶೋಷಿತರು–ನೊಂದವರ ಒಡಲಾಳದ ಅಗ್ನಿಕುಂಡವಾಗಿದ್ದ ಹಿರಿಯ ಜೀವಕ್ಕೆ ಸಿಪಿಐ(ಎಂ) ಕಂಬನಿ

ರಾಜ್ಯದ ಹಿರಿಯ ರೈತರ, ಕಾರ್ಮಿಕರ ಮುಖಂಡ ಕಾಮ್ರೇಡ್ ವ್ಹಿ.ಪಿ. ಕುಲಕರ್ಣಿ ಏಪ್ರಿಲ್ 28, 2023 ರಂದು ಬೆಳಗಿನ ರಾತ್ರಿ 3 ಗಂಟೆಗೆ ಅವರ ಸ್ವಗ್ರಾಮ ಬೆಳಗಾವಿ ಜಿಲ್ಲೆ ರಾಮದುರ್ಗದ ಮುದೇನಕೊಪ್ಪದಲ್ಲಿ ನಿಧನರಾದರು. ಅವರಿಗೆ 70 ವರ್ಷ ವಯಸ್ಸಾಗಿತ್ತು. ತನ್ನ ಬಾಲ್ಯದಿಂದಲೇ ಶೋಷಿತರ ಪರವಾದ ಅಗ್ನಿಕುಂಡವನ್ನು ತನ್ನ ಒಡಲಲ್ಲಿ ಸದಾ ಇಟ್ಟುಕೊಂಡು, ನೊಂದವರಿಗೆ ತನ್ನ ಕೊನೆ ಉಸಿರಿರುವವರೆಗೂ ನ್ಯಾಯಕೊಡಿಸಲು ಯತ್ನಿಸಿದ ನಾಯಕನಿಗೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್ ವಾದಿ) ರಾಜ್ಯ ಸಮಿತಿ ತನ್ನ ಭಾವಪೂರ್ಣ ನಮನಗಳನ್ನು ಸಲ್ಲಿಸಿದೆ. ವಿ. ಪಿ. ಕುಲಕರ್ಣಿಯವರ ಸಾವು ಕರ್ನಾಟಕದ ದುಡಿಯುವ ವರ್ಗದ ಚಳವಳಿಗೆ ಅಪಾರವಾದ ನಷ್ಟವನ್ನು ಉಂಟು ಮಾಡಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕಂಬನಿ ಮಿಡಿದಿದೆ. ಅವರು ಕಟ್ಟಿ ಬೆಳೆಸಿದ ಎಲ್ಲ ಜನಪರ ಹೋರಾಟಗಳನ್ನು ಮುನ್ನಡೆಸುವ ದೃಢ ನಿರ್ಧಾರ ಮಾಡಿದೆ.

ಇತ್ತೀಚಿನ ಕೆಲ ವರ್ಷಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಪತ್ನಿ ಶ್ರೀಮತಿ ತಾರಾ ಮಕ್ಕಳಾದ ನಿತಿನ್ ಹಾಗೂ ನಿಖಿಲ್ ಸೇರಿ ಬಂಧುಗಳು ಹಾಗೂ ಅಪಾರ ಸಂಖ್ಯೆಯ ಕಮ್ಯುನಿಸ್ಟ್ ಚಳವಳಿಯ ಕಾರ್ಯಕರ್ತರು ಒಡನಾಡಿಗಳನ್ನು ಅವರು ಅಗಲಿದ್ದಾರೆ.

‘ಬಂಡೆಪ್ಪ’ ಕುಲಕರ್ಣಿಯವರ ಹೋರಾಟದ ದಾರಿ

1970 ರಿಂದ 1973ರ ವರೆಗೆ ಧಾರವಾಡದ ಟೈವಾಕ್ ವಾಚ್ ಕಂಪನಿಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುವಾಗಲೇ ಕಮ್ಯೂನಿಸ್ಟ್ ಸಿದ್ಧಾಂತಕ್ಕೆ ಮಾರುಹೋದ ಕುಲಕರ್ಣಿಯವರು, 1977 ರಲ್ಲಿ ಬೆಂಗಳೂರಿನ ಕಮ್ಯೂನಿಸ್ಟ್ ಪಕ್ಷದ ಕಛೇರಿಗೆ ಹೋಗಿ ಪಕ್ಷದ ಸದಸ್ಯತ್ವ ಪಡೆದುಕೊಂಡರು. ಬೆಂಗಳೂರಿನಲ್ಲಿ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸಿದರು. ಹಲವು ವರ್ಷಗಳ ಕಾಲ ಐಕ್ಯರಂಗ ವಾರಪತ್ರಿಕೆಯ ಜವಾಬ್ದಾರಿ ಹೊಂದಿ, ಅದನ್ನು ನಿರಂತರವಾಗಿ ಪ್ರಕಟಿಸುವ ಕೆಲಸ ಮಾಡಿದರು. ಇದೇ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಸಂಗಾತಿಗಳ ಸಮ್ಮುಖದಲ್ಲಿ ಶ್ರೀಮತಿ ತಾರಾ ಅವರನ್ನು ಸರಳ ಮದುವೆಯಾದರು.

1984 ರಲ್ಲಿ ಕಮ್ಯೂನಿಸ್ಟ್ ಪಕ್ಷದ ಸೂಚನೆಯಂತೆ ರಾಮದುರ್ಗಕ್ಕೆ ಬಂದು ಅಲ್ಲಿ ಪಕ್ಷದ ಚಟುವಟಿಕೆ ಪ್ರಾರಂಭಿಸಿದರು. ವಾಹನ ಚಾಲಕರ ಸಂಘ ಕಟ್ಟಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಟ ನಡೆಸಿದರು.

1987 ರಲ್ಲಿ ಪುರಸಭೆಯ ನೌಕರರನ್ನು ಒಂದುಗೂಡಿಸಿ ನಗರದಲ್ಲಿ ಮಲಹೊರುವ, ಮೂತ್ರ ಹೊತ್ತೊಯ್ಯುವ ಹೀನ ಕೆಲಸದ ವಿರುದ್ದ ಹೋರಾಟ ನಡೆಸಿ, ದಲಿತರಿಗೆ ಘನತೆಯಿಂದ ಬದುಕುವ ಪರಿಸ್ಥಿತಿ ನಿರ್ಮಾಣ ಮಾಡಿದ್ದು, ಮಾನವ ಕುಲಕ್ಕೆ ಸಂದ ಜಯವಾಗಿತ್ತು. ಇದರ ಭಾಗವಾಗಿಯೇ ರಾಮದುರ್ಗ ಪುರಸಭೆಗೆ ಕುಲಕರ್ಣಿ ಆಯ್ಕೆಯಾಗಿದ್ದರು.

1988 ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಅಡಿಯಲ್ಲಿ, ಅರಣ್ಯಭೂಮಿ ಹಾಗೂ



ಸರಕಾರಿ ಭೂಮಿ ಅತಿಕ್ರಮಣ ಮಾಡಿ, ಸಾಗುವಳಿ ಮಾಡುತ್ತಿರುವ ರೈತರನ್ನು ಸಂಘಟಿಸಿ, ನಿರಂತರವಾಗಿ ಹೋರಾಟ ಮಾಡಿ, ನೂರಾರು ಜನರಿಗೆ ಹಕ್ಕುಪತ್ರ ಕೊಡಿಸುವಲ್ಲಿ ಕುಲಕರ್ಣಿ ಪಾತ್ರ ಸ್ಮರಣೀಯವಾದುದ್ದು.

ಹುಕ್ಕೇರಿ ತಾಲೂಕಿನ ಕಣಗಲಾದಲ್ಲಿರುವ ಹಿಂದುಸ್ಥಾನ ಲೇಟೇಕ್ಸ್ ಕಾರ್ಖಾನೆಯಲ್ಲಿನ ಕಾರ್ಮಿಕರನ್ನು ಸಂಘಟಿಸಿ, ಕಾರ್ಮಿಕ ಖಾಯ್ದೆಗಳ ಜಾರಿಗೆ ಒತ್ತಾಯಿಸಿ, ಕಾರ್ಖಾನೆ ಮುಂದೆ ಆಮರಣ ಉಪವಾಸ ಸತ್ಯಾಗ್ರಹ ನಡೆಸಲು ಮುಂದಾದರು. ಇದರಿಂದ ಕುಪಿತರಾದ ಮಾಲಿಕವರ್ಗ ಪೋಲೀಸರ ಸಹಾಯದಿಂದ ಕುಲಕರ್ಣಿಯವರನ್ನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆಂದು ಸುಳ್ಳು ಕೇಸು ದಾಖಲಿಸುವ ಮೂಲಕ ಹಿಂಡಲಗಾ ಜೈಲಿಗೆ ಅಟ್ಟಿದರು. ಜೈಲಿನಲ್ಲಿಯೂ ಕೈದಿಗಳಿಗೆ ಸರಿಯಾದ ಆಹಾರ ಪೂರೈಸಬೇಕೆಂದು ಅವರು ಹೋರಾಟ ನಡೆಸಿದರು. ಜೈಲಿನಿಂದ ಹೊರಬಂದ ನಂತರ ಹೋರಾಟದ ಮೂಲಕ ಹಿಂದುಸ್ಥಾನ ಲೇಟೇಕ್ಸ್ ಕಂಪನಿಯ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿದ್ದು, ಕಮ್ಯೂನಿಸ್ಟ್ ಚಳುವಳಿಗೆ ಸಿಕ್ಕ ದೊಡ್ಡ ಜಯವಾಗಿತ್ತು.

ರಾಮದುರ್ಗದಲ್ಲಿ ಬೆನಕನಮಡ್ಡಿ ಎಂಬಲ್ಲಿ (ಪ್ರಸ್ತುತ ಭಾಗ್ಯನಗರ) ಪುರಸಭೆಯ ಜಾಗದಲ್ಲಿ ಹಾಕಿಕೊಂಡಿದ್ದ ವಸತಿರಹಿತ ಬಡವರನ್ನು ಗುಡಿಸಲುಗಳಿಂದ ಒಕ್ಕಲೆಬ್ಬಿಸಲು ಬಂದಾಗ, ನಿರ್ಗತಿಕ ವಸತಿರಹಿತರ ಸಂಘಟನೆ ಕಟ್ಟಿ ಪುರಸಭೆ ಎದುರು ಆಮರಣ ಉಪವಾಸ ಸತ್ಯಾಗ್ರಹ ನಡೆಸಿ ಗೆಲುವು ಕಂಡರು. ಮುಂದೆ ಆ ಪ್ರದೇಶದಲ್ಲಿ ವಿದ್ಯುತ್, ನೀರು ಮತ್ತು ಪಡಿತರ ಚೀಟಿಗಾಗಿ ನಿರಂತರ ಹೋರಾಟ ನಡೆಸಿ, ಅಲ್ಲಿಯ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡಿಸಲು ಅವಿರತ ಪರಿಶ್ರಮಪಟ್ಟಿದ್ದಾರೆ.

ರಾಮದುರ್ಗದಲ್ಲಿ ವಿದ್ಯಾರ್ಥಿಗಳ ಸಂಘಟನೆ ಕಟ್ಟಿ (ಎಸ್.ಎಫ್.ಐ) ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಶುಲ್ಕವನ್ನು ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಹೋರಾಟ, ರಾಮದುರ್ಗದ ಈಗಿರುವ ವಿದ್ಯಾ ಪ್ರಸಾರಕ ಸಮಿತಿಯ ಎದುರಿಗಿರುವ ಹಿಂದಿನ ಭಾವ ಸರಕಾರದ ಖುಲ್ಲಾ ಜಾಗೆಯ ಮಾರಾಟದ ವಿರುದ್ದ ಹೋರಾಡಿ, ಆಮರಣ ಉಪವಾಸ ಸತ್ಯಾಗ್ರಹ ನಡೆಸಿ, ವಿದ್ಯಾ ಪ್ರಸಾರಕ ಸಮಿತಿಯವರಿಗೆ ಖುಲ್ಲಾ ಜಾಗೆ ಬಿಟ್ಟು ಕೊಡುವಂತೆ ಮಾಡಿದರು.


ರಾಮದುರ್ಗ ತಾಲೂಕಿನ ಬೀಡಿ ಕಾರ್ಮಿಕರನ್ನು(ಹೆಚ್ಚಾಗಿ ಮುಸ್ಲಿಂ ಮಹಿಳೆಯರು) ಸಂಘಟಿಸಿ, ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನ, ಪ್ರತಿವರ್ಷ ಬೋನಸ್ ಹಾಗೂ ಭವಿಷ್ಯ ನಿಧಿ ಜಾರಿ ಮಾಡಬೇಕೆಂದು ಕಾರ್ಖಾನೆ ಮುಂದೆ ವಾರಗಟ್ಟಲೇ ಹೋರಾಟ ನಡೆಸಿ ಜಯಶಾಲಿಯಾದರು. ಕಾರ್ಖಾನೆ ಮಾಲೀಕರು ಮತ್ತು ಮೂಲಭೂತವಾದಿಗಳು ಇವರ ಮೇಲೆ (1998ರಲ್ಲಿ) ಮರಣಾಂತಿಕ ಹಲ್ಲೆ ಮಾಡಿ, ಇವರು ಊರು ಬಿಟ್ಟು ಹೋಗುವಂತೆ ಕುತಂತ್ರ ಮಾಡಿದ್ದರು. ಕಮ್ಯೂನಿಸ್ಟ್ ಸಿದ್ಧಾಂತಕ್ಕೆ ಬದ್ಧರಾದ ಕುಲಕರ್ಣಿಯವರು ಇವರ ಯಾವ ಬೆದರಿಕೆಗೂ ಹೆದರದೇ ರೈತರ, ಕಾರ್ಮಿಕರ ಹೋರಾಟವನ್ನು ಮುಂದುವರೆಸಿದರು. ಹೋರಾಟದ ಪರಿಣಾಮವಾಗಿ ಇತ್ತೀಚೆಗೆ ಬೀಡಿ ಕಾರ್ಮಿಕರಿಗೆ 300 ಮನೆಗಳನ್ನು ಮಂಜೂರು ಮಾಡಿಸುವಲ್ಲಿ ಯಶಸ್ವಿಯಾದರು.

ತಾಲೂಕಿನಲ್ಲಿ ಪಂಪಸೆಟ್ ರೈತರ ಸಂಘಟನೆ ಕಟ್ಟಿ ಅದನ್ನು ರಾಜ್ಯ ಮಟ್ಟಕ್ಕೆ ಕೊಂಡೊಯ್ದರು. 2003 ರಲ್ಲಿ ಎಸ್.ಎಂ ಕೃಷ್ಣ ಸರಕಾರ ರೂ. 989 ಕೋಟಿ ರೈತರ ವಿದ್ಯುತ್ ಬಿಲ್ ಮನ್ನಾ ಮಾಡಿಸಿದ್ದು ಇವರ ಅವಿರತ ಶ್ರಮದ ಫಲವಾಗಿದೆ. ನಂತರ ಭಾಗ್ಯಜ್ಯೋತಿ, ಕುಟೀರಜ್ಯೋತಿ, ವಿದ್ಯುತ್ ಬಿಲ್ ಮನ್ನಾ ಹಾಗೂ ನಿಜವಾದ ಬಡವರಿಗೆ ಬಿ.ಪಿ.ಎಲ್. ಪಡಿತರ ಚೀಟಿ ಇರಬೇಕೆಂದು ನಿರಂತರ 1 ತಿಂಗಳ (2006) ಹೋರಾಟ ನಡೆಸಿ, ಸುಮಾರು 30 ಸಾವಿರ ಪಡಿತರ ಚೀಟಿ ಪಡದೇ ಚಳುವಳಿ ವಾಪಸ್ ಪಡೆದಿದ್ದು ಬೆಳಗಾವಿ ಜಿಲ್ಲೆಯ ಇತಿಹಾಸವಾಗಿದೆ.

1996 ರಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದರು. ಬಳಿಕ ಅದರ ರಾಜ್ಯ ಅಧ್ಯಕ್ಷರಾದರು. ಗ್ರಾಮ ಪಂಚಾಯತ ನೌಕರರ ರಾಜ್ಯ ಮಟ್ಟದ ಹೋರಾಟ ನಡೆಸಿ ಕನಿಷ್ಟ ವೇತನ ಜಾರಿಗೊಳಿಸಲು ನಿರಂತರವಾಗಿ ಹೋರಾಟ ನಡೆಸಿದರು. ಬೆಳಗಾವಿ ಜಿಲ್ಲೆಯಲ್ಲಿ ಅಂಗನವಾಡಿ ನೌಕರರ ಸಂಘ, ಅಕ್ಷರ ದಾಸೋಹ ನೌಕರರ ಸಂಘ, ಕಟ್ಟಡ ಕಾರ್ಮಿಕರ ಸಂಘ, ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಂಘ ಹೀಗೆ ಹತ್ತು ಹಲವಾರು ಸಂಘಟನೆಗಳನ್ನು ಕಟ್ಟಿ ಕಾರ್ಮಿಕರ, ರೈತರ, ದಲಿತರ ಪರ ನಿರಂತರವಾಗಿ ಧ್ವನಿ ಎತ್ತುವಲ್ಲಿ ವಿ.ಪಿ ಕುಲಕರ್ಣಿ ಯವರು ಅವಿರತವಾಗಿ ದುಡಿದಿದ್ದಾರೆ.

ಸಿ.ಪಿ.ಐ(ಎಂ) ರಾಜ್ಯ ಸಮಿತಿ ಪರವಾಗಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೋಪಾಲಕೃಷ್ಣ ಹರಳಹಳ್ಳಿ ಶ್ರದ್ಧಾಂಜಲಿ ಸಲ್ಲಿಸಿದರು. ರಾಜ್ಯ ಸಮಿತಿ ಸದಸ್ಯರಾದ ಆರ್. ಎಸ್. ಬಸವರಾಜು, ಧಾರವಾಡ ಸಿ.ಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಹೇಶ್ ಪತ್ತಾರ್ ಭಾಗವಹಿಸಿದ್ದರು

ಕಾಂ. ಮೃದುಲ್ ಡೇ



ಸಿಪಿಐ(ಎಂ) ಕೇಂದ್ರ ಸಮಿತಿಯ ಮಾಜಿ ಸದಸ್ಯ ಮೃದುಲ್ ಡೇ ಏಪ್ರಿಲ್ 24 ರಂದು ನಿಧನರಾಗಿದ್ದಾರೆ. ಅವರು ಕೆಲಕಾಲದಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು. ಬಂಗಾಲದಲ್ಲಿ ಪಕ್ಷದ ದೈನಿಕ ‘ಗಣಶಕ್ತಿ’ಯಲ್ಲಿ ದೀರ್ಘ ಕಾಲ ದುಡಿದಿದ್ದ ಅವರಿಗೆ 76 ವರ್ಷ ವಯಸ್ಸಾಗಿತ್ತು.

ಅವಿಭಜಿತ ಬಂಗಾಳದ ಚಟ್ಟಗ್ರಾಮದಲ್ಲಿ ಜನಿಸಿದ ಮೃದುಲ್ ಕಾಲೇಜು ವಿದ್ಯಾರ್ಥಿಯಾಗಿ ವಿದ್ಯಾರ್ಥಿ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು ಮತ್ತು ಶೀಘ್ರದಲ್ಲೇ ಪಕ್ಷದ ಸದಸ್ಯರಾದರು. 1960 ರ ದಶಕ ಮತ್ತು 1970 ರ ದಶಕದ ಆರಂಭದಲ್ಲಿ ಪೊಲೀಸ್ ದೌರ್ಜನ್ಯಗಳ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ಅವರು ಎರಡು ಬಾರಿ ಜೈಲುವಾಸ ಅನುಭವಿಸಿದರು ಮತ್ತು ಡಾರ್ಜಿಲಿಂಗ್ ಜಿಲ್ಲೆಯಿಂದ ಸ್ವಲ್ಪ ಸಮಯದವರೆಗೆ ಹೊರಹಾಕಲ್ಪಟ್ಟರು ಕೂಡ.

ನಂತರ, ಮೃದುಲ್ ಡೇ ಕೋಲ್ಕತ್ತಾಗೆ ಸ್ಥಳಾಂತರಗೊಂಡರು ಮತ್ತು ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾದರು, ಪಕ್ಷದ ಪತ್ರಿಕೆ ‘ಗಣಶಕ್ತಿ’ ಸೇರಿದರು. ಸಂಜೆ ಪತ್ರಿಕೆಯಾಗಿದ್ದ ಅದನ್ನು ಬೆಳಿಗ್ಯೆಯ ದೈನಿಕವಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ನುರಿತ ವರದಿಗಾರರಾಗಿದ್ದ ಅವರು ದೀರ್ಘಕಾಲದವರೆಗೆ ಪತ್ರಿಕೆಯ ಮುಖ್ಯ ವರದಿಗಾರರಾಗಿ ಕೆಲಸ ಮಾಡಿದರು.

ಅವರು 1985 ರಲ್ಲಿ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಗೆ ಆಯ್ಕೆಯಾದರು ಮತ್ತು 2001 ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದರು. 2008 ರಲ್ಲಿ ಪಕ್ಷದ ಕೊಯಮತ್ತೂರು ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಗೆ ಆಯ್ಕೆಯಾಗಿ 2022 ರ ವರೆಗೆ ಸದಸ್ಯರಾಗಿ ಮುಂದುವರೆದರು.

ಅಧ್ಯಯನಶೀಲರಾಗಿದ್ದ ಕಾಂ. ಮೃದುಲ್ ಡೇ ಪಕ್ಷದ ರಾಜಕೀಯ ಶಿಕ್ಷಣಕ್ಕಾಗಿ ಅನೇಕ ಪುಸ್ತಕಗಳು ಬಳಸುತ್ತಿದ್ದರು. ಪುಸ್ತಕಗಳನ್ನು ಬರೆದಿದ್ದಾರೆ.

ಅವರ ಪತ್ನಿ ಸ್ವಪ್ನಾ, ಕುಟುಂಬ ಸದಸ್ಯರು ಹಾಗೂ ಒಡನಾಡಿಗಳಿಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಆಳವಾದ ಸಂತಾಪ ವ್ಯಕ್ತಪಡಿಸಿದೆ.

ಕಾಂ. ಮದನ್ ಘೋಷ್

ಸಿಪಿಐ(ಎಂ) ಕೇಂದ್ರ ಸಮಿತಿಯ ಮಾಜಿ ಸದಸ್ಯ ಮದನ್ ಘೋಷ್ ಅವರ ನಿಧನಕ್ಕೆ ಪೊಲಿಟ್‌ಬ್ಯುರೊ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಅವರು ಎಪ್ರಿಲ್ 21ರ ಬೆಳಗ್ಗೆ ಪಶ್ಚಿಮ ಬಂಗಾಳದ ಬರ್ದ್ವಾನ್ ಪಟ್ಟಣದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು.

ಮದನ್ ಘೋಷ್ ಅವರು 1959 ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. 1960 ಮತ್ತು 70 ರ ದಶಕಗಳಲ್ಲಿ, ಅರೆ–ಫ್ಯಾಸಿಸ್ಟ್ ಶಕ್ತಿಗಳು ಪಶ್ಚಿಮ ಬಂಗಾಳವನ್ನು ಆಳುತ್ತಿದ್ದಾಗ, ಅವರು ಎರಡೂವರೆ ವರ್ಷಗಳ ಕಾಲ ಭೂಗತರಾಗಿದ್ದಾಗಲೂ ಪಕ್ಷಕ್ಕೆ ಬೆಂಬಲವಾಗಿ ಜನರನ್ನು ಸಕ್ರಿಯವಾಗಿ ಸಜ್ಜುಗೊಳಿಸಿದರು.

ಅವರು 1992 ರಲ್ಲಿ ಸಿಪಿಐ (ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸದಸ್ಯರಾಗಿ ಮತ್ತು 2002 ರಲ್ಲಿ ರಾಜ್ಯ ಕಾರ್ಯದರ್ಶಿಮಂಡಳಿಯ ಸದಸ್ಯರಾಗಿ ಆಯ್ಕೆಯಾದರು. 2008 ರಲ್ಲಿ ಕೊಯಮತ್ತೂರಿನಲ್ಲಿ ನಡೆದ ಪಕ್ಷದ 19ನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು.

ಮದನ್ ಘೋಷ್ ಅವರು ಕರ್ಷಕ ಚಳುವಳಿಯ ಒಬ್ಬ ನಾಯಕರಾಗಿದ್ದರು ಮತ್ತು ಪಶ್ಚಿಮ ಬಂಗಾಳ ರೈತ ಸಂಘ(ಪಿಬಿಕೆಎಸ್)ದ



ಅಧ್ಯಕ್ಷರಾಗಿ ಮತ್ತು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಉಪಾಧ್ಯಕ್ಷರಾಗಿ ದೇಶಾದ್ಯಂತ ಚಳುವಳಿಯನ್ನು ಹರಡುವಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದರು. ಬರ್ದ್ವಾನ್ ಜಿಲ್ಲಾ ಪರಿಷತ್ತಿನ ಸಭಾಧಿಪತಿಯಾಗಿಯೂ ಕೆಲಕಾಲ ಸೇವೆ ಸಲ್ಲಿಸಿದ್ದರು.

ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಸಿದ್ಧಾಂತಕ್ಕೆ ಬದ್ಧರಾಗಿದ್ದ ಅವರು ಸರಳ ಮತ್ತು ಜನಸಾಮಾನ್ಯರೊಂದಿಗೆ ಬೆರೆಯುವ ವ್ಯಕ್ತಿತ್ವಕ್ಕೆ ಹೆಸರುವಾಸಿಯಾಗಿದ್ದರು.

ಅವರ ಪತ್ನಿ ಮತ್ತು ಅವರ ಕುಟುಂಬದ ಇತರ ಸದಸ್ಯರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.



ಸಂಗಾತಿ ವಿ.ಪಿ.ಕುಲಕರ್ಣಿ ಏಪ್ರಿಲ್ 28, 2023ರಂದು ನಮ್ಮನ್ನಗಲಿದ್ದಾರೆ. ಬೆಳಗಾವಿ ಜಿಲ್ಲೆಯ ರಾಮದುರ್ಗದ ಕಮ್ಯೂನಿಸ್ಟ್ ನಾಯಕ ವಿ.ಪಿ.ಕುಲಕರ್ಣಿ ಅಪರೂಪದ ಸಂಗಾತಿ, ಅವರು ನಡೆದು ಬಂದ ಹೋರಾಟದ ಹಾದಿ ರೋಮಾಂಚಕ ಮತ್ತು ಸ್ಫೂರ್ತಿದಾಯಕ. ಕುಲಕರ್ಣಿ ಅವರ ಪುತ್ರ ನಿಖಿಲ್ ವಿ.ಕೆ. ಅವರು ತಮ್ಮ ತಂದೆಯ ಬಗ್ಗೆ ಇತ್ತೀಚೆಗೆ ಆಪ್ತ ಮತ್ತು ಅಂತರಾಳ ಕಲಕುವ ಈ ಬರಹ ಬರೆದಿದ್ದರು. ಇದನ್ನು ಓದಿದರೆ ಕಣ್ಣು ತುಂಬಿ ಬರುತ್ತದೆ. ಸಮಾಜಕ್ಕಾಗಿ ತನ್ನನ್ನು ತಾನು ಸುಟ್ಟುಕೊಂಡು ಬೆಳಕು ನೀಡಿದ ಕುಲಕರ್ಣಿ ಅವರ ಹೋರಾಟದ ಚರಿತ್ರೆಯನ್ನು ಓದಿ. ಯಾವುದೇ ಪಕ್ಷ, ಮತ್ತು ಸಂಘಟನೆಗೆ ಇಂಥವರು ಗೌರವ. ಮತ್ತು ಘನತೆ ತರುತ್ತಾರೆ.

ಸಮತೆಯ ಸಮಾಜಕ್ಕಾಗಿ ಬದುಕನ್ನೇ ಮುಡಿಪಾಗಿಟ್ಟ ವಿ.ಪಿ. ಕುಲಕರ್ಣಿ

ಚಿಕ್ಕ ವಯಸ್ಸಿನಲ್ಲಿ ತಂದೆ-ತಾಯಿಯನ್ನು ಕಳೆದುಕೊಂಡು, ಬಂಧುಗಳಿಂದ ದೂರ ತಳ್ಳಲ್ಪಟ್ಟು 10ನೇ ವಯಸ್ಸಿಗೆ ಒಂದು ಅಂಗಿ, ಚಡ್ಡಿಯಲ್ಲಿ ಕಾಲಿಗೆ ಚಪ್ಪಲಿ ಇಲ್ಲದೇ 70 ಕಿ.ಮೀ ನಡೆದು ಹುಬ್ಬಳ್ಳಿ ತಲುಪಿದ ಬಾಲಕ.

ಸತತ ಮೂರು ದಿನ ಅನ್ನ, ಆಹಾರವಿಲ್ಲದೇ ನಡೆದು ಸುಸ್ತಾಗಿ ಹುಬ್ಬಳ್ಳಿಯ ಪಾಲಿಕೆ ಕಟ್ಟಡದೆದುರು ಚಳಿಗಾಲದಲ್ಲಿ ಬೆಂಕಿ ಕಾಯಿಸಿಕೊಳಂಡು ಕುಳಿತ್ತಿದ್ದ ಕಾರ್ಮಿಕರ ಬಳಿ ಹೋಗಿ ತಾನೂ ಕುಳಿತುಕೊಳ್ಳುತ್ತಾನೆ. ಬಾಲಕ ತಾನು ಮಾತನಾಡುವ ಮೊದಲೇ ಪ್ರಜ್ಞೆ ತಪ್ಪಿ ಬೆಂಕಿಯ ಮೇಲೆ ಬಿದ್ದಾಗ, ಅಲ್ಲಿದ್ದ ಬಡ ಕಾರ್ಮಿಕನೊರ್ವ ಮನೆಗೆ ಕರೆದುಕೊಂಡು ಹೋಗಿ, ಪ್ರಾಥಮಿಕ ಚಿಕಿತ್ಸೆ ನೀಡಿ, ಉಣ್ಣಲು ಖಡಕ್ ರೊಟ್ಟಿ ಕೊಟ್ಟಾಗ, ಆ ಕಾರ್ಮಿಕನಲ್ಲಿ ಅಮ್ಮನನ್ನು ಕಾಣುತ್ತಾನೆ.

ಇಲ್ಲೇಕೆ ಬಂದಿದ್ದಿಯ? ಏನು ಬೇಕು ಎಂದು ಕೇಳಿದರೆ, 'ಕೆಲಸ' ಎಂದು ಉದ್ಧರಿಸುತ್ತಾನೆ ಈ ಬಾಲಕ. ಆ ಬಡ ಕಾರ್ಮಿಕನ ನೆರವಿನಿಂದ ಹುಬ್ಬಳ್ಳಿಯ ಧೋಬಿಯೊರ್ವನ ಬಳಿ ದಿನಕ್ಕೆ ಎರಡು ರೂ. ಸಂಬಳದ ಕೆಲಸಕ್ಕೆ ಸೇರಿಕೊಳ್ಳುತ್ತಾನೆ.

ಕೆಲಸವಿಷ್ಟೇ ಸೈಕಲ್ ನಲ್ಲಿ ಮನೆ ಮನೆಗೆ ತೆರಳಿ ಒಗೆಯುವ, ಇಸ್ತ್ರಿ ಮಾಡುವ ಬಟ್ಟೆ ಸಂಗ್ರಹಿಸಿ ಅಂಗಡಿಗೆ ತರುವುದು, ಒಗೆದ, ಇಸ್ತ್ರಿ ಮಾಡಿದ ಬಟ್ಟೆಗಳನ್ನು ಮನೆ ಮನೆಗೆ ತೆರಳಿ ಕೊಟ್ಟು ಬರುವುದು.

ಇದಿಷ್ಟೇ ಆಗಿದಿದ್ದರೆ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಮುದೇನಕೊಪ್ಪ ಎಂಬ ಕುಗ್ರಾಮದ ವೆಂಕಟೇಶ್ ಕುಲಕರ್ಣಿ, ಹೊರ ಜಗತ್ತಿಗೆ ತನ್ನನ್ನು ತೆರೆದುಕೊಳ್ಳದೇ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬದುಕಿಬಿಡುತ್ತಿದ್ದ.

ಆದರೆ ಧೋಬಿ ಅಂಗಡಿಯ ಕೆಲಸ ಆತನ ಬದುಕನ್ನು, ಆಲೋಚನೆಯನ್ನು ಬದಲಿಸಿ ಬಿಟ್ಟಿತ್ತು. ಬಟ್ಟೆ ಸಂಗ್ರಹಣೆ ಸಂದರ್ಭದಲ್ಲಿ ಶ್ರೀಮಂತರ, ಬಡವರ ನಡುವಿನ ವ್ಯತ್ಯಾಸ ಆ ಬಾಲಕನ ಗ್ರಹಿಕೆಗೆ ಬಂದಿತ್ತು. ಶ್ರೀಮಂತರ ಬದುಕು, ಬಡವರ ಬದುಕಿನ ನಡುವಿನ ಅಗಾಧ ವ್ಯತ್ಯಾಸ ಆತನನ್ನು ಬಹುವಾಗಿ ಕಾಡಿತು. ಅಸಮಾನತೆಯ ವಿರುದ್ಧದ ಧ್ವನಿ ಆ ಬಾಲಕನ ಅಂತರ್ಯದಲ್ಲಿ ಅದಾಗಲೇ ಮೊಳಗಲು ಶುರು ಮಾಡಿತ್ತು.

ಮುಂದೆ 15ನೇ ವಯಸ್ಸಿಗೆ ಧಾರವಾಡದ ಟೈವಾಕ್ ಕಂಪನಿಯಲ್ಲಿ ಕಾರ್ಮಿಕನಾಗಿ ಸೇರಿದಾಗ, ಎಡ ಚಿಂತನೆಗಳಿಗೆ ಆಕರ್ಷಿತಗೊಂಡು, ಎಡ ಕಾರ್ಮಿಕ ಸಂಘಟನೆಯ ಸದಸ್ಯನಾದ. 17ನೇ ವಯಸ್ಸಿನಲ್ಲಿ ಪ್ರತಿಭಟನೆಯ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ(ಹೆಸರು ಬೇಡ)ಯ ಕೊರಳು ಪಟ್ಟಿ ಹಿಡಿದು ಎಳೆದು ಬಿಟ್ಟಿದ್ದ.

ಬಿಸಿರಕ್ತ ಮತ್ತು ಆವೇಶದ ಭರದಲ್ಲಿ ಕಾನೂನಿನ ಎಲ್ಲೆ ಮೀರಿದ ಈ ತರುಣನನ್ನು ಠಾಣೆಗೆ ಎಳೆದೊಯ್ದಿದ್ದ ಪೊಲೀಸರು, ರಕ್ತ ತಣ್ಣಗಾಗುವಷ್ಟು ಹೊಡೆದಿದ್ದರು. ಪ್ರತಿಭಟನೆಯ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಗೆ ಹೋದಾಗ, ನ್ಯಾಯಾಧೀಶರು ಆತನ ವಯಸ್ಸು ತಿಳಿದು, ಮನೆಗೆ ಹೋಗು ಎಂದು ಗದರಿ ಕಳಿಸಿದ್ದರು. ಆಗಿನ ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೂಡ, ಇನ್ನೊಮ್ಮೆ ಗದ್ದಲ, ದೊಂಬಿಯಲ್ಲಿ ಕಾಣಿಸಿಕೊಂಡರೆ ಹುಷಾರ್ ಅಂದಿದ್ದರು.

ನಾನು ನಾಸ್ತಿಕ:

ಆದರೆ ಅಷ್ಟೊತ್ತಿಗಾಗಲೇ ಮಾರ್ಕ್ಸ್, ಲೆನಿನ್ ಸಾಹಿತ್ಯ ಓದಿದ್ದ ಈ ತರುಣ, ಸಮತೆಯ ಸಮಾಜಕ್ಕಾಗಿ ಹೋರಾಡುವ ನಿರ್ಧಾರ ಮಾಡಿಬಿಟ್ಟಿದ್ದ. ಇದೇ ಕಾರಣಕ್ಕೆ ಸಂಗಡಿಗರಿಂದ, ಊರ ಗೆಳೆಯರಿಂದ ಬಂಡು, ಬಂಡಪ್ಪ(ಬಂಡಾಯಗಾರ) ಎಂಬ ಉಪನಾಮ ಗಳಿಸಿದ.

ಭಗತ್ ಸಿಂಗ್ ರ 'ನಾನೇಕೆ ನಾಸ್ತಿಕ' ಎಂಬ ಬರಹಕ್ಕೆ ಪ್ರಭಾವಿತನಾಗಿ, ಧರ್ಮ, ಜಾತಿ, ಆಚರಣೆಗಳನ್ನು ಧಿಕ್ಕರಿಸಿದ ಈ ತರುಣ, ನಾನು ನಾಸ್ತಿಕ ಎಂದು ಘಂಟಾಘೋಷದಿಂದ ಸಾರಿದ್ದ. ಮುಂದೆ ತನ್ನ ಮಕ್ಕಳನ್ನೂ ಇದರತ್ತ ಸುಳಿಯಲು ಬಿಡಲಿಲ್ಲ. ತನ್ನಿಬ್ಬರು ಮಕ್ಕಳ ಜನನ ಪ್ರಮಾಣ ಪತ್ರದಲ್ಲಿ ಜಾತಿಯ ಕಾಲಂನಲ್ಲಿ ಭಾರತೀಯ ಎಂದು ಬರೆಸಿದ.

ಮುಂದೆ ಸಂಘಟನೆಯ ಹೆಚ್ಚುವರಿ ಜವಾಬ್ದಾರಿಗಳನ್ನು ನಿರ್ವಹಿಸಲು ಬೆಂಗಳೂರಿಗೆ ತೆರಳಿದ ತರುಣ, ಅಲ್ಲಿಯೂ ಕಾರ್ಮಿಕರ ಬೇಡಿಕೆಗಳಿಗಾಗಿ ಹೋರಾಡುತ್ತಾ ಸೆರೆವಾಸ, ಪೊಲಿಸರ ಲಾಠಿ ಏಟು ತಿನ್ನುತ್ತಾ ಅದನ್ನು ಪುರಸ್ಕಾರವೆಂಬಂತೆ ಸ್ವೀಕರಿಸುತ್ತಾ ಮುಂದುವರೆದ. ಬೆಂಗಳೂರಿನ ಆಟೋ ರಿಕ್ಷಾ ಚಾಲಕರ ಸಂಘದ ಅಧ್ಯಕ್ಷನಾಗಿದ್ದಾಗ ಒಮ್ಮೆ, ಪ್ರತಿಭಟನಾ ಮೆರವಣಿಗೆ ಸಂದರ್ಭದಲ್ಲಿ ವಿರೋಧಿಗಳಿಂದ ಚಾಕು ಇರಿತಕ್ಕೆ ಒಳಗಾಗಿ, ಸಾವು ಬದುಕಿನ ಹೋರಾಟದಲ್ಲಿ ಅಂತಿಮವಾಗಿ ಜಯಗಳಿಸಿ, ಮತ್ತೆ ಹೋರಾಟದಲ್ಲಿ ತೊಡಗಿಸಿಕೊಂಡ.

ಮದುವೆ:

ಅಷ್ಟೊತ್ತಿಗೆ ಕಾರ್ಮಿಕ ಸಂಘಟನೆಯ ಓರ್ವ ಮಹಿಳಾ ಸದಸ್ಯೆಯ ಪರಿಚಯ ಪ್ರೇಮಕ್ಕೆ ತಿರುಗಿ ಇಬ್ಬರೂ ಪರಸ್ಪರ ವಿವಾಹ ಬಂಧನಕೊಳಪಟ್ಟರು. ಪಕ್ಷದ ಸಲಹೆಯ ಮೇರೆಗೆ, ಸ್ವಂತ ಊರಿಗೆ ಮರಳಿ, ಬೆಳಗಾವಿ ಜಿಲ್ಲೆಯಲ್ಲಿ ಕಾರ್ಮಿಕ ಸಂಘಟನೆಗಳನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತರು. ಇಷ್ಟೊತ್ತಿಗೆ ಬಂಡಪ್ಪ ಎರಡು ಗಂಡುಮಕ್ಕಳ ತಂದೆ ಕೂಡ ಆಗಿದ್ದ. ಹೀಗೆ ಕುಟುಂಬವಿಲ್ಲದೇ ಏಕಾಂಗಿಯಾಗಿ ಶುರುವಾದ ಆತನ ಪಯಣ, ಹೆಂಡತಿ, ಮಕ್ಕಳ ಕುಟುಂಬದ ಒಡೆಯನಾಗುವ ಹಂತಕ್ಕೆ ಬಂದು ನಿಂತಿತು.

ಮುಂದೆ ರಾಮದುರ್ಗದಲ್ಲಿ ಬೀಡಿ ಕಾರ್ಮಿಕರು, ಕಟ್ಟಡ ಕೂಲಿ ಕಾರ್ಮಿಕರ ಸಂಘಗಳನ್ನು ಸ್ಥಾಪಿಸಿ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ಮಾಡುವಲ್ಲಿ ಬಂಡಪ್ಪ ನಿರತನಾದ. ನಗರ ಪುರಸಭೆ ಚುನಾವಣೆಯಲ್ಲಿ ಜಯಗಳಿಸಿ, ಅಲ್ಲಿನ ಭ್ರಷ್ಟಾಚಾರ ಮತ್ತು ಕಾರ್ಮಿಕ ವಿರೋಧಿ ನೀತಿ ಖಂಡಿಸಿ, ಕೇವಲ 15 ದಿನದಲ್ಲಿ ರಾಜೀನಾಮೆ ಬಿಸಾಕಿ ಹೊರಬಂದಿದ್ದ.

ದುಷ್ಕರ್ಮಿಗಳಿಂದ ಮಾರಣಾಂತಿಕ ಹಲ್ಲೆ:

ಮುಂದೆ ರಾಮದುರ್ಗ ವಿಧಾನಸಭೆ ಕ್ಷೇತ್ರದ ಚುನಾವಣೆಯಲ್ಲಿ ಸಿಪಿಎಂ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಪ್ರಚಾರ ಮುಗಿಸಿ ತಡರಾತ್ರಿ ಮನೆಗೆ ಬರುತ್ತಿದ್ದಾಗ ದುಷ್ಕರ್ಮಿಗಳಿಂದ ಮಾರಣಾಂತಿಕ ಹಲ್ಲೆಗೊಳಗಾದ. ದುರುಳರು ಕಣ್ಣಿಗೆ ಖಾರದ ಪುಡಿಯ ನೀರು ಎರಚಿ ಲಾಠಿ, ಕಬ್ಬಿಣದ ರಾಡುಗಳಿಂದ ಹೊಡೆದಿದ್ದರು. ಮೂರ್ಛೆ ಹೋದ ಬಂಡಪ್ಪನನ್ನು ಸತ್ತ ಎಂದು ಭಾವಿಸಿ ದುರುಳರು ಓಡಿ ಹೋಗಿದ್ದರು. ಆದರೆ ನಂತರ ಧೋ.. ಎಂದು ಸುರಿದ ಮಳೆಯಿಂದ ಎಚ್ಚರಗೊಂಡ ಈ ಹೋರಾಟಗಾರ, ರಕ್ತಸಿಕ್ತ ಸ್ಥಿತಿಯಲ್ಲೇ ಪೊಲೀಸ್ ಠಾಣೆಗೆ ನಡೆದುಕೊಂಡು ಹೋಗಿದ್ದ. ಈತನ ಸ್ಥಿತಿ ಕಂಡು ಬೆಚ್ಚಿಬಿದ್ದ ಪೊಲೀಸರು ಆತನನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರು. ಈ ಕುರಿತು ಆತನ ಮಕ್ಕಳಿಗೆ ಹೆಚ್ಚೇನೂ ಗೊತ್ತಿರದಿದ್ದರೂ, ಮರುದಿನ ಶಾಲೆಗೆ ಹೊರಟಾಗ ಆಸ್ಪತ್ರೆ ಮುಂದೆ ಸೇರಿದ್ದ ಸಾವಿರಾರು ಜನರನ್ನು ನಿಯಂತ್ರಿಸಲು ಹರಸಾಹಸಪಟ್ಟ ಪೊಲೀಸರು, ಕೊನೆಗೆ ನೆರೆಯ ಬೈಲಹೊಂಗಲದಿಂದ ಹೆಚ್ಚುವರಿ ಪಡೆಗಳನ್ನು ಕರೆಸಿಕೊಂಡಿದ್ದನ್ನು ನೋಡಿದ್ದರು. ಜನರ ಸಹಕಾರಕ್ಕಾಗಿ ಕೋರಿ ಆಸ್ಪತ್ರೆಯ ಒಳಗಿನಿಂದಲೇ ಮೈಕ್ ಮೂಲಕ ಸ್ವತಃ ಬಂಡಪ್ಪನಿಂದಲೇ ಮನವಿ ಮಾಡಿಸಿದ್ದರು ಪೊಲೀಸರು. ನಾನು ಜೀವಂತವಾಗಿ ಮತ್ತೆ ನಿಮ್ಮೊಂದಿಗೆ ಬೆರೆಯುವಂತಾಗಬೇಕಾದರೆ, ಶಾಂತಿಯುತವಾಗಿ ನಿಮ್ಮ ಮನೆಗೆ ತೆರಳಿ ಎಂದು ಮನವಿ ಮಾಡಿದ್ದ ಬಂಡಪ್ಪ. ಆದರೆ ಜನಪ್ರೀತಿ ಮತ್ತು ಚುನಾವಣಾ ರಾಜಕೀಯ ಬೇರೆ ಬೇರೆಯಾಗಿರುವುದರಿಂದ ತಾನು ಸ್ಪರ್ಧಿಸಿದ್ದ ಎರಡೂ ವಿಧಾನಸಭೆ ಚುನಾವಣೆಯಲ್ಲಿ ಬಂಡಪ್ಪ ಸೋಲುಂಡಿದ್ದ ಎಂಬುದು ಬೇರೆ ಮಾತು.

ಆದರೆ ಹೋರಾಟದ ಹಾದಿಯಿಂದ ವಿಮುಖಗೊಳ್ಳದ ಬಂಡಪ್ಪ, ಜನ ಚಳುವಳಿಯನ್ನು ಮುಂದುವರೆಸಿದ. ತೀರ ಇತ್ತೀಚೆಗೆ ಅನಾರೋಗ್ಯದಿಂದ ಹಾಸಿಗೆ ಹಿಡಿಯುವವರೆಗೂ ಮತ್ತು ಹಿಡಿದಾದ ಮೇಲೂ ಹೋರಾಟದ ಛಲ ಬಿಟ್ಟಿಲ್ಲ. ಆರೋಗ್ಯ ಸಂಪೂರ್ಣವಾಗಿ ಹದಗೆಡುವ ಮೊದಲು ಅವರು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ರಾಜ್ಯಾಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದರು.

ಈ ಬಂಡಪ್ಪ ಈಗ ಸಂಪೂರ್ಣವಾಗಿ ಹಾಸಿಗೆ ಹಿಡಿದಿದ್ದಾನೆ. ಆದರೆ ಎದ್ದು ಓಡಾಡಲು ಮತ್ತೊಬ್ಬರ ಸಹಾಯ ಪಡೆಯಲು ಸ್ವಾಭಿಮಾನ ಒಪ್ಪುತ್ತಿಲ್ಲ. ಏಳಲು ಹೋಗಿ ನೆಲಕ್ಕೆ ಬಿದ್ದು ಪೆಟ್ಟು ಮಾಡಿಕೊಂಡರೂ ಆತನ ಅಹಂ ಕಡಿಮೆಯಾಗಿಲ್ಲ. ಈಗಂತೂ ಮಡದಿ, ಮಕ್ಕಳನ್ನೂ ಗುರುತು ಹಿಡಿಯದ ಅವರು, ಸಹಾಯಕ್ಕೆ ಮುಂದಾದರೆ ಕೈಸನ್ನೆ ಮಾಡಿ ದೂರ ಸರಿಸುತ್ತಾರೆ. ಒಂಟಿತನದಲ್ಲಿ ಬಾಲ್ಯದ ದಿನಗಳನ್ನು ಕಳೆದಿದ್ದ ಅವರು, ಜ್ವರ ಬಂದಾಗಲೂ ತನ್ನನ್ನು ತಾನೇ ಸಾವರಿಸಿಕೊಂಡಿದ್ದ ಕಾರಣವೋ ಏನೋ, ಈಗಲೂ ಅವರಿಗೆ ಅವರೊಬ್ಬರೇ ಬಂಧು.

ಮುಂದೇನಾಗುತ್ತೋ ಗೊತ್ತಿಲ್ಲ. ಆದರೆ ಅವರು ಕೊನೆಯ ಕ್ಷಣದವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂಬ ಖಾತರಿ ಇಲ್ಲಿರುವ ಪ್ರತಿಯೊಬ್ಬರಿಗೂ ಇದೆ. ಈ ಬಂಡಪ್ಪನೇ ನನ್ನ ಹೆಮ್ಮೆಯ ಅಪ್ಪ.

ನನ್ನಪ್ಪನಾಗಿ ಬಂಡಪ್ಪ

ಆತ ಹೋಗುತ್ತಾನೆ, ಹೋರಾಡುತ್ತಲೇ ಹೋಗುತ್ತಾನೆ. ಹೋರಾಟದ ಸಂದೇಶದ ಮೂಲಕ ಆತ ನಮ್ಮೊಳಗೆ ಸದಾ ಬದುಕಿರುತ್ತಾನೆ.

ನನಗಾಗಿ ಬಂಡಪ್ಪನ ಸಂದೇಶ

ಇಡೀ ಜಗತ್ತಿನಲ್ಲಿ ಕಾರ್ಮಿಕನ ಪಟ್ಟಕ್ಕಿಂತ ಶ್ರೇಷ್ಠ ಪಟ್ಟ ಮತ್ತೊಂದಿಲ್ಲ. ಕೊನೆಯವರೆಗೂ ಕಾರ್ಮಿಕನಾಗಿ ದುಡಿ. ನೀನು ಕೆಲಸಮಾಡುವ ಸಂಸ್ಥೆಗೆ ನಿಯತ್ತಿನಿಂದ ದುಡಿ. ನಾನಿಲ್ಲದ ಮರುದಿನವೇ ನೀನು ಕೆಲಸ ಮಾಡಬೇಕು. ಈ ಜಗತ್ತಿಗೆ ನಾನೊಬ್ಬ ಕಾರ್ಮಿಕನನ್ನು ಕಾಣಿಕೆಯಾಗಿ ಕೊಟ್ಟಿದ್ದೇನೆ. ಅದನ್ನು ನೀನು ಎಂದಿಗೂ ಮರೆಯಕೂಡದು.

ನಾನಾಗ ಹೈಸ್ಕೂಲ್ ನಲ್ಲಿ ಇದ್ದಿರಬಹುದು. ಸಮಾನತೆ ಎಂದರೇನು ಎಂದು ನಾನು ಕೇಳಿದ ಪ್ರಶ್ನೆಗೆ ಆತ ಹೀಗೆ ಉತ್ತರಿಸಿದ್ದ- "ಈ ಜಗತ್ತಿನಲ್ಲೊ 700 ಕೋಟಿ(ಆಗಿನ ಲೆಕ್ಕಾಚಾರ)ಜನರಿದ್ದಾರೆ, ಇಷ್ಟೂ ಜನ ಮಾಡದ ಯಾವುದಾದರೂ ಒಂದು ಪ್ರತ್ಯೇಕ ಕೆಲಸ ನೀನು ಮಾಡುತ್ತಿಯ? ರಾತ್ರಿ ಮಲಗುವುದು, ಬೆಳಗ್ಗೆ ಏಳುವುದು, ಪ್ರಾಕೃತಿಕ ಕರೆಗಳು, ಊಟ-ತಿಂಡಿ, ಹೀಗೆ ಇದ್ಯಾವುದರಲ್ಲಾದರೂ ನೀನು ಅನ್ಯರಿಗಿಂತ ಭಿನ್ನವಾದುದೇನಾದರೂ ಮಾಡುತ್ತೀಯ? ಯೋಚನೆ ಮಾಡುವ ನಿನ್ನ ಮೆದುಳಿನ ಶಕ್ತಿ ಹೊರತುಪಡಿಸಿ ಉಳಿದೆಲ್ಲಾ ವಿಷಯದಲ್ಲಿ ನೀನು ಈ ಜಗತ್ತಿನ ಇತರ ಮನುಷ್ಯನಿಗೆ ಸಮ. ಹಾಗಿದ್ದರೂ ನಿನಗಿರುವ ಸೌಲಭ್ಯ ಬೇರೊಬ್ಬನಿಗೆ ಏಕಿಲ್ಲ? ಚಿಂತಿಸು, ಸಮಾನತೆ ಎಂದರೇನು ಎಂದು ನಿನಗೆ ತಿಳಿಯುತ್ತದೆ."

"ಜಗತ್ತಿನ ಎಲ್ಲ ಧರ್ಮಿಯರಿಗೂ ನೀರು, ಗಾಳಿ, ಬೆಳಕು ಪವಿತ್ರ, ಒಂದು ಧರ್ಮದ ಜನ ನೀರು ಕುಡಿಯುತ್ತಾರೆ, ಹಾಗಾಗಿ ಈ ಧರ್ಮದವನಾಗಿ ನೀನು ನೀರು ಕುಡಿಯಬೇಡ, ಒಂದು ಧರ್ಮದ ಜನರು ಗಾಳಿಯನ್ನು ಉಸಿರಾಡುತ್ತಾರೆ, ಹಾಗಾಗಿ ಈ ಗಾಳಿಯನ್ನು ಉಸಿರಾಡಬೇಡ, ಒಂದು ಧರ್ಮದ ಜನ ಬೆಂಕಿಯಲ್ಲಿ ಆಹಾರ ಬೇಯಿಸುತ್ತಾರೆ, ಹಾಗಾಗಿ ನೀನು ಈ ಬೆಂಕಿಯನ್ನು ಬಳಸಬೇಡ ಎಂದು ಹೇಳುವ ಛಾತಿ ಯಾವ ಧರ್ಮಕ್ಕೂ ಇಲ್ಲ. ಗೊಡ್ಡು ಆಚರಣೆಯ ಗುಲಾಮನಾಗಿರುವ ಮನುಷ್ಯ ಮಾತ್ರ ಜಾತಿ-ಧರ್ಮದ ನೆರಳನ್ನು ಆಶ್ರಯಿಸುವುದು".

ಪ್ರಜಾಪ್ರಭುತ್ವ ಚುನಾವಣೆಗೆ ಸೀಮಿತಾಗಿ ಅದೂ ಅರ್ಥಹೀನವಾಗುತ್ತಿದೆಯೇ?



ಪ್ರೊ. ಎಂ.ಚಂದ್ರ ಪೂಜಾರಿ

ಚುನಾವಣೆ ಪ್ರಜಾಪ್ರಭುತ್ವದ ಒಂದು ಅಂಗ ಮಾತ್ರ. ಆದರೆ ನಮ್ಮಲ್ಲಿ ಪ್ರಜಾಪ್ರಭುತ್ವದ ಆರಂಭ, ಬೆಳವಣಿಗೆ, ಅಂತ್ಯ ಎಲ್ಲವೂ ಚುನಾವಣೆಯೇ ಅಗಿದೆ. ಪ್ರಜಾಪ್ರಭುತ್ವ ಚುನಾವಣೆಗೆ ಸೀಮಿತವಾಗಿ ಹಲವು ದಶಕಗಳಾಗಿವೆ. ಅಂದರೆ ಪ್ರಜಾಪ್ರಭುತ್ವದ ಇತರ ಅಂಗಗಳಾದ ನ್ಯಾಯಾಂಗ, ಮಾಧ್ಯಮ, ಕಾರ್ಯಾಂಗಗಳು ಅರ್ಥ ಕಳೆದುಕೊಂಡು ದಶಕಗಳಾಗಿವೆ. ಇಂತಹ ಸಂದರ್ಭದಲ್ಲಿ ಸಮರ್ಪಕವಾಗಿ ನಡೆಯುವ ಚುನಾವಣೆಗಳು ಮಾತ್ರ ಪ್ರಜಾಪ್ರಭುತ್ವವನ್ನು ಭಾಗಶಃ ಜೀವಂತ ಇರಿಸಲು ಸಾಧ್ಯ. ಅಂದರೆ ಸಮಾಜದ ಎಲ್ಲ ವರ್ಗದ ಜನರಿಗೆ ಸ್ಪರ್ಧಿಸಿ ಗೆಲ್ಲಲು ಸಾಧ್ಯವಾದರೆ ಮಾತ್ರ ಚುನಾವಣೆಗಳು ಸಮಪರ್ಕವಾಗಿ ನಡೆಯುತ್ತಿದೆ ಎನ್ನಬಹುದು. ಇಲ್ಲವಾದರೆ ಅಧಿಕಾರ ಕೆಲವರಲ್ಲೇ ಕ್ರೋಢೀಕರಣಗೊಂಡು ಅವರು ಪ್ರಜಾಪ್ರಭುತ್ವದ ಹೆಸರಲ್ಲಿ ತಮ್ಮ ಗುಂಪಿನ ಆಸಕ್ತಿಗಳನ್ನು ವೃದ್ಧಿಸಿಕೊಳ್ಳಬಹುದು. ದಿನಗೂಲಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ಸಣ್ಣಪುಟ್ಟ ಕೃಷಿಕರು, ವ್ಯಾಪಾರಿಗಳು, ಉದ್ದಿಮೆದಾರರು ಇವರೇ ನಮ್ಮ ಸಮಾಜದ ಬಹುತೇಕರು. ಇವರೆಲ್ಲ ನಮ್ಮಲ್ಲಿ ನಡೆಯುವ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲಲು ಅವಕಾಶ ಇದೆಯೇ? ಎನ್ನುವ ಪ್ರಶ್ನೆ ಸುತ್ತಾ ಈ ಲೇಖನದ ಚರ್ಚೆ ಇದೆ. ಸದ್ಯ ನಡೆಯುತ್ತಿರುವ ಕರ್ನಾಟಕ ವಿಧಾನಸಭೆ ಚುನಾವಣ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು ಲೇಖನದ ಚರ್ಚೆಯನ್ನು ಬೆಳೆ'ಸಲಾಗಿದೆ. ಈ ಲೇಖನ ಎರಡು ಭಾಗಗಳಲ್ಲಿದೆ. ಮೊದಲನೆಯ ಭಾಗ ಇದು.

ಭಾಗ 1

ತತ್ತ್ವ ಸಿದ್ಧಾಂತಗಳು

ರಾಜ್ಯದ ವಿಧಾನಸಭೆ ಚುನಾವಣೆಗೆ ಪ್ರಮುಖ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಘೋಷಿಸಿವೆ. ನಿನ್ನೆ ಮೊನ್ನೆ ತನಕ ಒಂದು ಪಕ್ಷದಲ್ಲಿದ್ದವರು ಇವತ್ತು ಮತ್ತೊಂದು ಪಕ್ಷದಿಂದ ಟಿಕೇಟು ಪಡೆದಿದ್ದಾರೆ. ಬಿಜೆಪಿಯಲ್ಲಿದ್ದವರು ಕಾಂಗ್ರೆಸ್‌ಲ್ಲಿ ಅಥವಾ ಕಾಂಗ್ರೆಸ್‌ಲ್ಲಿದ್ದವರು ಬಿಜೆಪಿಯಲ್ಲಿ ಅಥವಾ ಜೆಡಿಎಸ್‌ಲ್ಲಿ ಟಿಕೇಟು ಪಡೆದಿದ್ದಾರೆ. ಎಲ್ಲ ಪಕ್ಷಗಳು ಡೊಮಿನೆಂಟ್ ಸಮುದಾಯಗಳಿಗೆ (ಲಿಂಗಾಯತರು ಮತ್ತು ಒಕ್ಕಲಿಗರು) ಹೆಚ್ಚು ಟಿಕೇಟು ನೀಡಿವೆ. ಡೊಮಿನೆಂಟ್ ಸಮುದಾಯಗಳ ಅವಲಂಬನೆ ತಪ್ಪಿಸಬೇಕೆನ್ನುವ ಬಿಜೆಪಿ ಕೂಡ ಅತೀ ಹೆಚ್ಚು ಟಿಕೇಟುಗಳನ್ನು ಇವೇ ಸಮುದಾಯದವರಿಗೆ ನೀಡಿರುವುದು ಬಹುದೊಡ್ಡ ವಿಡಂಬನೆ. ಎಲ್ಲ ಪಕ್ಷಗಳಲ್ಲೂ ಹಲವು ವರ್ಷಗಳಿಂದ ಸ್ಪರ್ಧಿಸುವವರೇ ಈ ಬಾರಿಯೂ ಸ್ಪರ್ಧಿಸುತ್ತಿದ್ದಾರೆ. ಒಂದು ವೇಳೆ ಬದಲಾವಣೆ ಇದ್ದರೂ ಅದು ಅವರ ಕುಟುಂಬಕ್ಕೆ ಸೀಮಿತ. ಅಂದರೆ ತಂದೆ ಬದಲು ಮಗನೋ ಅಥವಾ ಗಂಡನ ಬದಲು ಹೆಂಡತಿಯೋ ಅಥವಾ ಹತ್ತಿರದ ಸಂಬಂಧಿಯೋ ಟಿಕೇಟು ಪಡೆದಿದ್ದಾರೆ. ಎಲ್ಲ ಪಕ್ಷಗಳಲ್ಲೂ ವರ್ಷಾನುಗಟ್ಟಲೆ ಪಕ್ಷಕ್ಕೆ ದುಡಿದ ಸಾಮಾನ್ಯ ಕಾರ್ಯಕರ್ತರು ಟಿಕೇಟು ಪಡೆಯಲ ವಿಫಲರಾಗಿದ್ದಾರೆ.

ಎಲ್ಲ ಪಕ್ಷಗಳು ಟಿಕೇಟು ನೀಡುವಾಗ ತಮ್ಮ ಪಕ್ಷದ ತತ್ತ್ವ ಸಿದ್ಧಾಂತಗಳಿಗೆ ಮೂರು ಕಾಸಿನ ಬೆಲೆ ನೀಡಿಲ್ಲ. 'ಏಸೋಶಿಯನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' ಮತ್ತು 'ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್'ಗಳ ಮಾಹಿತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಟಿಕೇಟು ಹಂಚುವಾಗಿ ಪರಿಗಣಿಸಲ್ಪಡುವ ಬಹುಮುಖ್ಯ ಅಂಶ ಅಭ್ಯರ್ಥಿಯ ಗೆಲ್ಲುವ ಸಾಧ್ಯತೆ. ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಮೂರು ನಾಲ್ಕು ಅಂಶಗಳ ಮೇಲೆ ನಿಂತಿದೆ. ಒಂದು, ಸುದ್ಧಿ ಮಾಧ್ಯಮಗಳ ಮೂಲಕ ಜನರಿಗೆ ಹೆಚ್ಚು ಪರಿಚಯ ಮಾಡಿಕೊಳ್ಳುವ ಅಭ್ಯರ್ಥಿಯ ಸಾಮರ್ಥ್ಯ, ಎರಡು, ಕ್ಷೇತ್ರದ ಆಯಾಕಟ್ಟಿನ ಜಾಗದಲ್ಲಿ ಫ್ಲೆಕ್ಸ್ ಬ್ಯಾನರ್‌ಗಳನ್ನು ಹಾಕಿ ಸುದ್ಧಿ ಮಾಡುವ ಸಾಮರ್ಥ್ಯ, ಮೂರು, ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು ನೇಮಕ ಮಾಡಿ ಮನೆಮನೆಗೆ ತಮ್ಮನ್ನು ಪರಿಚಯಿಸಿಕೊಳ್ಳುವ ಮತ್ತು ದುಡ್ಡು ಹಂಚುವ ಸಾಮರ್ಥ್ಯ. ನಾಲ್ಕು, ಹಲವು ಸಾವಿರ ಜನರನ್ನು ಸೇರಿಸಿ ಚುನಾವಣ ಸಮಾವೇಶಗಳನ್ನು ಸಂಘಟಿಸುವ ಸಾಮರ್ಥ್ಯ ಮತ್ತು ಇತ್ತೀಚಿನ ವರ್ಷಗಳಲ್ಲಿ ಮತ್ತೊಂದು ಸಾಮರ್ಥ್ಯ ಕೂಡ ಮುಂಚೂಣಿಗೆ ಬಂದಿದೆ. ಅದೇನೆಂದರೆ ಕೋಮು ಗಲಭೆಗಳನ್ನು ಹುಟ್ಟು ಹಾಕಿ ಮತಗಳನ್ನು ಧ್ರುವೀಕರಿಸುವ ಸಾಮರ್ಥ್ಯ.

ಇವೆಲ್ಲವೂ ಕೆಲವು ಕೋಟಿ ರೂಗಳ ವಿನಿಯೋಜನೆಯನ್ನು ಬಯಸುತ್ತವೆ. ಅಷ್ಟು ಮಾತ್ರವಲ್ಲ ವಿನಿಯೋಜಿಸಬೇಕಾದ ಕೆಲವು ಕೋಟಿಗಳಲ್ಲಿ ಸರಿ ಅರ್ಧದಷ್ಟನ್ನು ಅಭ್ಯರ್ಥಿಯೇ ಭರಿಸಬೇಕಾದ ಸ್ಥಿತಿ ಇದೆ. ಇದೇ ಕಾರಣದಿಂದ ಕೋಟಿ ಲೆಕ್ಕದಲ್ಲಿ ಆಸ್ತಿಪಾಸ್ತಿ ಇದ್ದವರು ಮಾತ್ರ ಇವತ್ತು ಚುನಾವಣೆ ಸ್ಪರ್ಧಿಸಿ ಗೆಲ್ಲಲು ಸಾಧ್ಯವಾಗಿದೆ. ಕೋಟಿಗಿಂತ ಕಡಿಮೆ ಆಸ್ತಿಪಾಸ್ತಿವುಳ್ಳ ಬೆರಳಣಿಕೆಯಷ್ಟು ಅಭ್ಯರ್ಥಿಗಳನ್ನು ಚುನಾವಣ ಕಣದಲ್ಲಿ ನೋಡಲು ಸಾಧ್ಯವಾಗುವುದಿಲ್ಲ. ಅಭ್ಯರ್ಥಿಯೇ ಭರಿಸುವ ಪ್ರಮಾಣ ಮತ್ತು ಪಕ್ಷದ ದೇಣಿಗೆ ಪಡೆಯುವ ಸಾಮರ್ಥ್ಯದ ನಡುವೆ ನೇರ ಸಂಬಂಧ ಇದೆ. ಅಂದರೆ ಹೊರಗಿನಿಂದ ಹೆಚ್ಚು ದೇಣಿಗೆ ಪಡೆಯುವ ಪಕ್ಷದಲ್ಲಿ ಅಭ್ಯರ್ಥಿಯೇ ಭರಿಸುವ ಪ್ರಮಾಣ ಕಡಿಮೆ ಇರುತ್ತದೆ. ಕಡಿಮೆ ದೇಣಿಗೆ ಪಡೆಯವ ಪಕ್ಷದಲ್ಲಿ ಅಭ್ಯರ್ಥಿಯೇ ಭರಿಸುವ ಪ್ರಮಾಣ ಹೆಚ್ಚಿರುತ್ತದೆ. ಅದೇ ರೀತಿ ಪಕ್ಷದ ದೇಣಿಗೆ ಪಡೆಯುವ ಶಕ್ತಿ ಮತ್ತು ಪಕ್ಷ ಅಧಿಕಾರದಲ್ಲಿರುವುದರ ನಡುವೆ ನೇರ ಸಂಬಂಧ ಇದೆ.

ಆಡಳಿತದಲ್ಲಿರುವ ಪಕ್ಷ ಹೆಚ್ಚು ದೇಣಿಗೆ ಮತ್ತು ವಿರೋಧ ಪಕ್ಷದಲ್ಲಿರುವ ಪಕ್ಷ ಕಡಿಮೆ ದೇಣಿಗೆ ಪಡೆಯುತ್ತವೆ. ಪಕ್ಷಗಳ ತತ್ತ್ವ ಸಿದ್ಧಾಂತಗಳನ್ನು ನೋಡಿ ಉದ್ದಿಮೆಗಳು ಮತ್ತು ಇತರ ಅನುಕೂಲಸ್ಥರು ದೇಣಿಗೆ ನೀಡುವುದಲ್ಲ. ಉದ್ದಿಮೆಗಳು ಮತ್ತು ಇತರ ಅನುಕೂಲಸ್ಥರ ಕೆಲಸ, ಕಾರ್ಯಗಳನ್ನು ಪಕ್ಷ ಅಧಿಕಾರಕ್ಕೆ ಬಂದ ನಂತರ ಈಡೇರಿಸುತ್ತದೆ ಎನ್ನುವ ಭರವಸೆ ಮೇಲೆ ದೇಣಿಗೆ ಪಡೆಯುತ್ತವೆ. ಈ ಎಲ್ಲದರ ಹಿನ್ನೆಲೆಯಲ್ಲಿ ತೀರ್ಮಾನಿಸುವುದಾದರೆ ಪಕ್ಷಗಳಿಗೆ ದೇಣಿಗೆ ನೀಡುವವರು ಮತ್ತು ಚುನಾವಣ ವೆಚ್ಚವನ್ನು ಸ್ವತಃ ಭರಿಸಲು ಶಕ್ತಿ ಇರುವವರು ನಮ್ಮ ಪ್ರಜಾಪ್ರಭುತ್ವದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ ಎನ್ನುವ ತೀರ್ಮಾನಕ್ಕೆ ಬರಬಹುದು. ಏಸೋಶಿಯನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನ ಅಂಕಿಅಂಶಗಳ ಪ್ರಕಾರ ಒಂದು ಕೋಟಿಗಿಂತ ಕಡಿಮೆ ಆಸ್ತಿಪಾಸ್ತಿ ಘೋಷಣೆ ಮಾಡಿರುವ ಅಭ್ಯರ್ಥಿಗಳ ಗೆಲ್ಲುವ ಸಾಧ್ಯತೆ ಕೇವಲ ಶೇ.6ರಷ್ಟಿದ್ದರೆ 20 ಕೋಟಿಗಿಂತ ಹೆಚ್ಚು ಆಸ್ತಿಪಾಸ್ತಿ ಘೋಷಣೆ ಮಾಡಿದ ಆಭ್ಯರ್ಥಿಗಳು ಗೆಲ್ಲುವ ಸಾಧ್ಯತೆ ಶೇ.52ರಷ್ಟಿದೆ.



ಚುನಾವಣೆಯಲ್ಲಿ ಮಾತ್ರ ಹಣ ನಿರ್ಣಾಯಕ ಪಾತ್ರ ವಹಿಸುವುದಲ್ಲ, ಚುನಾವಣೆ ನಂತರವೂ ಹಣವೇ ನಿರ್ಣಾಯಕ. ರಾಜಕೀಯ ಪಕ್ಷ ಹಲವು ಕೋಟಿ ರೂಗಳನ್ನು ವಿನಿಯೋಜಿಸಲು ರೆಡಿ ಇದ್ದರೆ ಚುನಾವಣೆಯಲ್ಲಿ ಸೋತರೂ ಸರಕಾರ ರಚಿಸಬಹುದೆನ್ನುವ ಹಲವು ಘಟನೆಗಳು ನಮ್ಮಲ್ಲಿ ನಡೆದಿವೆ. ಕರ್ನಾಟಕದ 2018ರ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಪಕ್ಷ ಬಹುಮತ ಪಡೆದಿಲ್ಲ. ಆವಾಗ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಸೇರಿ ಸಮ್ಮಿಶ್ರ ಸರಕಾರ ರಚಿಸಿವೆ. ಒಂದು ವರ್ಷದ ನಂತರ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಹಲವು ಎಂಎಲ್‌ಎಗಳು ತಮ್ಮ ಪಕ್ಷಕ್ಕೆ ರಾಜಿನಾಮೆ ನೀಡಿ ಬಿಜೆಪಿ ಸೇರಿದರು. ಇವರನ್ನೆಲ್ಲ ಹಲವು ಕೋಟಿ ನೀಡಿ ಖರೀದಿಸಲಾಗಿದೆ ಎನ್ನುವ ಚರ್ಚೆ ಬಹುತೇಕರ ಪ್ರಜ್ಞೆಯ ಭಾಗವಾಗಿದೆ. ಎಂಎಲ್‌ಎಗಳು ಬಿಜೆಪಿ ಸೇರುವುದರಿಂದ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಮಿಶ್ರ ಸರಕಾರ ಅಧಿಕಾರ ಕಳೆದುಕೊಂಡಿತು. ಚುನಾವಣೆಯಲ್ಲಿ ಬಹುಮತ ಪಡೆಯದಿದ್ದರೂ ಬಿಜೆಪಿ ಪಕ್ಷ ಕರ್ನಾಟಕದಲ್ಲಿ ಸರಕಾರ ರಚಿಸಿದೆ ಮತ್ತು ನಾಲ್ಕು ವರ್ಷ ಆಡಳಿತ ನಡೆಸಿದೆ.

ಹೆಚ್ಚು ಕಡಿಮೆ ಇದೇ ರೀತಿಯ ಪ್ರಯೋಗ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲೂ ನಡೆದಿದೆ. ಮಧ್ಯ ಪ್ರದೇಶದಲ್ಲೂ ಕಾಂಗ್ರೆಸ್‌ನ ಹಲವು ಎಂಎಲ್‌ಎಗಳು ಬಿಜೆಪಿ ಸೇರುವುದರಿಂದ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಿತು. ಬಿಜೆಪಿ ಪಕ್ಷ ಅಧಿಕಾರ ಹಿಡಿಯಿತು. ಮಹಾರಾಷ್ಟ್ರದಲ್ಲಿ ಶಿವಸೇನೆ, ಕಾಂಗ್ರೆಸ್ ಮತ್ತು ಎನ್‌ಸಿಪಿ ಮೂರು ಪಕ್ಷಗಳು ಸೇರಿ ಸರಕಾರ ನಡೆಸುತ್ತಿದ್ದವು. ಶಿವಸೇನೆಯ ಬಹುತೇಕ ಎಂಎಲ್‌ಎಗಳು ಪಕ್ಷದಿಂದ ಹೊರಹೋಗುವುದರಿಂದ ಸಮ್ಮಿಶ್ರ ಸರಕಾರ ಅಧಿಕಾರದಿಂದ ಇಳಿಯಬೇಕಾಯಿತು. ಶಿವಸೇನೆಯಿಂದ ಹೊರಹೋದ ಎಂಎಲ್‌ಎಗಳು ಬಿಜೆಪಿ ಜೊತೆ ಸೇರಿ ಸರಕಾರ ರಚಿಸಿದರು. ಎಲ್ಲ ಕಡೆ ದೊಡ್ಡ ಮೊತ್ತದ ಹಣದ ಬಳಕೆ ಜೊತೆಗೆ ಸೆಂಟ್ರಲ್ ಏಜನ್ಸಿಗಳನ್ನು (ಸಿಬಿಐ, ಇಡಿ ಇತ್ಯಾದಿಗಳು) ಬಳಸಿಕೊಂಡು ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷವನ್ನು ಅಧಿಕಾರದಿಂದ ಇಳಿಸಿ ಬಹುಮತ ಪಡೆಯದ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದಿದೆ ಎನ್ನುವ ಚರ್ಚೆ ಇದೆ.

ಮತದಾರರು

ಇಂತಹ ಚುನಾವಣೆಗಳಲ್ಲಿ ಮತ ಚಲಾಯಿಸುವ ಏಕಮಾತ್ರ ಶಕ್ತಿವುಳ್ಳ ಸಾಮಾನ್ಯ ಪ್ರಜೆಗಳ ಪಾತ್ರ ಏನು? ಪಾತ್ರ ಏನೆಂದು ರಾಜಕೀಯ ಪಕ್ಷಗಳು, ಮಾಧ್ಯಮಗಳು, ಸಮಾಜದ ಗಣ್ಯರು, ಅಧಿಕಾರಿಗಳು ನೇರವಾಗಿ ಮತ್ತು ಪರೋಕ್ಷವಾಗಿ ಹೇಳುತ್ತಾರೆ. ಮತದಾನ ತುಂಬಾ ಮಹತ್ವದ್ದು. ಆದುದರಿಂದ ಎಲ್ಲರೂ ತಪ್ಪದೇ ಮತದಾನ ಮಾಡಬೇಕೆಂದು ನೇರವಾಗಿ ಹೇಳುತ್ತಾರೆ. ನೇರವಾಗಿ ಹೇಳುವುದಕ್ಕಿಂತ ಹೆಚ್ಚು ಪರೋಕ್ಷ ಸಂದೇಶಗಳೇ ಹೆಚ್ಚು. ಇವನ್ನು ಮಾಧ್ಯಮ ತುಂಬಾ ಪರಿಣಾಮಕಾರಿಯಾಗಿ ಮಾಡುತ್ತಿವೆ. ಖಾನ್‌ದಾನ್ ಸಿನೀಮಾಗಳನ್ನು ಮೀರಿಸುವ ರೀತಿಯಲ್ಲಿ ಚುನಾವಣೆಯಲ್ಲಿ ಯಾರು ಸ್ಪರ್ಧಿಸಿ ಗೆಲ್ಲಬಹುದೆನ್ನುವ ವಿವರಗಳನ್ನು ಮಾಧ್ಯಮಗಳು ತೋರಿಸುತ್ತವೆ. ಮಾಧ್ಯಮಗಳು ನೀಡುವ ವಿಶುವಲ್‌ಗಳಲ್ಲಿ ಕುಟುಂಬ, ಅಂತಸ್ತು, ಜಾತಿ, ದೇವರುಗಳು ಎದ್ದು ಕಾಣುವ ಅಂಶಗಳು.

ಗಂಡ ಟಿಕೇಟು ಪಡೆಯುವುದನ್ನು ಹೆಂಡತಿ ಮಕ್ಕಳು ಸಂಭ್ರಮಿಸುವುದು, ತಂದೆ, ತಾಯಿ, ಅಣ್ಣ ಅತ್ತಿಗೆಯವರ ಕಾಲು ಹಿಡಿದು ಆಶೀರ್ವಾದ ಪಡೆಯುವುದು, ಸಮುದಾಯದ ಗುರುಗಳ ಕಾಲು ಹಿಡಿದು ಆಶೀರ್ವಾದ ಪಡೆಯುವುದು, ಮನೆ ದೇವರ ಅಥವಾ ಊರ ದೇವರ ಮುಂದೆ ಟಿಕೇಟು ಇಟ್ಟು ಆಶೀರ್ವಾದ ಪಡೆಯುವುದು, ಸಾವಿರಾರು ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸುವುದು ಇತ್ಯಾದಿಗಳನ್ನು ಮಾಧ್ಯಮಗಳು ಸತತವಾಗಿ ಬಿತ್ತರಿಸುತ್ತವೆ. ಇವೆಲ್ಲವೂ ಕುಟುಂಬ, ಸಮುದಾಯ ಕೇಂದ್ರಿತ ಊಳಿಗಮಾನ್ಯ ಮೌಲ್ಯಗಳು. ಇವು ವಿಸ್ತರಿಸಿದಷ್ಟು ಪ್ರಜಾಪ್ರಭುತ್ವ ದೂರ ಸರಿಯುತ್ತದೆ. ಆದರೆ ಇಂತಹ ಪ್ರಜಾಪ್ರಭುತ್ವವನ್ನು ದೂರೀಕರಿಸುವ ಮೌಲ್ಯಗಳನ್ನೇ ನಮ್ಮ ಸಂಸ್ಕೃತಿ ಹೆಸರಲ್ಲಿ ಚುನಾವಣೆ ಸಂದರ್ಭದಲ್ಲೂ ಜನರ ಪ್ರಜ್ಞೆಯ ಭಾಗ ಮಾಡಲಾಗುತ್ತಿದೆ. ಮಾಧ್ಯಮಗಳು ಯಾವುದರ ಮೇಲೆ ಫೋಕಸ್ ಮಾಡುತ್ತಿವೆ ಎನ್ನುವುದನ್ನು ಮೇಲೆ ನೋಡಿದ್ದೇವೆ. ಯಾವುದರ ಮೇಲೆ ಮಾಡುತ್ತಿಲ್ಲ ಎನ್ನುವುದರ ಮೇಲೆ ಗಮನ ಹರಿಸುವ.

ಚುನಾವಣೆಗಳು ನಮ್ಮ ಪ್ರತಿನಿಧಿಗಳನ್ನು ಆರಿಸುವ ಮುಖ್ಯ ಪ್ರಕ್ರಿಯೆ. ನಾವು ಚುನಾಯಿಸುವ ಪ್ರತಿನಿಧಿಗಳು ನಮ್ಮ ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ನೀತಿಗಳನ್ನು ರೂಪಿಸುತ್ತಾರೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ನಮ್ಮ ಬದುಕಿನ ಗುಣಮಟ್ಟವನ್ನು ನಿರ್ಧರಿಸುವ ಎಲ್ಲ ನೀತಿಗಳನ್ನು ನಾವು ಚುನಾಯಿಸುವ ಪ್ರತಿನಿಧಿಗಳು ನಿರ್ಧರಿಸುತ್ತಾರೆ. ಆದುದರಿಂದ ಸ್ಪರ್ಧಿಸುವ ಅಭ್ಯರ್ಥಿಗಳು ನಮ್ಮ ಆದ್ಯತೆಗಳನ್ನು, ಆಸಕ್ತಿಗಳನ್ನು ಪ್ರತಿನಿಧಿಸಲು ಶಕ್ತರೇ ಎನ್ನುವ ಅಂಶ ಚುನಾವಣ ಪ್ರಚಾರದ ಮುಖ್ಯ ಅಂಶ ಆಗಬೇಕು. ಶಿಕ್ಷಣ, ಆರೋಗ್ಯ ಅಥವಾ ಇತರ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿ ಅನುಭವ ಏನು? ಸಮಾಜ ಸೇವೆ ಮಾಡಿದ ಅನುಭವ ಎಷ್ಟಿದೆ? ಅಭ್ಯರ್ಥಿಯ ಆರ್ಥಿಕ ಹಿನ್ನೆಲೆ ಏನು? ಅಭ್ಯರ್ಥಿಯ ರಾಜಕೀಯ ಹಿನ್ನೆಲೆ ಏನು? ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಜಾರಿಗೆ ತರುವ ನೀತಿಗಳೇನು? ಇವೆಲ್ಲ ಚರ್ಚೆಗಳು ಚುನಾವಣ ಸಂದರ್ಭದಲ್ಲಿ ಮುಖ್ಯ ಭೂಮಿಕೆ ನಿಭಾಯಿಸಬೇಕು.

ಏಕೆಂದರೆ ಮೂರು ಹೊತ್ತಿನ ಊಟಕ್ಕೆ ಪರದಾಡುವವರು ಕೋಟ್ಯಧೀಶ ಪ್ರತಿನಿಧಿಗಳನ್ನು ಚುನಾಯಿಸಿದರೆ ಅಂತಹ ಪ್ರತಿನಿಧಿಗಳ ಜನಸಾಮಾನ್ಯರ ಹಿತಕ್ಕೆ ಪೂರಕವಾದ ಪಾಲಿಸಿಗಳನ್ನು ಬೆಂಬಲಿಸಲು ಸಾಧ್ಯವಿಲ್ಲ. ಅದೇ ರೀತಿ ಹಲವು ಸಮುದಾಯಗಳು ಒಟ್ಟಾಗಿ ಬದುಕುವ ಸಮಾಜದಲ್ಲಿ ಯಾವುದೋ ಒಂದು ಜಾತಿ/ಧರ್ಮ ಮುಖ್ಯ ಎಂದು ನಂಬುವ ಅಭ್ಯರ್ಥಿ ಸಮಾಜಹಿತ ರಕ್ಷಿಸುವ ಕೆಲಸ ಮಾಡಲು ಸಾಧ್ಯವಿಲ್ಲ. ಅನುಕೂಲಸ್ಥರ ಪರ ಇರುವ ಪಕ್ಷ ಅನನುಕೂಲಸ್ಥರ ಪರ ಇರಲು ಸಾಧ್ಯವಿಲ್ಲ. ಊಳಿಗಮಾನ್ಯ ಮೌಲ್ಯಗಳನ್ನು ಪ್ರತಿನಿಧಿಸುವ ಅಭ್ಯರ್ಥಿಗಳು ಪ್ರಜಾಪ್ರಭುತ್ವವನ್ನು ರಕ್ಷಿಸಿ ಬೆಳಸಲು ಸಾಧ್ಯವಿಲ್ಲ. ಆದರೆ ಇವು ಯಾವುವು ಮುಂಚೂಣಿಗೆ ಬರುವುದೇ ಇಲ್ಲ. ಹೆಚ್ಚು ಜನಸಂಖ್ಯೆ ಇರುವ ಜಾತಿಗಳ ➚



ಸ್ತ್ರೀದ್ವೇಷಿ ಬಿಜೆಪಿ

ಪ್ರಕಾಶ್ ಕಾರತ್

ಅಂತಾರಾಷ್ಟ್ರೀಯ ಪದಕ ವಿಜೇತರು ಸೇರಿದಂತೆ ದೇಶದ ಹಲವು ಪ್ರಮುಖ ಕುಸ್ತಿಪಟುಗಳು ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಭಾರತೀಯ ಕುಸ್ತಿ ಒಕ್ಕೂಟದ ಮುಖ್ಯಸ್ಥ, ಬಿಜೆಪಿ ಸಂಸದ, ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ಕೆಲವು ತರಬೇತುದಾರರ ವಿರುದ್ಧ ಕೆಲವು ಮಹಿಳಾ ಕುಸ್ತಿಪಟುಗಳು ನೀಡಿದ ಲೈಂಗಿಕ ಕಿರುಕುಳದ ದೂರುಗಳ ಬಗ್ಗೆ ಸರ್ಕಾರ ಮತ್ತು ಕ್ರೀಡಾ ಸಚಿವಾಲಯ ಕ್ರಮ ಕೈಗೊಳ್ಳದ ಕಾರಣ, ಅವರು ಜನವರಿಯಲ್ಲಿ ಮೊದಲ ಬಾರಿಗೆ ಧರಣಿ ನಡೆಸಿದ ಸ್ಥಳಕ್ಕೆ ಮತ್ತೆ ಮರಳಿದ್ದಾರೆ. ಕ್ರೀಡಾ ಸಚಿವಾಲಯ ಮೊದಲಿನಿಂದಲೂ ದೂರುಗಳನ್ನು ಗಂಭೀರವಾಗಿ ಪರಿಗಣಿಸಲು ನಿರಾಕರಿಸಿದೆ, ಇದರಿಂದಾಗಿ ಕುಸ್ತಿಪಟುಗಳು ಜನವರಿಯಲ್ಲಿ ಧರಣಿ ಕುಳಿತುಕೊಳ್ಳಬೇಕಾಯಿತು.

POSH ಕಾಯ್ದೆಯು ವಿಚಾರಣೆಗೆ ಬಾಕಿಯಿದ್ದು, ಈ ಕಾಯ್ದೆ ಪ್ರತಿವಾದಿಯನ್ನು ದೂರುದಾರರ ಸುರಕ್ಷತೆಯ ಮೇಲೆ ಪರಿಣಾಮ ಬೀರುವ ಯಾವುದೇ ಪ್ರಭಾವದ ಸ್ಥಾನದಿಂದ ತೆಗೆದುಹಾಕಬೇಕು ಎಂದು ಸ್ಪಷ್ಟವಾಗಿ ಹೇಳುತ್ತದೆ. ಆದರೆ, ಪ್ರತಿವಾದಿ, ಬಿಜೆಪಿ ಸಂಸದ, ಒಕ್ಕೂಟದ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ. ಮಹಿಳೆಯರಿಗೆ ಜನಬೆಂಬಲ ಹೆಚ್ಚಾದ ಹಿನ್ನೆಲೆಯಲ್ಲಿ ಸಚಿವಾಲಯವು ಒಂದು ತಿಂಗಳೊಳಗೆ ವಿಚಾರಣೆಯನ್ನು ಪೂರ್ಣಗೊಳಿಸುವ ಆದೇಶದೊಂದಿಗೆ ಸಮಿತಿಯನ್ನು ರಚಿಸುವಂತೆ ಒತ್ತಾಯಕ್ಕೆ ಒಳಗಾದರು. ಆದರೆ, ಮೂರು ತಿಂಗಳು ಕಳೆದ ನಂತರ ವರದಿ ಸಲ್ಲಿಕೆಯಾಗಿದೆ, ಆದರೆ ದೂರುದಾರರಿಗೆ ವರದಿಯ ಪ್ರತಿ ಸಿಕ್ಕಿಲ್ಲ. ಇದು ಮತ್ತೊಮ್ಮೆ ಕಾನೂನು ಉಲ್ಲಂಘನೆಯಾಗಿದೆ. ಯಾವುದೇ ವಿಚಾರಣೆಯ ವರದಿಯ ನಕಲನ್ನು ದೂರುದಾರರಿಗೆ ನೀಡುವುದು ಕರ್ತವ್ಯವಾಗಿದೆ, ಇದರಿಂದ ಅವಳು ಅಗತ್ಯವಿದ್ದರೆ ಮೇಲ್ಮನವಿ ಪ್ರಾಧಿಕಾರಕ್ಕೆ ಮನವಿ ಮಾಡಬಹುದು. ಆದರೆ ಬದಲಿಗೆ, ವರದಿಯು ಕಾರ್ಯವಿಧಾನದ ದೌರ್ಬಲ್ಯಗಳನ್ನು ಸೂಚಿಸುತ್ತದೆ, ಆದರೆ ಲೈಂಗಿಕ ಕಿರುಕುಳ ನಡೆದಿಲ್ಲ ಎಂದು ಸಚಿವಾಲಯ ಸಾರ್ವಜನಿಕವಾಗಿ ಹೇಳಿದೆ.

ನಂತರ ಮತ್ತೆ, ಧರಣಿ ಕುಳಿತುಕೊಳ್ಳುವ ಮೊದಲು ಮಹಿಳಾ ಕುಸ್ತಿಪಟುಗಳು ನವದೆಹಲಿಯ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡಿದ್ದು, ಅವರ ಪ್ರಕಾರ ಸಂಸದರ ನಿವಾಸದಲ್ಲಿ ಕನಿಷ್ಠ ನಾಲ್ಕು ಲೈಂಗಿಕ ಕಿರುಕುಳ ಪ್ರಕರಣಗಳು ಹಾಗೂ ಅಪ್ರಾಪ್ತರ ಪ್ರಕರಣ ಸೇರಿದಂತೆ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವುದರಿಂದ ಎಫ್‌ಐಆರ್ ದಾಖಲಿಸುವಂತೆ ಕೇಳಿದ್ದರು. ಎಫ್‌ಐಆರ್ ದಾಖಲಿಸಲು ಪೊಲೀಸರು ಕರ್ತವ್ಯ ಬದ್ಧರಾಗಿದ್ದಾರೆ. ಆದರೆ, ಗೃಹ ಸಚಿವಾಲಯದ ಅಧೀನದಲ್ಲಿರುವ ದೆಹಲಿ ಪೊಲೀಸರು ಇದನ್ನು ನಿರಾಕರಿಸಿದರು. ಮತ್ತೊಮ್ಮೆ ಇದು ಕಾನೂನಿನ ಅಣಕವಾಗಿದೆ.

ಇಡೀ ಪ್ರಕರಣವನ್ನು ವ್ಯವಹರಿಸಿದ ರೀತಿಯು ಸರ್ಕಾರವು ಕ್ರಮ ಕೈಗೊಳ್ಳಲು ಸಿದ್ಧರಿಲ್ಲ ಮತ್ತು ಸಮಯವನ್ನು ತಳ್ಳಲು ಬಯಸುತ್ತಿದೆ ಎಂಬುದನ್ನು ತೋರಿಸುತ್ತದೆ. ಕಾರಣ ಸ್ಪಷ್ಟವಾಗಿದೆ – ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಆರು ಬಾರಿ ಸಂಸದರಾಗಿದ್ದಾರೆ ಮತ್ತು ಉತ್ತರ ಪ್ರದೇಶದ ಗೊಂಡಾ ಮತ್ತು ಅಕ್ಕಪಕ್ಕದ ಪ್ರದೇಶಗಳ ಆಡಳಿತ ಪಕ್ಷದ ಪ್ರಭಾವಿ ಸದಸ್ಯರಾಗಿದ್ದಾರೆ. ಅವರನ್ನು ಅಪರಾಧದ ಪೂರ್ವಾಪರಗಳನ್ನು ಹೊಂದಿರುವ ಬಲಿಷ್ಠ ವ್ಯಕ್ತಿ, ಬಾಹುಬಲಿ ಎಂದು ಪರಿಗಣಿಸಲಾಗಿದೆ, ಮತ್ತು ಅವರು ಹೊಂದಿರುವ ಪ್ರಭಾವವು ಪಕ್ಷಕ್ಕೆ ಉಪಯುಕ್ತವಾಗಿದೆ. ಬಿಜೆಪಿಯ ವರ್ತನೆಯು, ತನ್ನ ನಾಯಕರು ಮತ್ತು ಮಂತ್ರಿಗಳ ವಿರುದ್ಧದ ಲೈಂಗಿಕ ಕಿರುಕುಳದ ಆರೋಪಗಳಿಂದ ಅವರನ್ನು ರಕ್ಷಿಸಲು ಮತ್ತು ಕಾನೂನಿನ ಕ್ರಮದಿಂದ ತಪ್ಪಿಸಲು ಪ್ರಯತ್ನಿಸುತ್ತಿದೆ.

ಜನವರಿಯಲ್ಲಿ ಕುಸ್ತಿಪಟುಗಳು ಪ್ರತಿಭಟನೆ ನಡೆಸುತ್ತಿದ್ದ ಸಮಯದಲ್ಲಿ, ಹರಿಯಾಣದ ಕ್ರೀಡಾ ಸಚಿವ ಸಂದೀಪ್ ಸಿಂಗ್ ವಿರುದ್ಧ ಕಿರಿಯ ಮಹಿಳಾ ಕೋಚ್‌ನಿಂದ ಲೈಂಗಿಕ ಕಿರುಕುಳದ ಮತ್ತೊಂದು ದೂರು ಬಂದಿತ್ತು. ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು, ಸಂದೀಪ್ ಸಿಂಗ್ ಅವರನ್ನು ಸಂಪುಟದಿಂದ ಕೈಬಿಡಲು ನಿರಾಕರಿಸಿ, ಅವರನ್ನು ಕ್ರೀಡಾ ಖಾತೆಯಿಂದ ಮಾತ್ರ ಮುಕ್ತಗೊಳಿಸಿದರು. ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸುವಂತೆ ಒತ್ತಾಯಿಸಿ ಕ್ರೀಡಾಪಟುಗಳು ಮತ್ತು ಮಹಿಳಾ ಸಂಘಟನೆಗಳು ಸುದೀರ್ಘ ಆಂದೋಲನ ನಡೆಸಿದರೂ, ಬಿಜೆಪಿ ಅದನ್ನು ಮಾಡಲು ನಿರಾಕರಿಸಿದೆ.

ತಮ್ಮ ಪ್ರತಿಭಟನೆಯನ್ನು ಪ್ರಾರಂಭಿಸಿದ ನಂತರ, ಏಳು ಮಹಿಳಾ ಕುಸ್ತಿಪಟುಗಳು ಪೊಲೀಸರು ಎಫ್‌ಐಆರ್ ದಾಖಲಿಸದಿರುವ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರ ನೇತೃತ್ವದ ಪೀಠವು ಆರೋಪಗಳು ಗಂಭೀರವಾಗಿದ್ದು, ಪೊಲೀಸರಿಗೆ ನೋಟಿಸ್ ಜಾರಿ ಮಾಡಿ ಈ ವಿಚಾರವನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ನ್ಯಾಯಾಲಯ ನಿರ್ಧರಿಸಿದೆ. ನ್ಯಾಯಾಲಯ ಅವರಿಗೆ ನಿರ್ದೇಶನ ನೀಡಿದರೆ ಮಾತ್ರ, ಪೊಲೀಸರು ಕಾರ್ಯನಿರ್ವಹಿಸುತ್ತಾರೆ ಎಂದು ತೋರುತ್ತದೆ. ತನ್ನ ನಾಯಕರು ಮತ್ತು ಚುನಾಯಿತ ಪ್ರತಿನಿಧಿಗಳ ಮೇಲಿನ ಲೈಂಗಿಕ ಕಿರುಕುಳದ ಆರೋಪಗಳನ್ನು ತಳ್ಳಿಹಾಕುವ ಮತ್ತು ಬಿಜೆಪಿಯಿಂದ ಅವರನ್ನು ರಕ್ಷಿಸಲು ಪ್ರಯತ್ನಿಸುವ ಮಾದರಿಯು ಮತ್ತೆ ಮತ್ತೆ ಮರುಕಳಿಸುತ್ತಿದೆ. 2017ರಲ್ಲಿ ಉತ್ತರ ಪ್ರದೇಶದ ಉನ್ನಾವೊದಲ್ಲಿ ನಡೆದ ಕುಖ್ಯಾತ ಕುಲದೀಪ್ ಸಿಂಗ್ ಸೆಂಗಾರ್ ಪ್ರಕರಣವನ್ನು ಮಾತ್ರ ನೆನಪಿಸಿಕೊಳ್ಳಬೇಕು. ಬಿಜೆಪಿ ಶಾಸಕ ಸೆಂಗಾರ್ ಅವರು 17 ವರ್ಷದ ಅಪ್ರಾಪ್ತ ಬಾಲಕಿಯ ಅತ್ಯಾಚಾರದಲ್ಲಿ ಆರೋಪಿಯಾಗಿದ್ದರು ಮತ್ತು ಆರಂಭದಲ್ಲಿ ರಾಜ್ಯ ಸರ್ಕಾರ ಮತ್ತು ಪೊಲೀಸರು ಅವರನ್ನು ರಕ್ಷಿಸಲು ಪ್ರಯತ್ನಿಸಿದರು. ಸಾರ್ವಜನಿಕ ಪ್ರತಿಭಟನೆ ಮತ್ತು ಹೈಕೋರ್ಟ್ ಮಧ್ಯಪ್ರವೇಶದ ನಂತರವೇ ಸಿಬಿಐಗೆ ಪ್ರಕರಣವನ್ನು ಹಸ್ತಾಂತರಿಸಲಾಯಿತು ಮತ್ತು ಅಂತಿಮವಾಗಿ ಸೆಂಗಾರ್ ಅವರನ್ನು ಬಂಧಿಸಿ ಶಿಕ್ಷೆ ವಿಧಿಸಲಾಯಿತು.

ಬ್ರಿಜ್ ಭೂಷಣ್ ಶರಣ್ ಸಿಂಗ್ ವಿಷಯವೂ ಅದೇ ಮಾದರಿಯನ್ನು ಅನುಸರಿಸಿದೆ. ಉತ್ತರ ಪ್ರದೇಶದಲ್ಲಿ "ಅಪರಾಧಿಗಳು ಮತ್ತು ಸಮಾಜವಿರೋಧಿಗಳು ಗತಕಾಲದ ವಿಷಯವಾಗಿ ಮಾರ್ಪಟ್ಟಿದ್ದಾರೆ" ಎಂದು ಅಲ್ಲಿನ ಮುಖ್ಯಮಂತ್ರಿ ಆಧಿತ್ಯನಾಥ್ ಇತ್ತೀಚೆಗೆ ಜಂಬ ಕೊಚ್ಚಿಕೊಂಡಿದ್ದಾರೆ.

ಅನು: ಸಿಚಿ

➘ ಕೋಟ್ಯಧೀಶ ಪುರುಷರು ಅಭ್ಯರ್ಥಿಗಳಾಗಲು ಯೋಗ್ಯರೆನ್ನುವ ಸಂದೇಶವನ್ನು ರಾಜಕೀಯ ಪಕ್ಷಗಳು, ಮಾಧ್ಯಮಗಳು, ಗಣ್ಯರು, ಅಧಿಕಾರಿಗಳು ಕೊಡುತ್ತಾರೆ. ತಮ್ಮ ಬದುಕನ್ನು ಸುಧಾರಿಸಲು ಏನೇನೂ ಕೊಡುಗೆ ನೀಡಲು ಯೋಗ್ಯರಲ್ಲದವರ ಪಟ್ಟಿಯಿಂದ ಒಬ್ಬರನ್ನು ಚುನಾಯಿಸುವುದು ಮಾತ್ರ ನಿಮ್ಮ ಕರ್ತವ್ಯ ಎನ್ನುವ ಸಂದೇಶವನ್ನು ಸಾಮಾನ್ಯ ಮತದಾರರಿಗೆ ನೀಡಲಾಗುತ್ತಿದೆ. ಇವುಗಳೊಂದಿಗೆ ಜನರ ರಾಜಕೀಯ ಆಯ್ಕೆಯನ್ನು ಕುಂಠಿಸುವ ಮತ್ತೊಂದು ಅಂಶ ಕೂಡ ಇದೆ. ಅದೇನೆಂದರೆ ಮೆಜಾರಿಟಿ ಮೈನಾರಿಟಿಗಳನ್ನು ಕಟ್ಟಿಕೊಳ್ಳುವ ವಿಧಾನ.

ಮೆಜಾರಿಟಿ ಮೈನಾರಿಟಿ

ಜಾತಿ, ಲಿಂಗ, ಧರ್ಮಗಳು ಸಾಮಾಜಿಕ ಗುರುತುಗಳು. ಇವು ನಮ್ಮ ಸಾಮಾಜಿಕ ಸ್ಥಾನಮಾನವನ್ನು ಸೂಚಿಸುತ್ತವೆ. ಇವು ಯಾವುವು ನಮಗೆ ಊಟ, ಉದ್ಯೋಗ, ಶಿಕ್ಷಣ, ಆರೋಗ್ಯ, ವಸತಿ, ನೈಮರ್ಲ್ಯಗಳನ್ನು ಕೊಡುವುದಿಲ್ಲ. ಆದರೆ ಇವೇ ಗುರುತಗಳ ನೆಲೆಯಲ್ಲಿ ಕಟ್ಟಿಕೊಳ್ಳುವ ಮೆಜಾರಿಟಿ ಮೈನಾರಿಟಿಗಳು ಚುನಾವಣ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಅಂದರೆ ಬಿಜೆಪಿ ಪಕ್ಷ ಧರ್ಮದ ನಲೆಯಲ್ಲಿ ಮೆಜಾರಿಟಿ (ಹಿಂದೂ) ಮೈನಾರಿಟಿಗಳನ್ನು (ಮುಸ್ಲಿಮರು, ಕ್ರಿಶ್ಚಿಯನ್ನರು) ಕಟ್ಟಿಕೊಳ್ಳುತ್ತಿದೆ. ಕಾಂಗ್ರೆಸ್ ಮತ್ತು ಇತರ ಪ್ರಾದೇಶಿಕ ಪಕ್ಷಗಳು ಜಾತಿ ನೆಲೆಯಲ್ಲಿ ಮೇಜಾರಿಟಿ ಮೈನಾರಿಟಿಗಳನ್ನು ಕಟ್ಟಿಕೊಳ್ಳುತ್ತಿವೆ. ಇದೇ ಕಾರಣದಿಂದ ಎಲ್ಲ ಪಕ್ಷಗಳಿಂದಲೂ ಹೆಚ್ಚು ಜನಸಂಖ್ಯೆ ಇರುವ ಜಾತಿ, ಧರ್ಮಗಳಿಂದ ಹೆಚ್ಚು ಪ್ರತಿನಿಧಿಗಳು ಚುನಾಯಿತರಾಗುತ್ತಾರೆ. ಆದರೆ ಆರ್ಥಿಕ ದೃಷ್ಟಿಯಿಂದ ನೋಡಿದರೆ ಇನ್ನೊಂದು ಮೆಜಾರಿಟಿ ಮೈನಾರಿಟಿ ಕಾಣುತ್ತದೆ.

ಮುಖ್ಯವಾಗಿ ಮೂರು ಆರ್ಥಿಕ ಚಟುವಟಿಕೆಗಳನ್ನು ಗಮನಿಸಬಹುದು. ಒಂದು, ಕೃಷಿ, ಎರಡು, ವ್ಯಾಪಾರ ಉದ್ದಿಮೆ ಮತ್ತು ಮೂರು, ಉದ್ಯೋಗ. ಕೃಷಿಯಲ್ಲಿ ಸಣ್ಣ, ಅತೀ ಸಣ್ಣ, ಮಧ್ಯಮ ಮತ್ತು ದೊಡ್ಡ ಕೃಷಿಕರೆನ್ನುವ ನಾಲ್ಕು ಗುಂಪುಗಳಿವೆ. ಶೇ.75–80ರಷ್ಟು ಕೃಷಿಕರು ಸಣ್ಣ ಮತ್ತು ಅತೀ ಸಣ್ಣ ಕೃಷಿಕರು ಅಥವಾ ಮೇಜಾರಿಟಿ ಕೃಷಿಕರು. ಮಧ್ಯಮ ಮತ್ತು ದೊಡ್ಡ ಕೃಷಿಕರು ಅಲ್ಪಸಂಖ್ಯಾತರು ಅಥವಾ ಮೈನಾರಿಟಿ ಕೃಷಿಕರು. ವ್ಯಾಪಾರ ಉದ್ದಿಮೆಯಲ್ಲೂ ಸಣ್ಣ ಅತೀ ಸಣ್ಣ, ಮಧ್ಯಮ ಮತ್ತು ದೊಡ್ಡ ವ್ಯಾಪಾರ ಉದ್ದಿಮೆಗಳಿವೆ. ಇಲ್ಲೂ ಶೇ.90ರಷ್ಟು ಅಥವಾ ಮೆಜಾರಿಟಿ ವ್ಯಾಪಾರ ಉದ್ದಿಮೆಗಳು ಸಣ್ಣ ಅತೀ ಸಣ್ಣ ಮತ್ತು ಮಧ್ಯಮ ಗಾತ್ರದ ವ್ಯಾಪಾರ ಉದ್ದಿಮೆಗಳು. ದೊಡ್ಡ ವ್ಯಾಪಾರ ಉದ್ದಿಮೆಗಳು ಮೈನಾರಿಟಿಗಳು. ಉದ್ಯೋಗದಲ್ಲಿ ಸಂಘಟಿತ ಮತ್ತು ಅಸಂಘಟಿತ ಎನ್ನುವ ಎರಡು ಗುಂಪುಗಳಿವೆ. ಸಂಬಳ, ಉದ್ಯೋಗ ಅಥವಾ ಸಾಮಾಜಿಕ ಭದ್ರತೆಗಳಿಲ್ಲದ ಉದ್ಯೋಗಿಗಳನ್ನು ಅಸಂಘಟಿತ ಅಥವಾ ಅನಧಿಕೃತ ಉದ್ಯೋಗಿಗಳೆನ್ನುತಾರೆ. ನಮ್ಮಲ್ಲಿ ಮೆಜಾರಿಟಿ (ಶೇ.80ರಷ್ಟು) ಉದ್ಯೋಗಿಗಳು ಅಸಂಘಟಿತ ಉದ್ಯೋಗಿಗಳು ಅಥವಾ ಯಾವುದೇ ಭದ್ರತೆಗಳಿಲ್ಲದ ಉದ್ಯೋಗಿಗಳು. ಸಂಘಟಿತ ಅಥವಾ ಭದ್ರತೆಗಳಿರುವ ಉದ್ಯೋಗಳು ಮೈನಾರಿಟಿಗಳು.

ಸಾಮಾಜಿಕ ನೆಲೆಯಲ್ಲಿ ನೋಡಿದಾಗ ಹೆಚ್ಚು ಸಂಖ್ಯೆ ಇರುವ ಜಾತಿ, ಧರ್ಮಗಳಿಂದ ಹೆಚ್ಚು ಪ್ರತಿನಿಧಿಗಳು ಚುನಾಯಿಸಲ್ಪಡುತ್ತಾರೆ. ಆದರೆ ಆರ್ಥಿಕ ದೃಷ್ಟಿಯಿಂದ ಮೇಜಾರಿಟಿಗಳು ಯಾವುದೇ ಕ್ಷೇತ್ರದಿಂದ ಚುನಾಯಿತರಾಗುವುದಿಲ್ಲ. ಅಂದರೆ ಸಣ್ಣ ಅತೀ ಸಣ್ಣ ಕೃಷಿಕರು ಕೃಷಿ ಕ್ಷೇತ್ರದ ಮೇಜಾರಿಟಿಗಳು. ಆದರೆ ಇಲ್ಲಿ ಇವರ್‍ಯಾರು ಚುನಾಯಿತರಾಗುವುದಿಲ್ಲ. ಕೇವಲ ದೊಡ್ಡ ಕೃಷಿಕರು ಮಾತ್ರ ಚುನಾಯಿತರಾಗುತ್ತಾರೆ. ಸಣ್ಣ, ಅತೀ ಸಣ್ಣ ವ್ಯಾಪಾರ ಉದ್ದಿಮೆಗಳು ಈ ಕ್ಷೇತ್ರದ ಮೇಜಾರಿಟಿಗಳು. ಆದರೆ ಇವರ್‍ಯಾರು ಈ ಕ್ಷೇತ್ರದಿಂದ ಚುನಾಯಿತರಾಗುವುದಿಲ್ಲ. ಈ ಕ್ಷೇತ್ರದಿಂದ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವ ದೊಡ್ಡ ವ್ಯಾಪಾರ ಉದ್ದಿಮೆದಾರರು ಚುನಾಯಿತರಾಗುತ್ತಾರೆ. ಇದೇ ರೀತಿಯಲ್ಲಿ ಉದ್ಯೋಗ ಕ್ಷೇತ್ರದಿಂದಲೂ ಅಸಂಘಟಿತ ಮೆಜಾರಿಟಿ ಕಾರ್ಮಿಕರಿಂದ ಒಬ್ಬರು ಚುನಾಯಿತರಾಗುವುದಿಲ್ಲ. ಅದರ ಬದಲು ಮೈನಾರಟಿಗಳಾದ ಸಂಘಟಿತ ಉದ್ಯೋಗಿಗಳು ಚುನಾಯಿತರಾಗುತ್ತಾರೆ. ಏಕೆ ಊಟ, ಉದ್ಯೋಗ, ಶಿಕ್ಷಣ, ಆರೋಗ್ಯ ಕೊಡುವ ಆರ್ಥಿಕ ಸ್ಥಿತಿ ಚುನಾವಣೆಯಲ್ಲಿ ಪ್ರಮುಖ ವಹಿಸುವುದಿಲ್ಲ? ಅಥವಾ ಬದುಕಿನ ಗುಣಮಟ್ಟದ ಮೇಲೆ ಅತ್ಯಲ್ಪ ಪ್ರಭಾವ ಬೀರುವ ಸಾಮಾಜಿಕ ಸ್ಥಿತಿ ಏಕೆ ಚುನಾವಣೆಯಲ್ಲಿ ಮುಖ್ಯವಾಗುತ್ತದೆ? ಎನ್ನುವುದು ಅರ್ಥವಾಗಬೇಕಾದರೆ ಜನರ ಮುಂದಿರುವ ರಾಜಕೀಯ ಆಯ್ಕೆಗಳ ಕಿರು ಪರಿಚಯ ಅಗತ್ಯ.

ಆರ್‌ಎಸ್‌ಎಸ್ ನ ಮಾರ್ಗದರ್ಶಕರಾಗಿ ಸಾವರ್ಕರ್

ಪುಟ 2 ರಿಂದ

ಬ್ರಿಟಿಷ್ ಸಶಸ್ತ್ರ ಪಡೆಗಳನ್ನು ಸೇರಲು ಕರೆ ನೀಡುವಾಗಲೇ, ಸುಭಾಷ್ ಚಂದ್ರ ಬೋಸ್ ಬ್ರಿಟಿಷ್ ದೊರೆಗಳ ಕಪಿಮುಷ್ಠಿಯಿಂದ ಭಾರತವನ್ನು ವಿಮೋಚನೆಗೊಳಿಸುವ ಸಲುವಾಗಿ ವಿಮೋಚನಾ ಸೇನೆಯನ್ನು ಸಂಘಟಿಸುತ್ತಿದ್ದರು ಎನ್ನುವುದನ್ನು.

ಹಿಂದೂ ಮಹಾಸಭಾದ ಪತ್ರಾಗಾರದಲ್ಲಿ ಲಭ್ಯವಿರುವ ಈ ಎಲ್ಲಾ ಅಂಶಗಳು ಎರಡು ಪ್ರಮುಖ ವಾಸ್ತವಗಳನ್ನು ಸಾಬೀತುಪಡಿಸುತ್ತವೆ. ಮೊದಲನೆಯದು, ಸಾವರ್ಕರ್‌ವಾದವು ಆರ್‌ಎಸ್‌ಎಸ್‌ಗೆ ತಾತ್ವಿಕ ಹಾಗೂ ಸಂಘಟನಾ ಬುನಾದಿಯನ್ನು ಒದಗಿಸುತ್ತಿತ್ತು. ಎರಡನೆಯದಾಗಿ, ಸಾವರ್ಕರ್ ಅವರ ಹೆಜ್ಜೆಯ ಜಾಡಿನಲ್ಲೇ ಹೋಗುತ್ತಾ ಆರ್‌ಎಸ್‌ಎಸ್ ಸ್ವಾತಂತ್ರ್ಯ ಚಳವಳಿಯಿಂದ ದೂರ ಉಳಿದಿತ್ತು.

ನಾಗಪುರದಲ್ಲಿನ ಆರ್‌ಎಸ್‌ಎಸ್ ಕೇಂದ್ರ ಕಾರ್ಯಾಲಯದಲ್ಲಿ ದೀರ್ಘಕಾಲ ನಾಥೂರಾಂ ಗೊಡ್ಸೆಯ ನೆನಪಿನಲ್ಲಿ ಪವಿತ್ರ ಸ್ಮಾರಕವೊಂದು ಇತ್ತು ಎನ್ನುವುದು ರಹಸ್ಯವಾಗಿ ಉಳಿದಿಲ್ಲ. ಅದರ ಫಲಕದಲ್ಲಿ ಹೀಗೆ ಬರೆಯಲಾಗಿತ್ತು: “ಒಂದು ದಿನ ಅವರು (ಆರ್‌ಎಸ್‌ಎಸ್) ಅಧಿಕಾರಕ್ಕೆ ಬಂದಾಗ ಇನ್ನೂ ಹೆಚ್ಚು ಯೋಗ್ಯವಾದ ಸ್ಮಾರಕವೊಂದನ್ನು ಸ್ಥಾಪಿಸಲಾಗುವುದು.”

(ಮುಂದುವರೆಯುವುದು)

ಮತ್ತೆ ವಿಶ್ವ ಕಾರ್ಮಿಕರ ದಿನವಾದ ಮೇ ಡೇ ಬಂದಿದೆ. ಈ ವರ್ಷ ಕಾರ್ಮಿಕರ ಪಾಲಿಗೆ ಮಾರಕವಾದ ಮತ್ತಷ್ಟು ಕಾರ್ಮಿಕ ವಿರೋಧಿ ಕಾಯ್ದೆಗಳು ಜಾರಿಗೆ ಬಂದಿವೆ. 8ಗಂಟೆ ಕೆಲಸದ ಸಮಯವನ್ನು 12 ಗಂಟೆಗಳಿಗೆ ಹೆಚ್ಚಿಸುವ ಮೂಲಕ ಕಾರ್ಮಿಕರು ಹೋರಾಟದಿಂದ ಪಡೆದ ಹಕ್ಕುಗಳನ್ನು ಕಸಿದುಕೊಳ್ಳತೊಡಗಿದ್ದಾರೆ. 8 ಗಂಟೆ ಕೆಲಸದ ಹಕ್ಕುಗಳಿಗಾಗಿ ಕಾರ್ಮಿಕರು ತಮ್ಮ ಪ್ರಾಣವನ್ನೇ ಬಲಿಕೊಟ್ಟು ನಡೆಸಿದ ಹೋರಾಟದ ನೆನಪು ಮಾಡಿಕೊಳ್ಳುವ ಮತ್ತು ಹೋರಾಟದಿಂದ ಗಳಿಸಿದ ಹಕ್ಕುಗಳನ್ನು ಉಳಿಸಿಕೊಳ್ಳುವ ಹಾಗೂ ಮತ್ತಷ್ಟು ಗಳಿಸಿಕೊಳ್ಳಲು ಪಣತೊಡುವ ದಿನವನ್ನಾಗಿ ಮೇ ದಿನವನ್ನು ಆಚರಿಸೋಣ.



ಮೇ ದಿನ

ಹಕ್ಕುಗಳನ್ನು ಉಳಿಸಿಕೊಳ್ಳಲು, ಮತ್ತಷ್ಟು ಪಡೆಯಲು ಪಣತೊಡೋಣ
12 ಗಂಟೆಗಳ ಕೆಲಸದ ಅವಧಿ ವಿರೋಧಿಸೋಣ

19ನೇ ಶತಮಾನದಲ್ಲಿ ಕಾರ್ಮಿಕರು ದಿನವೊಂದರಲ್ಲಿ 14ರಿಂದ 18 ಗಂಟೆಗಳ ಸಮಯ ದುಡಿಯುತ್ತಿದ್ದರು. ಇದು ಅವರ ಆರೋಗ್ಯ ಮತ್ತು ಕುಟುಂಬದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿತ್ತು. ಇಂತಹ ಪರಿಸ್ಥಿತಿಯಿಂದ ಹೊರಬರಲು ಕಾರ್ಮಿಕರು ಜಗತ್ತಿನ ಹಲವಡೆಗಳಲ್ಲಿ ದೊಡ್ಡ ಪ್ರಮಾಣದ ಹೋರಾಟ ನಡೆಸಬೇಕಾಯಿತು. ಇಂತಹ ಹೋರಾಟಗಳಲ್ಲಿ ಹಲವು ಕಾರ್ಮಿಕರು ಪ್ರಾಣ ತೆತ್ತರು. ಸಹಸ್ರಾರು ಕಾರ್ಮಿಕರು ಪ್ರಭುತ್ವದ ದಾಳಿಗೆ ಎದುರಿಸಿ ತಮ್ಮ ರಕ್ತ ಚಲ್ಲಿದರು.

ಕಾರ್ಮಿಕರ ಹೋರಾಟದ ಫಲವಾಗಿ ನಮ್ಮ ದೇಶದಲ್ಲಿಯೂ ದಿನದ ಕೆಲಸದ ಸಮಯವನ್ನು 8 ಗಂಟೆಗಳಿಗೆ ನಿಗದಿಪಡಿಸಿ ನಿಯಮ ರೂಪಿಸಲಾಗಿದೆ. ಇಂದು ಅದನ್ನು ಬದಲಾಯಿಸಲು ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರ ಹಲವು ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಬಿಜೆಪಿ ನೇತೃತ್ವದ ಕರ್ನಾಟಕ ರಾಜ್ಯ ಸರ್ಕಾರ ತನ್ನ ಕೊನೆಯ ಅಧಿವೇಶನದಲ್ಲಿ ಮತ್ತು ವಿಧಾನಸಭಾ ಚುನಾವಣೆ ನಡೆಯುವ ಸಮೀಪದಲ್ಲೇ ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ತಂದು, ದಿನದ 8 ಗಂಟೆ ಕೆಲಸದ ಸಮಯಯನ್ನು 12 ಗಂಟೆಗಳಿಗೆ ಹೆಚ್ಚಿಸುವ ಕಾಯ್ದೆ ಜಾರಿಗೆ ತರುವ ಮೂಲಕ, ಬಿಜೆಪಿಯ ಕಾರ್ಮಿಕ ವಿರೋಧಿ ಧೋರಣೆ ಏನೆಂಬುದನ್ನು ಯಾವುದೇ ಅಳುಕಿಲ್ಲದೆ, ಧೈರ್ಯದಿಂದ ತೋರಿಸಿಕೊಂಡಿದೆ. ನಾವು ಏನೇ ಕಾರ್ಮಿಕ ವಿರೋಧಿ ನೀತಿಗಳನ್ನು, ಜನವಿರೋಧಿ ನೀತಿಗಳನ್ನು ಜಾರಿಗೆ ತಂದರೂ ಕಾರ್ಮಿಕರು, ಜನಸಾಮಾನ್ಯರು, ಒಟ್ಟಾರೆ ದುಡಿಯುವ ವರ್ಗದ ಮತದಾರರನ್ನು ಜಾತಿ, ಧರ್ಮ, ಭಾಷೆ, ಹುಸಿ ರಾಷ್ಟ್ರಪ್ರೇಮ, ಧಾರ್ಮಿಕ ನಂಬಿಕೆಗಳ ಆಧಾರದಲ್ಲಿ ತಮ್ಮ ಪರವಾಗಿ ಸೆಳೆಯಲು ಸಾಧ್ಯ ಎಂಬ ಅವರ ನಂಬಿಕೆಯೇ ಇದಕ್ಕೆಲ್ಲ ಕಾರಣ. ಕಾರ್ಮಿಕರಲ್ಲಿನ ವರ್ಗ ಪ್ರಜ್ಞೆಯ ಕೊರತೆ, ಮತ್ತು ಬಂಡವಾಳಶಾಹಿ ಪಕ್ಷಗಳ ನೀತಿ ನಿಲುವುಗಳ ಕುರಿತಾದ ತಿಳುವಳಿಕೆ ಇಲ್ಲದಿರುವುದೇ, ಬಿಜೆಪಿಯಂತಹ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಈ ರೀತಿಯ ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳನ್ನು ಚುನಾವಣೆಯಲ್ಲಿನ ಸೋಲಿನ ಭಯವಿಲ್ಲದೆ ಜಾರಿಗೆ ತರುತ್ತಿವೆ.



ಕೆಲಸದ ಸಮಯವನ್ನು ಹೆಚ್ಚಿಸುವುದೆಂದರೆ ಕಾರ್ಮಿಕರನ್ನು ಕೊಂದಂತೆ

ಜಗತ್ತಿನ ಕೈಗಾರಿಕಾ ಕ್ರಾಂತಿಯ ಉತ್ತುಂಗದಲ್ಲಿ 18 ಗಂಟೆಗಳ ಕೆಲಸದ ದಿನಗಳು ಕಾರ್ಮಿಕರನ್ನು ಕ್ರೂರವಾಗಿ ಹಿಂಡುತ್ತಿದ್ದವು. ಈ ಹೆಚ್ಚುವರಿ ಕೆಲಸದ ಸಮಯವು ಕಾರ್ಮಿಕರ ಮೇಲೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕೆಟ್ಟ ಪರಿಣಾಮಗಳನ್ನು ಉಂಟುಮಾಡಿತು. ಆ ದಿನಗಳಲ್ಲಿ ಬ್ರಿಟನ್ ನಲ್ಲಿನ ಕಾರ್ಮಿಕರ ಸ್ಥಿತಿಯನ್ನು, ಕೆಲಸಗಾರನ ಸಾವಿಗೆ ಕಾರಣವಾಗುವ ಕೆಲಸದ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿದ ಕಮ್ಯುನಿಸಂನ ಸಂಸ್ಥಾಪಕರಲ್ಲಿ ಒಬ್ಬರಾದ ಎಂಗೆಲ್ಸ್, “ಮಾಲೀಕರು ಹೆಚ್ಚಿನ ಸಮಯ ದುಡಿಸಿಕೊಳ್ಳುವುದು ಕೆಲಸಗಾರನನ್ನು ಕೊಲ್ಲುವುದಕ್ಕೆ ಸಮನಾಗಿದೆ." ಎಂದಿದ್ದರು. ಇದೇ ಸಂದರ್ಭದಲ್ಲಿ "ಎಂಟು ಗಂಟೆಗಳ ಕೆಲಸ, ಎಂಟು ಗಂಟೆಗಳ ವಿಶ್ರಾಂತಿ, ಎಂಟು ಗಂಟೆಗಳ ಮನರಂಜನೆ" ಎಂಬ ಘೋಷಣೆಯೊಂದಿಗೆ ಅಮೇರಿಕನ್ ಫೆಡರೇಶನ್ ಆಫ್ ಇಂಡಸ್ಟ್ರಿಯಲಿಸ್ಟ್ ತನ್ನ ಹೋರಾಟವನ್ನು 1884 ರಲ್ಲಿ ಪ್ರಾರಂಭಿಸಿತು.

ಅಮೆರಿಕದ ಕಾರ್ಮಿಕರ ಪ್ರಾಣ ತ್ಯಾಗ

ಮೇ 1, 1886 ರಂದು, ದಿನವೊಂದರಲ್ಲಿ 8 ಗಂಟೆ ಕೆಲಸದ ಸಮಯಕ್ಕಾಗಿ ಅಮೆರಿಕಾದ ಕಾರ್ಮಿಕರು ಚಿಕಾಗೋ ನಗರದ ಬೀದಿಗಳಲ್ಲಿ ಪ್ರತಿಭಟನೆಗಿಳಿದರು. 13,000 ಕಾರ್ಖಾನೆಗಳ ಸುಮಾರು ಮೂರು ಲಕ್ಷ ಕಾರ್ಮಿಕರು ಮುಷ್ಕರಕ್ಕಿಳಿದರು. ಕೆಲಸದ ಅವಧಿ ಕಡಿತಗೊಳಿಸುವಂತೆ ಒತ್ತಾಯಿಸಿ ನಡೆಸುತ್ತಿದ್ದ ಈ ಪ್ರತಿಭಟನೆಯಯನ್ನು ಹತ್ತಿಕ್ಕಲು ಭದ್ರತಾ ಪಡೆಗಳೊಂದಿಗೆ ಕಾರ್ಮಿಕರ ಮೇಲೆ ದಾಳಿ ನಡೆಸಲಾಯಿತು. ಭದ್ರತಾ ಪಡೆಗಳ ದಾಳಿಯನ್ನು ಖಂಡಿಸಿ ಮೇ 4ರಂದು ಚಿಕಾಗೋ ನಗರದ ಹೇ ಮಾರ್ಕೆಟ್ ಪ್ರದೇಶದಲ್ಲಿ ಕಾರ್ಮಿಕರ ಬೃಹತ್ ಪ್ರತಿಭಟನೆಗೆ ಕರೆ ನೀಡಲಾಯಿತು. ಶಾಂತಿಯುತ ಪ್ರತಿಭಟನೆಯ ನಡುವೆ ಅಪರಿಚಿತ ವ್ಯಕ್ತಿಯೊಬ್ಬರು ಪೊಲೀಸರ ಮೇಲೆ ಬಾಂಬ್ ಸ್ಫೋಟಿಸಿದರು. ನಂತರ ನಡೆದ ಪೊಲೀಸರ ಗುಂಡಿನ ದಾಳಿಯಿಂದಾಗಿ ಏಳು ಪೊಲೀಸರು ಸೇರಿದಂತೆ ಕೆಲವು ಕಾರ್ಮಿಕರು ಸಾವನ್ನಪ್ಪಿದರು. ಹತ್ತಾರು ಜನರು ಗಾಯಗೊಂಡರು.

ಘಟನೆಯ ನಂತರ, ಕಾರ್ಮಿಕ ಸಂಘಟನೆಗಳ 8 ನಾಯಕರನ್ನು ಪೊಲೀಸರು ಬಂದಿಸಿದರು. ನವೆಂಬರ್ 11, 1887ರಂದು ಆಲ್ಬರ್ಟ್ ಪಾರ್ಸನ್ಸ್, ಆಗಸ್ಟ್ ಸ್ಪೈಸ್, ಜಾರ್ಜ್ ಎಂಗೆಲ್ ಮತ್ತು ಅಡಾಲ್ಫ್ ಫಿಶರ್ ಈ ನಾಲ್ವರನ್ನು ಗಲ್ಲಿಗೇರಿಸಲಾಯಿತು. ಲೂಯಿಸ್ ಲಿಂಗ್ ಪೊಲೀಸರ ಬಂಧನದಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡರು. ಇನ್ನೂ ಕೆಟ್ಟ ಸಂಗತಿಯೆಂದರೆ ಆರೋಪಕ್ಕೊಳಗಾದ ಯಾರೂ ಬಾಂಬಾ ಎಸೆದಿರಲಿಲ್ಲ ಮತ್ತು ಎಂಟು ಮಂದಿಯಲ್ಲಿ ಇಬ್ಬರು ಮಾತ್ರ ಆ ಸಮಯದಲ್ಲಿ ಹೇಮಾರ್ಕೆಟ್‌ನಲ್ಲಿನ ಪ್ರತಿಭಟನಾ ಸ್ಥಳದಲ್ಲಿದ್ದರು ಎಂಬುದಕ್ಕೆ ಸಾಕಷ್ಟು ಸಾಕ್ಯಾಧಾರಗಳಿದ್ದವು.

ಇವರ್ಯಾರೂ ಯಾವುದೇ ಅಪರಾಧ ಮಾಡಿರಲಿಲ್ಲ. ಘಟನೆ ನಡೆದ ಸ್ಥಳದಲ್ಲಿ ಇರದ ಇನ್ನಿತರ ಆರೋಪಿಗಳು ಅಪರಾಧದಲ್ಲಿ ಭಾಗಿಯಾಗಿದ್ದಾರೆ ಎಂಬ ಕಾರಣಕ್ಕೆ ಆದ ಶಿಕ್ಷೆ ಅದಲ್ಲ. ಬದಲಾಗಿ ಉದ್ದೇಶಪೂರ್ವಕವಾಗಿ ಈ ಕಾರ್ಮಿಕ ನಾಯಕರಿಗೆ ಶಿಕ್ಷೆ ವಿಧಿಸಲಾಗಿದೆ ಎಂಬುದನ್ನು ಇದು ತೋರಿಸುತ್ತದೆ. 1893 ರಲ್ಲಿ, ಇಲಿನಾಯ್ಸ್ ಗವರ್ನರ್ ಜಾನ್ ಪೀಟರ್ ಆಲ್ಟೆಲ್ಡ್ ಉಳಿದ ಆರೋಪಿಗಳನ್ನು ನಿರಪರಾಧಿಗಳು ಎಂದು ಬಿಡುಗಡೆ ಮಾಡಿದರು ಮತ್ತು ಅವರ ಮೇಲೆ ಆರೋಪ ಹೊರಿಸಿದ್ದನ್ನು ಕಟುವಾಗಿ ಟೀಕಿಸಿದರು. ವಾಸ್ತವವಾಗಿ, ಮರಣದಂಡನೆಗೊಳಗಾದ ಈ ಕಾರ್ಮಿಕ ನಾಯಕರು ನಿರಂತರವಾಗಿ ತಾತ್ವಿಕ ಹೋರಾಟವನ್ನು ನಡೆಸಿದ್ದಕ್ಕಾಗಿ ಕೊಲ್ಲಲ್ಪಟ್ಟರು. ಅಂತಹ ಹೋರಾಟಗಳು ಮತ್ತು ತ್ಯಾಗಗಳ ನಂತರವೇ ಇಂದು ನಾವು ಅನುಭವಿಸುವ ಹಕ್ಕುಗಳು, ಕನಿಷ್ಠ ಯೋಗ್ಯವಾದ ಕೆಲಸದ ಸಮಯ ಮತ್ತು ಕೆಲಸದ ಪರಿಸ್ಥಿತಿಗಳು ಸೃಷ್ಟಿಯಾಗಲು ಸಾಧ್ಯವಾಗಿದೆ. ಮತ್ತು ನಾವು ನಮ್ಮ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಲೇ, ನಮ್ಮ ಹಕ್ಕುಗಳನ್ನು ನಾಶಮಾಡಲು ಹೊರಟಿರುವವರ ವಿರುದ್ಧ ಹೋರಾಡಬೇಕಾಗಿದೆ.

ಕಾರ್ಮಿಕ ವಿರೋಧಿ ನೀತಿಗಳ ಜಾರಿಗೆ ಕೊರೋನಾ ನೆಪ

ಕೈಗಾರಿಕೆಗಳ ಮೇಲೆ ಕೊರೋನಾ ಸಾಂಕ್ರಾಮಿಕ ಬೀರಿದ ಪರಿಣಾಮದ ನಂತರ, ಕೊರೋನಾ ಅವಧಿಯಲ್ಲಿ ನಷ್ಟವಾದದ್ದನ್ನು ಕಾರ್ಮಿಕರಿಂದ ಹೆಚ್ಚು ಸಮಯ ಕೆಲಸ ಮಾಡಿಸುವ ಮೂಲಕ ಮಾತ್ರ ಪಡೆಯಬಹುದು ಎಂದು ಕೆಲವು ಮಾಲೀಕರು ಅಂದುಕೊಂಡರು. ಅದರಂತೆ, ಹರಿಯಾಣ, ಒಡಿಶಾ, ಮಹಾರಾಷ್ಟ್ರ, ರಾಜಸ್ಥಾನ, ಬಿಹಾರ, ಪಂಜಾಬ್ ಮತ್ತು ಇತರ ರಾಜ್ಯಗಳು ವಿಶೇಷ ಆದೇಶಗಳ ಮೂಲಕ ಕೆಲಸದ ಸಮಯವನ್ನು ಹನ್ನೆರಡು ಗಂಟೆಗೆ ಹೆಚ್ಚಿಸಲು ‘ಲಾಕ್ ಡೌನ್’ನ ಲಾಭ ಪಡೆದುಕೊಂಡವು. ಉತ್ತರ ಪ್ರದೇಶ ಸರ್ಕಾರ, ಕಾರ್ಮಿಕ ಕಲ್ಯಾಣ ಕಾನೂನುಗಳನ್ನು ಮೂರು ವರ್ಷಗಳ ಕಾಲ ಅಮಾನತುಗೊಳಿಸುವುದಾಗಿ ಘೋಷಿಸಿತು. ಮಧ್ಯಪ್ರದೇಶ ಸರ್ಕಾರವೂ ಕಂಪನಿಗಳ ಮಾಲೀಕರಿಗೆ ಅನುಕೂಲವಾಗುವಂತೆ ಕೆಲವು ಕಾರ್ಮಿಕ ಕಲ್ಯಾಣ ಕಾನೂನುಗಳನ್ನು ತಿದ್ದುಪಡಿ ಮಾಡಿದೆ. ಅಂತಹ ಚಟುವಟಿಕೆಗಳು ಭಾರತವು ಅಂಗೀಕರಿಸಿದ ಕಾರ್ಮಿಕ ಕಲ್ಯಾಣ ಮತ್ತು ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಮಾನದಂಡಗಳಿಗೆ ವಿರುದ್ಧವಾಗಿದೆ. ಇದು ಭಾರತದ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದು ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಿದ ನಂತರ ಕೆಲಸದ ಸಮಯವನ್ನು ಹೆಚ್ಚಿಸುವ ನಿರ್ಧಾರವನ್ನು ಹಿಂಪಡೆಯಲಾಯಿತು. ಇದೆಲ್ಲದನ್ನು ಕಡೆಗಣಿಸಿರುವ ಬಿಜೆಪಿ ನೇತೃತ್ವದ ಕರ್ನಾಟಕ ರಾಜ್ಯ ಸರ್ಕಾರ ದಿನದ 8 ಗಂಟೆ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸುವ ಮತ್ತು ಮಹಿಳೆಯರ ಸುರಕ್ಷತೆ ಬಗ್ಗೆ ಹೆಚ್ಚು ಗಮನ ಕೊಡದೆ, ರಾತ್ರಿ ಪಾಳಿಯಲ್ಲಿ ಮಹಿಳೆಯನ್ನು ದುಡಿಸಿಕೊಳ್ಳಲು ಅನುವಾಗುವಂತಹ ನಿಯಮಗಳನ್ನು ಜಾರಿಗೆ ತಂದಿದೆ.

ಕಾರ್ಮಿಕ ವಿರೋಧಿ ಕ್ರಮದ ವಿಷಯಕ್ಕೆ ಬಂದರೆ, ಎಲ್ಲಾ ರಾಷ್ಟ್ರೀಯ ಮತ್ತು ರಾಜ್ಯ ಬಂಡವಾಳಶಾಹಿ ಪಕ್ಷಗಳ ಆಡಳಿತಗಳು ಉದ್ಯಮಿಗಳ ಪರವಾಗಿವೆ. "ರಾಜ್ಯವು ಒಂದು ವರ್ಗದ ಮೇಲೆ ಮತ್ತೊಂದು ವರ್ಗದ ಪ್ರಾಬಲ್ಯವನ್ನು ಕಾಪಾಡಿಕೊಳ್ಳುವ ಯಂತ್ರವಾಗಿದೆ". ಕೆಲಸದ ಸಮಯವನ್ನು ಹೆಚ್ಚಿಸುವುದು ಆಳುವ ಬಂಡವಾಳಶಾಹಿ ವರ್ಗವನ್ನು ಪ್ರತಿನಿಧಿಸುವ ಸರ್ಕಾರವು ತನ್ನ ವರ್ಗದ ಪರವಾದ ಕ್ರಮವಾಗಿದೆ.

ಕಾರ್ಮಿಕರ ಕೆಲಸದ ಸಮಯ ಮತ್ತು ಹೆಚ್ಚುವರಿ ಮೌಲ್ಯ

ಕಾರ್ಮಿಕನು ತನ್ನ ಸಂಸ್ಥೆಯ ಮಾಲೀಕನಿಗೆ ಮಾರುವ ಶ್ರಮಶಕ್ತಿಯು, ಎಂಟು ಗಂಟೆಗಳ ಈ ನಿರ್ದಿಷ್ಟ ಕೆಲಸದ ದಿನದಂದು ಕೆಲಸಗಾರನು ನಿರ್ವಹಿಸುವ ಶ್ರಮವಾಗಿದೆ. ಈ ಶ್ರಮಶಕ್ತಿಯನ್ನು ತನ್ನ ಮಾಲೀಕನಿಗೆ ಮಾರುವ ಮೂಲಕ ಕಾರ್ಮಿಕನು ತನ್ನ ಕೂಲಿಯನ್ನು ಪಡೆಯುತ್ತಾನೆ. ಕಾರ್ಮಿಕ ತನ್ನ ಮೊದಲ ಐದು ಗಂಟೆಗಳ ಶ್ರಮದಲ್ಲಿ ತಾನು ಪಡೆಯುವ ಕೂಲಿಗೆ ಸಮನಾದ ದುಡಿಮೆಯನ್ನು ಕೊಟ್ಟರೆ, ಅದನ್ನು ಸಾಮಾಜಿಕವಾಗಿ ಅಗತ್ಯವಾದ ಕಾರ್ಮಿಕ ಸಮಯ ಎಂದು ಮಾರ್ಕ್ಸ್ ಕರೆಯುತ್ತಾನೆ. ಅದರ ನಂತರ ಅವರು ಮಾಡುವ ನಂತರದ ಮೂರು ಗಂಟೆಗಳ ಶ್ರಮವು

ಕಾರ್ಮಿಕ ವರ್ಗದ ಹಕ್ಕೊತ್ತಾಯಗಳು ಸಿಐಟಿಯು ಬಿಡುಗಡೆಗೊಳಿಸಿದ 'ಕಾರ್ಮಿಕರ ಪ್ರಣಾಳಿಕೆ

ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) 24 ಪುಟಗಳ 'ಕಾರ್ಮಿಕ ಪ್ರಣಾಳಿಕೆ' ಪುಸ್ತಕ ಬಿಡುಗಡೆ ಮಾಡಿದೆ. ಇದರಲ್ಲಿರುವ ಕಾರ್ಮಿಕ ವರ್ಗದ 25 ಹಕ್ಕುಗಳಿಗೆ ಸಂಬಂಧಿಸಿದ ಹಕ್ಕೊತ್ತಾಯಗಳ ವಿವರ ಇಲ್ಲಿದೆ.

ರಾಜ್ಯದ್ಯಾಂತ ಶಾಸನಬದ್ದ ಸಮಾನ ಹಾಗೂ ಏಕರೂಪದ ಕನಿಷ್ಠ ವೇತನ 36 ಸಾವಿರ ರೂ. ನಿಗದಿಮಾಡಬೇಕು.

ಅಗತ್ಯ ಹಾಗೂ ಜೀವನೋಪಾಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಣ ಮಾಡಬೇಕು.

ಅಂಗನವಾಡಿ, ಬಿಸಿಯೂಟ, ಆಶಾ ಸೇರಿದಂತೆ ಎಲ್ಲ ಸ್ಕೀಂ ನೌಕರರ ಸೇವೆಯನ್ನು ಖಾಯಂಗೊಳಿಸಿ, ಭಾರತ ಕಾರ್ಮಿಕ ಸಮ್ಮೇಳನದ 45ನೇ ಅಧಿವೇಶನದ ಶಿಫಾರಿಸ್ಸಿನಂತೆ ಕನಿಷ್ಠ ವೇತನ ಜಾರಿ ಮಾಡಬೇಕು.

ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ, ಕಲ್ಯಾಣನಿಧಿ ಸೇರಿ ಇತರೆ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಲು ಕ್ರಮವಹಿಸಬೇಕು ಮತ್ತು ಅದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಣಕಾಸಿನ ನೆರವು ಘೋಷಿಸಬೇಕು.

ಅಧಿಕಾರ ವಿಕೇಂದ್ರೀಕರಣ ಬಲಪಡಿಸಬೇಕು, ಗ್ರಾಮ ಪಂಚಾಯತ್ ನೌಕರರ ಕೆಲಸ ಕಾಯಂಗೊಳಿಸಿ, ಕನಿಷ್ಠ ವೇತನ ಜಾರಿಮಾಡಬೇಕು.

ವಸತಿರಹಿತ ಎಲ್ಲ ಕಾರ್ಮಿಕರಿಗೆ ಕೇರಳ ಮಾದರಿಯಲ್ಲಿ ವಾಸಯೋಗ್ಯ ವಸತಿ ಯೋಜನೆ ಜಾರಿ ಮಾಡಬೇಕು.

ಸುಪ್ರೀಂ ಕೋರ್ಟ್ ಆದೇಶದಂತೆ ಗುತ್ತಿಗೆ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಮಾಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಡಿಯಲ್ಲಿ ಎಲ್ಲಾ ವಿವಿಧ ಸ್ವರೂಪದಲ್ಲಿರುವ ಗುತ್ತಿಗೆ, ಹೊರಗುತ್ತಿಗೆ ಮತ್ತು ಖಾಯಂಯೇತರ ಕಾರ್ಮಿಕರನ್ನು ಖಾಯಂಗೊಳಿಸಬೇಕು.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾನೂನುಗಳನ್ನು ಪುನರ್ ಸ್ಥಾಪಿಸಿ, ಮಂಡಳಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಮತ್ತು ಫಲಾನುಭವಿಗಳಿಗೆ ನೇರ ಹಣ ವರ್ಗಾವಣೆ ಖಾತ್ರಿಪಡಿಸಬೇಕು.

ಇತ್ತೀಚೆಗೆ ರಾಜ್ಯ ಸರ್ಕಾರ ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ಮಾಡಿರುವ ಕಾರ್ಮಿಕ ಸಂಹಿತೆಗಳನ್ನು ವಾಪಸ್ಸು ಪಡೆಯಬೇಕು. 12 ಗಂಟೆ ಕೆಲಸದ ಅವಧಿ ಹೆಚ್ಚಳವನ್ನು ಮತ್ತು ಮಹಿಳೆಯರ ರಾತ್ರಿ ಪಾಳಿ ಕೆಲಸವನ್ನು ರದ್ದುಪಡಿಸಬೇಕು.

ಕಾರ್ಮಿಕರ ಪ್ರಶ್ನೆಗಳ ಬಗ್ಗೆ ಚರ್ಚಿಸಿ ಇತ್ಯರ್ಥಪಡಿಸಲು ಭಾರತ ಕಾರ್ಮಿಕ ಸಮ್ಮೇಳನ(ಎಎಲ್ ಸಿ)ದಂತೆ ಕರ್ನಾಟಕ ಕಾರ್ಮಿಕ ಸಮ್ಮೇಳನ(ಕೆಎಲ್ ಸಿ)ವನ್ನು ಪ್ರತಿ ವರ್ಷ ಆಯೋಜನೆ ಮಾಡಬೇಕು.

ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ತಡೆಯಬೇಕು. ಖಾಸಗಿ ಕ್ಷೇತ್ರಕ್ಕೂ ಮೀಸಲು ವಿಸ್ತರಣೆ ಮಾಡಬೇಕು. ಸಾರ್ವಜನಿಕ ಉದ್ಯಮಗಳಲ್ಲಿನ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಬೇಕು.

ಎಲ್ಲಾ ಗಣಿಗಾರಿಕೆಯನ್ನು ರಾಷ್ಟ್ರೀಕರಿಸಬೇಕು. ಕೋಲಾರ ಚಿನ್ನದ ಗಣಿ ಆರಂಭಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು.

ಲಕ್ಷಾಂತರ ಉದ್ಯೋಗ ನೀಡುತ್ತಿರುವ ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳಿಗೆ ಆರ್ಥಿಕ ಬೆಂಬಲ ನೀಡಬೆಕು.

ಬೀದಿ ಬದಿ ವ್ಯಾಪಾರ ಕಾನೂನುಬದ್ದಗೊಳಿಸಿ, ಈ ವ್ಯಾಪಾರಿಗಳಿಗೆ ರಕ್ಷಣೆ ನೀಡಬೇಕು.

ಎಲ್ಲಾ ಮುನ್ಸಿಫಲ್ ನೌಕರರನ್ನು ಖಾಯಂಗೊಳಿಸಬೇಕು ಮತ್ತು ಸಫಾಯಿ ಕರ್ಮಚಾರಿಗಳಿಗೆ ಪುನರ್ವಸತಿ ಕಲ್ಪಿಸಬೇಕು.



ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರಿಗೆ ವರ್ಷಕ್ಕೆ 200 ದಿನಗಳ ಕೆಲಸ ಹಾಗೂ ದಿನಕ್ಕೆ ರೂ. 600 ವೇತನ ಖಾತ್ರಿಗೊಳಿಸಬೇಕು. ನಗರ ಪ್ರದೇಶಕ್ಕೂ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಬೇಕು.

ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ತಡೆಯಬೇಕು. ಲಿಂಗ ಸಮಾನತೆ ಮತ್ತು ದುಡಿಯುವ ಮಹಿಳೆಯರಿಗೆ ಕೆಲಸದ ಸ್ಥಳದಲ್ಲಿ ರಕ್ಷಣೆಯನ್ನು ಖಾತ್ರಿಪಡಿಸಬೇಕು.

ಕರಾವಳಿ ಜಿಲ್ಲೆಗಳ ಜೀವನಾಡಿಗಳಾದ ಪಾರಂಪರಿಕ ಬೀಡಿ, ಹೆಂಚು, ಗೇರು ಹಾಗೂ ಮೀನುಗಾರಿಕೆ ಉದ್ಯಮಗಳನ್ನು ರಕ್ಷಿಸಬೇಕು ಹಾಗೂ ಇವುಗಳಲ್ಲಿ ಕೆಲಸಮಾಡುವ ಲಕ್ಷಾಂತರ ಕಾರ್ಮಿಕರ ಬದುಕು ರಕ್ಷಿಸಲು ವಿಶೇಷ ಆಧ್ಯತೆ ನೀಡಬೇಕು.

ರಸ್ತೆ ಸಾರಿಗೆ ನಿಗಮಗಳ ಖಾಸಗೀಕರಣದ ಪ್ರಯತ್ನಗಳನ್ನು ನಿಲ್ಲಿಸಿ, ರಾಜ್ಯ ಸರ್ಕಾರ ಹೆಚ್ಚಿನ ಆರ್ಥಿಕ ನೆರವು ಪ್ರಕಟಿಸಬೇಕು. ನೌಕರರ ಸಂಘಗಳೊಂದಿಗೆ ನಡೆಸುತ್ತಿರುವ ಮಾತುಕತೆ ಜೊತೆಗೆ ಚುನಾವಣೆ ನಡೆಸಬೇಕು.

ರಾಜ್ಯದಲ್ಲಿರುವ ಲಕ್ಷಾಂತರ ಆಟೋ, ಟ್ಯಾಕ್ಸಿ ಚಾಲಕರು, ಹಮಾಲಿ, ಮನೆಗೆಲಸ, ಟೈಲರ್ ಗಳು, ವಿಮಾ ಪ್ರತಿನಿಧಿಗಳು, ಮೆಕ್ಯಾನಿಕ್ ಗಳು, ಆಪ್ ಆಧಾರಿತ ಕಾರ್ಮಿಕರು, ಮಸಣ ಕಾರ್ಮಿಕರು ಹಾಗೂ ಅಂತರ ರಾಜ್ಯ ಹಾಗೂ ಹೊರ ರಾಜ್ಯದ ವಲಸೆ ಕಾರ್ಮಿಕರ ಜೀವನೋಪಾಯ ರಕ್ಷಣೆಗಾಗಿ ಅಗತ್ಯ ಕ್ರಮವಹಿಸಬೇಕು.

ದುಡಿಯುವ ವರ್ಗವನ್ನು ವಿಭಜಿಸಿ, ಬಂಡವಾಳಶಾಹಿಗಳಿಗೆ ಲಾಭವನ್ನು ಅಧಿಕಗೊಳಿಸುವ ಹಿಂದೂ–ಮುಸ್ಲೀಂ ಹೆಸರಿನಲ್ಲಿ ನಡೆಯುತ್ತಿರುವ ಎಲ್ಲ ರೀತಿಯ ಮತೀಯ ಕೋಮುವಾದಕ್ಕೆ ಕಡಿವಾಣ ಹಾಕಬೇಕು ಮತ್ತು ಶಾಂತಿ ಸೌಹಾರ್ದ ಹಾಗೂ ಸಾಮರಸ್ಯದ ಕರ್ನಾಟಕಕ್ಕಾಗಿ ಶ್ರಮಿಸಬೇಕು.

ರಾಜ್ಯ ಸರ್ಕಾರ ಜಾರಿಗೊಳಿಸಿದ ಭೂ ತಿದ್ದುಪಡಿ, ಜಾನುವಾರು ಹತ್ಯೆ ತಿದ್ದುಪಡಿ ಹಾಗೂ ಎಪಿಎಂಸಿ ಕಾಯ್ದೆ ತಿದ್ದುಪಡಿ ಕಾನೂನುಗಳನ್ನು ವಾಪಸ್ಸು ಪಡೆಯಬೆಕು. ಕೃಷಿ ಜಮೀನನ್ನು ಕಾರ್ಪೊರೇಟ್ ಕಂಪನಿಗಳಿಗೆ ನೀಡಬಾರದು. ಕೃಷಿ ಉತ್ಪನ್ನಗಳಿಗೆ ಅ+2 ಮಾದರಿ ಬೆಂಬಲ ಬೆಲೆ ಖಾತ್ರಿಪಡಿಸಬೇಕು.

ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು. ಬಜೆಟ್ ನಲ್ಲಿ ಘೋಷಿಸುವ ಅನುದಾನವನ್ನು ದಲಿತರ ಅಭಿವೃದ್ಧಿಗಾಗಿಯೇ ವಿನಿಯೋಗಿಸಬೇಕು.

ನೂತನ ಶಿಕ್ಷಣ ನೀತಿ ಜಾರಿ ಕೈ ಬಿಡಬೇಕು. ಉದ್ಯೋಗ ಆಧಾರಿತ ಶಿಕ್ಷಣಕ್ಕೆ ಆಧ್ಯತೆ ನೀಡಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡಬೇಕು.

ರಾಜ್ಯದ ಮೇಲೆ ಹಿಂದಿ ಹೇರಿಕೆ ಕೈ ಬಿಡಬೇಕು. ಕರ್ನಾಟಕದ ಅಭಿವೃದ್ಧಿಗೆ ಕೇಂದ್ರ ಹೆಚ್ಚಿನ ಅನುದಾನ ಒದಗಿಸಬೇಕು. ಬೆಂಗಳೂರು ನಗರದಲ್ಲಿ ಹೋರಾಟ ನಿಷೇಧಿಸಿದ ಹೈಕೋರ್ಟ್ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸಬೇಕು. ಎಲ್ಲಾ ಜನಪರ ಚಳವಳಿಗಾಗಿ ಫ್ರೀಡಂ ಪಾರ್ಕ್ ಅನ್ನು ಮೀಸಲಿಡಬೇಕು. ಕಾರ್ಮಿಕ ಹಾಗೂ ಜನಪರ ಚಳವಳಿಗಾರರ ಮೇಲೆ ಹೂಡಿರುವ ಎಲ್ಲಾ ಮಕದ್ದಮೆಗಳನ್ನು ವಾಪಸ್ಸು ಪಡೆಯಬೇಕು.

↘ ಹೆಚ್ಚುವರಿ ದುಡಿಮೆಯಾಗಿದೆ ಮತ್ತು ಈ ಹೆಚ್ಚುವರಿ ಶ್ರಮದ ಸಮಯದಿಂದ ಪಡೆದ ಮೌಲ್ಯವು ಹೆಚ್ಚುವರಿ ಮೌಲ್ಯವಾಗಿದೆ, ಅದು ಮಾಲೀಕರಿಗೆ ಹೆಚ್ಚಿನ ಲಾಭವಾಗುತ್ತದೆ ಎಂದು ಮಾರ್ಕ್ಸ್ ವಿವರಿಸಿದ್ದಾರೆ.

ಈ ಕೆಲಸದ ದಿನವನ್ನು 12 ಗಂಟೆಗೆ ವಿಸ್ತರಿಸಿದಾಗ, ಕಾರ್ಮಿಕರ ಶ್ರಮವು ಹೆಚ್ಚುವರಿ ನಾಲ್ಕು ಗಂಟೆಗಳ ಕಾಲ ಶೋಷಣೆಯಾಗುತ್ತದೆ. ಈ ಹಿಂದೆ ಮೂರು ಗಂಟೆಯಷ್ಟಿದ್ದ ಶೋಷಣೆಯ ಅವಧಿ ಈಗ ಏಳು ಗಂಟೆಗಳಿಗೆ ಏರಿಕೆಯಾಗುತ್ತದೆ. ಆ ಮೂಲಕ ಮಾಲೀಕರಿಗೆ ಹೆಚ್ಚುವರಿ ಲಾಭದ ಮೌಲ್ಯವು ಮತ್ತಷ್ಟು ಹೆಚ್ಚಾಗುತ್ತದೆ. ಎಂಟು–ಗಂಟೆಗಳ ಕೆಲಸದ ದಿನವನ್ನು ಹನ್ನೆರಡಕ್ಕೆ ಹೆಚ್ಚಿಸುವ ಎಲ್ಲಾ ವ್ಯವಸ್ಥೆಗಳು ಮಾಲೀಕರ ಲಾಭವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿವೆ. ಏಕೆಂದರೆ ಉದ್ಯೋಗದಾತರಿಗೆ ಹೆಚ್ಚುವರಿ ಲಾಭವು ಕೆಲಸಗಾರನ ಹೆಚ್ಚುವರಿ ಶ್ರಮದ ಸಮಯದಿಂದ ಮಾತ್ರ ಬರುತ್ತದೆ. ಕೆಲಸದ ಸಮಯವನ್ನು ಕಡಿಮೆ ಮಾಡುವುದು ಮತ್ತು ವೇತನವನ್ನು ಹೆಚ್ಚಿಸುವುದು ಶೋಷಣೆಯ ಮಟ್ಟವನ್ನು ಕಡಿಮೆ ಮಾಡುತ್ತದೆ. ಇದಕ್ಕೆ ವಿರುದ್ಧವಾಗಿ, ಕೆಲಸದ ಸಮಯವನ್ನು ಹೆಚ್ಚಿಸುವುದು ಮತ್ತು ವೇತನವನ್ನು ಕಡಿಮೆ ಮಾಡುವುದು ಕಾರ್ಮಿಕರ ಶೋಷಣೆಯ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುವ ಕ್ರಮಗಳಾಗುತ್ತವೆ.

ಕೆಲಸದ ಸಮಯ ಕಡಿತವಾದರೆ ಹೆಚ್ಚಿನ ಯುವಜನತೆಗೆ ಉದ್ಯೋಗ ಸಿಗುತ್ತದೆ

ಆಧುನಿಕ ತಂತ್ರಜ್ಞಾನದ ಬೆಳವಣಿಗೆಯ ಫಲವಾಗಿ ಕಡಿಮೆ ಸಮಯದಲ್ಲಿ ಹೆಚ್ಚು ಉತ್ಪಾದನೆ ಲಭ್ಯವಾಗುತ್ತದೆ. ಜೊತೆಗೆ ಉತ್ಪಾದನೆಗೆ ಮಾನವ ಸಂಪನ್ಮೂಲದ ಬಳಕೆ ಕಡಿಮೆಯಾಗಿದೆ. ಇದರಿಂದ ನಿರುದ್ಯೋಗ ಹೆಚ್ಚಾಗಿ, ಜನರ ಆದಾಯ ಕಡಿಮೆಯಾಗಿದೆ. ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಇದು ಉತ್ಪಾಧನಾ ವಸ್ತುಗಳ ಮಾರಾಟದ ಮೇಲೆ ಪರಿಣಾಮ ಬೀರುತ್ತದೆ. ಈ ಕಾರಣದಿಂದ ಕೆಲಸದ ಸಮಯವನ್ನು ಹೆಚ್ಚಿಸುವುದಕ್ಕಿಂತ ಕೆಲಸದ ಸಮಯವನ್ನು ಕಡಿಮೆ ಮಾಡುವುದು ಉತ್ತಮ. ಪ್ರಸ್ತುತ, ತಲಾ 8 ಗಂಟೆಗಳಂತೆ ಮೂರು ಪಾಳಿಗಳಲ್ಲಿ ಕೆಲಸ ಮಾಡಲಾಗುತ್ತಿದೆ. ಕೆಲಸದ ಸಮಯವನ್ನು 12 ಗಂಟೆಗೆ ಹೆಚ್ಚಿಸಿದರೆ, ಕೇವಲ 2 ಪಾಳಿಗಳನ್ನು ಮಾಡಲಾಗುತ್ತದೆ. ಇದರಿಂದ ಹೆಚ್ಚು ಉದ್ಯೋಗ ನಷ್ಟವಾಗುತ್ತದೆ. ಅಂದರೆ, ಕೆಲಸದ ಸಮಯವನ್ನು ಆರು ಗಂಟೆಗೆ ಇಳಿಸಿದರೆ, ದಿನಕ್ಕೆ 4 ಪಾಳಿಗಳನ್ನು ಮಾಡಬಹುದು. ಈ ರೀತಿ ಮಾಡಿದರೆ, ಪ್ರಸ್ತುತ ಉತ್ಪಾದನಾ ಪರಿಸ್ಥಿತಿಯಲ್ಲಿ, ಉದ್ಯೋಗವು ಶೇ. 33 ರಷ್ಟು ಹೆಚ್ಚಾಗುತ್ತದೆ. ಇದರಿಂದ ಯುವಕರಿಗೆ ಉದ್ಯೋಗವೂ ಹೆಚ್ಚಾಗುತ್ತದೆ. ಕೈಗಾರಿಕೋದ್ಯಮಿಗಳು ನಡೆಸುತ್ತಿರುವ ಕಾರ್ಮಿಕರ ಶೋಷಣೆಯ ಪ್ರಮಾಣವು ಕಡಿಮೆಯಾಗುತ್ತದೆ. ಇದರಿಂದ ಮಾಲೀಕರಿಗೆ ನಷ್ಟವಾಗುತ್ತದೆ ಎಂದು ಉದ್ಯಮಿಗಳ ಪರ ಇರುವವರು ವಾದಿಸಬಹುದು. ಇಂತಹ ವಾದವು ಕೇವಲ ಹೆಚ್ಚುವರಿ ಲಾಭವನ್ನು ಆಧರಿಸಿದ ಬಂಡವಾಳಶಾಹಿ ವಾದವಾಗಿದೆ. ಶೇ. 33 ರಷ್ಟು ಉದ್ಯೋಗವು ಹೆಚ್ಚಾದಂತೆ, ಶಕ್ತಿಯುತ, ಉತ್ಸಾಹ ತುಂಬಿದ ಯುವ ಕಾರ್ಮಿಕರೊಂದಿಗೆ ಉತ್ಪಾದಕತೆ ಹೆಚ್ಚಾಗುತ್ತದೆ, ಅವರು ಪಡೆಯುವ ವೇತನದ ಹಣ ಅಗತ್ಯ ವಸ್ತುಗಳನ್ನು ಖರೀದಿಸಲು ಮಾರುಕಟ್ಟೆಗೆ ಹೋಗುತ್ತದೆ. ಇದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುತ್ತದೆ. ಬೇಡಿಕೆ ಹೆಚ್ಚಾದಂತೆ ಮತ್ತಷ್ಟು ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಈ ಉತ್ಪಾದನೆಯ ಹೆಚ್ಚಳವು ಮಾಲೀಕರಿಗೆ ಮತ್ತಷ್ಟು ಲಾಭ ತರುತ್ತದೆ. ಜನರ ಕೊಳ್ಳುವ ಶಕ್ತಿ ಹೆಚ್ಚಾದಾಗ ಮಾರುಕಟ್ಟೆಯಲ್ಲಿ ಸರಕುಗಳ ಸ್ಥಗಿತ ಮತ್ತು ಆರ್ಥಿಕ ಬಿಕ್ಕಟ್ಟಿರುವುದಿಲ್ಲ.

ಕಾರ್ಮಿಕರು ಯಂತ್ರಗಳಲ್ಲ

ಕಾರ್ಮಿಕರು ಯಂತ್ರಗಳಲ್ಲ. ಯಂತ್ರಗಳ ಕೆಲಸದ ಸಮಯವನ್ನು ಕಡಿಮೆ ಮಾಡುವುದರಿಂದ ಉತ್ಪಾದನೆ ಕಡಿಮೆಯಾಗುತ್ತದೆ. ಆದರೆ ಮನುಷ್ಯನ ಕೆಲಸದ ಸಮಯವನ್ನು ಕಡಿಮೆಗೊಳಿಸಿದರೆ, ನಿರ್ದಿಷ್ಟ ಸಮಯದೊಳಗೆ ಲಭ್ಯವಿರುವ ದೈಹಿಕ ಮತ್ತು ಮಾನಸಿಕ ಶಕ್ತಿ–ಹೆಚ್ಚಿನ ಶ್ರಮದಿಂದ ಉತ್ಪಾದಕತೆ ಹೆಚ್ಚಾಗುತ್ತದೆ. ಮತ್ತು ಅವರ ಸಾಮಾಜಿಕ ಸಂಬಂಧಗಳು ಸುಧಾರಿಸುತ್ತವೆ. ಜಪಾನ್ ದೇಶದ ವೇಗವಾಗಿ ಕುಸಿಯುತ್ತಿರುವ ಜನಸಂಖ್ಯೆಯು ಇದನ್ನು ಪ್ರತಿಬಿಂಬಿಸುತ್ತದೆ. ಹಲವಾರು ಪಾಶ್ಚಿಮಾತ್ಯ ದೇಶಗಳಲ್ಲಿ ನಡೆಸಿದ ಅಧ್ಯಯನವೂ ಇದನ್ನೇ ಒತ್ತಿಹೇಳುತ್ತದೆ. ಅದಕ್ಕಾಗಿಯೇ ಪಶ್ಚಿಮದ ರಾಷ್ಟ್ರಗಳಲ್ಲಿ ಕೆಲಸದ ವಾರವನ್ನು ಐದಕ್ಕೆ ಮತ್ತು ಕೆಲಸದ ಸಮಯವನ್ನು ಆರು ಅಥವಾ ಏಳು ಗಂಟೆಗಳಿಗೆ ಇಳಿಸಲಾಗುತ್ತದೆ.

ಹೆಚ್ಚಿನ ಕೂಲಿಗಾಗಿ ಹೋರಾಟ, ಕೆಲಸದ ಅವಧಿ ಕಡಿತದ ವಿರುದ್ದ ಧ್ವನಿ ಮತ್ತು ಕಷ್ಟಪಟ್ಟು ಸಂಪಾದಿಸಿದ ಹಕ್ಕುಗಳ ರಕ್ಷಣೆ ಈಗ ಕಾರ್ಮಿಕರ ಕರ್ತವ್ಯವಾಗಿದೆ. ಒಗ್ಗಟ್ಟಿನ ದುಡಿಯುವ ಜನರ ಸಾಮಾನ್ಯ ಗುರಿಯು ಹೊಸ ಸಮಾಜವನ್ನು ಸೃಷ್ಟಿ ಮಾಡುತ್ತದೆ ಎಂದು ಮಾರ್ಕ್ಸ್ ಹೇಳಿದ್ದು ಹೀಗೆ 'ಕಾರ್ಮಿಕ ಕೆಲಸ ಮಾಡಲು ಬಯಸುವ ಕೈ ಮತ್ತು ಅದಕ್ಕೆ ಸಿದ್ಧವಾಗಿರುವ ಮನಸ್ಸು ಉತ್ಸಾಹದಿಂದ ತುಂಬಿದ ಹೃದಯದಿಂದ ಶ್ರಮಿಸುತ್ತದೆ'.

–ಸಿದ್ದಯ್ಯ ಸಿ.

ಪ್ರಶ್ನೆಯೆಂದರೆ ಭಯಪಡುವವರಿಗೆ ಕೇರಳದ ಯುವಜನರ 100 ಪ್ರಶ್ನೆಗಳು

ಇದು ಅಮೃತ ಕಾಲ

ಕೊಚ್ಚಿ ಜಲ ಮೆಟ್ರೋ, ಡಿಜಿಟಲ್ ಸೈನ್ಸ್ ಪಾರ್ಕ್ ಮತ್ತು ವಂದೇಭಾರತ್ ರೈಲು ಉದ್ಘಾಟನೆಗೆ ಸೇರಿದಂತೆ ಕೇರಳಕ್ಕೆ ಎರಡು ದಿನಗಳ ಪ್ರಧಾನಿ ಭೇಟಿಯ ಕಾಲದಲ್ಲಿ ಏಪ್ರಿಲ್ 24 ರಂದು ಕೊಚ್ಚಿಯಲ್ಲಿ 'ಯುವಂ 2023' ಸಮಾವೇಶದಲ್ಲಿ ಕೇರಳದ ಯುವಜನರೊಂದಿಗೆ ಪ್ರಧಾನಿಗಳ ಸಂವಾದದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 'ವೈಬ್ರೆಂಟ್ ಯೂತ್ ಫಾರ್ ಮೋಡಿಫೈಯಿಂಗ್ ಇಂಡಿಯಾ' ಎಂಬ ಹೆಸರಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಇದು ರಾಜಕೀಯೇತರ ಕಾರ್ಯಕ್ರಮ ಎಂದು ಹೇಳಿಕೊಳ್ಳಲಾಗಿತ್ತು. ಆದರೆ ವೇದಿಕೆಯಲ್ಲಿ ಬಿಜೆಪಿ ನಾಯಕರೇ ತುಂಬಿದ್ದರು- ರಾಜ್ಯಾಧ್ಯಕ್ಷ ಕೆ ಸುರೇಂದ್ರನ್, ಬಿಜೆಪಿಗೆ ಹೊಸದಾಗಿ ಪ್ರವೇಶಿಸಿದ ಅನಿಲ್ ಆಂಟನಿ ಮತ್ತು ಇತರರು ಉಪಸ್ಥಿತರಿದ್ದರು.

ಆನ್‌ಲೈನ್‌ನಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಲು ಮತ್ತು ಮೋದಿ ಅವರೊಂದಿಗೆ ಸಂವಾದ ನಡೆಸಲು 'ಯುವಂ' ವೇದಿಕೆಯಾಗಲಿದೆ ಎಂದು ಪ್ರಕಟಿಸಲಾಗಿತ್ತು. "ಯುವಂ 2023 ರ ಸಂಘಟಕರು ಯುವಜನರು ಪ್ರಧಾನ ಮಂತ್ರಿಯೊಂದಿಗೆ ಸಂವಹನ ನಡೆಸಬಹುದು ಮತ್ತು ಈ ಕಾರ್ಯಕ್ರಮ ರಾಜಕೀಯಾತೀತವಾಗಿರುತ್ತದೆ ಎಂದು ಬಿಂಬಿಸಿದ್ದರು. ಆದರೆ, ಯಾವುದೇ ಪ್ರಶ್ನೆಗಳಿಗೆ ಅವಕಾಶ ಕೊಡಲಿಲ್ಲ. ಪ್ರಧಾನಿ ರಾಜಕೀಯ ಭಾಷಣ ಮಾಡಿದರು ಮತ್ತು ಸ್ಥಳದಿಂದ ನಿರ್ಗಮಿಸಿದರು," ಎಂದು ಡಿವೈಎಫ್ಐ ರಾಷ್ಟ್ರೀಯ ಅಧ್ಯಕ್ಷ ಮತ್ತು ರಾಜ್ಯಸಭಾ ಸದಸ್ಯ ಎ.ಎ. ರಹೀಮ್ ಫೇಸ್ ಬುಕ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹೌದು, **ಪ್ರಧಾನ ಮಂತ್ರಿಗಳು 45 ನಿಮಿಷಗಳ ಉಪನ್ಯಾಸ ನೀಡಿದ ನಂತರ ತಕ್ಷಣವೇ ನಿರ್ಗಮಿಸಿದರು. ಯುವಜನರ ಪ್ರಶ್ನೆಗಳನ್ನು ಕೇಳಿಸಿ ಕೊಳ್ಳಲೂ ನಿಲ್ಲಲಿಲ್ಲ ಎಂದು ವರದಿಯಾಗಿದೆ. ಆದರೂ ಕೆಲವು ಮುಖ್ಯಧಾರೆಯ ಮಾಧ್ಯಮಗಳು ಇದೊಂದು ಹೊಸ ದಾರಿ ತೆರೆದ ಕಾರ್ಯಕ್ರಮ ಎಂದೆಲ್ಲ ಹೇಳಿದವಂತೆ !**

ಈ ಯುವ ಸಮಾವೇಶ ನಡೆಸುವ ಪ್ರಕಟಣೆಯಾದ ಕೂಡಲೇ ಪ್ರಧಾನಿಗಳಿಗೆ ಕೇಳುವ ಪ್ರಶ್ನೆಗಳ ಪೂರ್ವ-ಪರೀಕ್ಷಣೆ ನಡೆಸಲಾಗುವುದು, ಮೊದಲೇ ಮಂಜೂರು ಮಾಡಿದ ಪ್ರಶ್ನೆಗಳನ್ನಷ್ಟೇ ಕೇಳಲಾಗುವುದು ಎಂದು ಪ್ರತಿಕ್ರಿಯಿಸಿದ ಕೇರಳ ಡಿವೈಎಫ್ಐ "ಭಾರತದ ಯುವಜನ- ಪ್ರಧಾನಿಗಳನ್ನು ಕೇಳುತ್ತಾರೆ" ಎಂಬ ವಿಷಯದ ಅಡಿಯಲ್ಲಿ 100 ಪ್ರಶ್ನೆಗಳನ್ನು ಪ್ರಕಟಿಸಿ ಎಲ್ಲ ಜಿಲ್ಲೆಗಳಲ್ಲಿ ಎಪ್ರಿಲ್ 23 ಮತ್ತು 24ರಂದು ಸಾರ್ವಜನಿಕ ಸಭೆಗಳನ್ನು ನಡೆಸಿದೆ.

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ 121 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು 107 ನೇ ಸ್ಥಾನಕ್ಕೆ ಏಕೆ ಕುಸಿದಿದೆ ಎಂಬುದು ಇದರಲ್ಲಿ ಮೊದಲ ಪ್ರಶ್ನೆಯಾಗಿದ್ದರೆ, 2014ರ ಚುನಾವಣಾ ಪ್ರಚಾರದ ವೇಳೆ ನೀಡಿದ ಭರವಸೆಯಂತೆ ಯುವಕರಿಗೆ ಪ್ರತಿ ವರ್ಷ ಎರಡು ಕೋಟಿ ಉದ್ಯೋಗಗಳು ಏಕಿಲ್ಲ, 100 ದಿನಗಳಲ್ಲಿ ವಿದೇಶದಲ್ಲಿ ಕೂಡಿಟ್ಟಿರುವ ಕಪ್ಪು ಹಣವನ್ನು ಹಿಂಪಡೆಯುವುದು ಎಲ್ಲಿಗೆ ಬಂತು, ರೈತರಿಗೆ ಸಿ2+50% ಅನ್ನು ಎಂಎಸ್‌ಪಿಯಾಗಿ ಶಿಫಾರಸು ಮಾಡುವ ಎಂಎಸ್ ಸ್ವಾಮಿನಾಥನ್ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲು ಬಿಜೆಪಿ ಸರ್ಕಾರ ಏಕೆ ನಿರಾಕರಿಸುತ್ತದೆ, ಪುಲ್ವಾಮ ಭಯೋತ್ಪಾದಕ ದಾಳಿಯ ಬಗ್ಗೆ ಅಲ್ಲಿಯ ಮಾಜಿ ರಾಜ್ಯಪಾಲರ ಸತ್ಯಸ್ಫೋಟದ ಬಗ್ಗೆ ಮೌನ ಏಕೆ- ಇವೇ ಮೊದಲಾದ ಪ್ರಶ್ನೆಗಳನ್ನು ರಾಜ್ಯಾದ್ಯಂತ ಪ್ರಧಾನ ಮಂತ್ರಿಗಳಿಗೆ ಕೇಳಲಾಯಿತು.

ಕೊಚ್ಚಿ ಸಮಾವೇಶದಲ್ಲಿ ಒಬ್ಬ ಯುವಕ ಕೇಂದ್ರ ಸರಕಾರ ಮೆಟ್ರಿಕ್- ಪೂರ್ವ ಸ್ಕಾಲರ್‌ಶಿಪ್‌ಗಳಿಗೆ ಬಜೆಟಿನಲ್ಲಿ 41% ಕಡಿತ ಮಾಡಿದ್ದು ಏಕೆ ಎಂದೂ ಕೇಳಿದನಂತೆ. ಈ ಮೇಲೆ ವರದಿಯಾದಂತೆ ಪ್ರಧಾನಿಗಳು ಉತ್ತರಿಸುವ ಗೋಜಿಗೇ ಹೋಗಲಿಲ್ಲ. ಕೊಚ್ಚಿಯ ಪಕ್ಕದ ಎರ್ನಾಕುಳಂನ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದವರು ಪ್ರಧಾನಿಗಳಿಗೆ ಪ್ರಶ್ನೆಗಳ ಪ್ಲೆಕಾರ್ಡ್‌ಗಳನ್ನು ಹಿಡಿದುಕೊಂಡಿದ್ದರು.

"ಪ್ರಶ್ನಿಸುವುದನ್ನು ನಿಲ್ಲಿಸದಿರುವುದು ಮಹತ್ವದ ಸಂಗತಿ" ಎಂಬ ಆಲ್ಬರ್ಟ್ ಐನ್‌ಸ್ಟೈನ್ ರ ಉಕ್ತಿಯನ್ನು ನೆನಪಿಸಿರುವ ಕೇರಳ ಡಿವೈಎಫ್ಐ, ಪ್ರಧಾನ ಮಂತ್ರಿಗಳು ಅಧಿಕಾರ ವಹಿಸಿಕೊಂಡಂದಿನಿಂದ ಕಳೆದ 9 ವರ್ಷಗಳಲ್ಲಿ ಎಂದೂ ಪತ್ರಿಕಾಗೋಷ್ಠಿ ನಡೆಸಿಲ್ಲ, ಅವರಿಗೆ ಪ್ರಶ್ನೆಗಳೆಂದರೆ ಭಯ ಎಂದು ಹೇಳಿದೆ.





ಕೇಂದ್ರದ ಕೊಡುಗೆ ಸೊನ್ನೆ-
ಆದರೂ ಕೇಂದ್ರ ಮಂತ್ರಿಗಳ ಟಾಂಟಾಂ

ಪ್ರಧಾನಿಗಳ ಈ ಎರಡು ದಿನಗಳ ಭೇಟಿಯನ್ನು ಆಯೋಜಿಸಿದ್ದು ಈಶಾನ್ಯ ಭಾರತದಲ್ಲಿ ಆಳುವ ಪಕ್ಷದ ಯಶಸ್ಸಿನ ನಂತರ ಈಗ ಕೇರಳದ ಬಾರಿ ಎಂದು ಹಲವಾರು ಅಭಿವೃದ್ಧಿ ಕೆಲಸಗಳ ಉದ್ಘಾಟನೆಗಳ/ ಶಂಕುಸ್ಥಾಪನೆಗಳ ಮೂಲಕ ಬಿಂಬಿಸಲು ಎನ್ನಲಾಗಿದೆ. ಆದರೆ ಇವುಗಳಲ್ಲಿ ಬಹುವಾಗಿ ಗಮನ ಸೆಳೆದ ಯೋಜನೆಗಳೆಂದರೆ ಆರಂಭದಲ್ಲಿ ಹೇಳಿದಂತೆ ಪ್ರಧಾನಿಗಳು ಉದ್ಘಾಟಿಸಿದ ಕೊಚ್ಚಿ ಜಲ ಮೆಟ್ರೋ ಮತ್ತು ಶಂಕುಸ್ಥಾಪನೆ ಮಾಡಿದ ಡಿಜಿಟಲ್ ಸೈನ್ಸ್ ಪಾರ್ಕ್. ಇವೆರಡೂ ದೇಶದಲ್ಲೇ ಇಂತಹ ಪ್ರಪ್ರಥಮ ಯೋಜನೆಗಳು ಎಂಬ ಹೆಗ್ಗಳಿಕೆ ಹೊಂದಿವೆ. ಅದಕ್ಕಿಂತಲೂ ಹೆಚ್ಚಾಗಿ ಇವೆರಡರಲ್ಲೂ ಕೇಂದ್ರ ಸರಕಾರದ ಕೊಡುಗೆ ಸೊನ್ನೆ. ಇವೆರಡೂ ಕೇರಳದ ಎಲ್‌ಡಿಎಫ್ ಸರಕಾರದ ಕನಸಿನ ಯೋಜನೆಗಳು.

1136.83 ಕೋಟಿ ರೂ.ಗಳ ಕೊಚ್ಚಿ ಜಲ ಮೆಟ್ರೋ ಯೋಜನೆ ಕೊಚ್ಚಿ ಮೆಟ್ರೊ ರೈಲ್ ಕಾರ್ಪೋರೇಶನ್ ಒಡೆತನದಲ್ಲಿದ್ದು ಇದನ್ನು ಕೇರಳ ಸರಕಾರ ಜರ್ಮನಿಯ ಕೆಎಫ್‌ಡಬ್ಲ್ಯುನ ನೆರವಿನಿಂದ ಕೈಗೆತ್ತಿಕೊಂಡಿತ್ತು.

1515 ಕೋಟಿ ರೂ.ಗಳ ಡಿಜಿಟಲ್ ಸೈನ್ಸ್ ಪಾರ್ಕ್‌ನ ಮೊದಲ ಹಂತ ಕೇರಳ ಸರಕಾರ ಉದ್ದಿಮೆಯ ಪಾಲುದಾರರೊಂದಿಗೆ ರೂಪಿಸಿದ ಯೋಜನೆ.

'ಕೇರಳದ ಅಭಿವೃದ್ಧಿ ಭಾರತವನ್ನು ಅಭಿವೃದ್ಧಿ ಪಡಿಸುತ್ತದೆ' ಎಂದ ಪ್ರಧಾನ ಮಂತ್ರಿಗಳೂ ಸೇರಿದಂತೆ ಇತರ ಕೇಂದ್ರ ಮಂತ್ರಿಗಳು ಮತ್ತು ಬಿಜೆಪಿಯ ರಾಜ್ಯ ಮುಖಂಡರುಗಳು ಇವು ಕೇಂದ್ರದ್ದೇ ಯೋಜನೆಗಳು ಎಂಬಂತೆ ಟಾಂಟಾಂ ಮಾಡಿದರು, ಅವರ ಭಜನಾ ಮಂಡಳಿಯ ಮಾಧ್ಯಮಗಳು ಅದನ್ನು ಕಣ್ಣುಮುಚ್ಚಿ ಅನುಕರಿಸಿದವು.

"ಸುಮಾರು 3000 ಕೋಟಿ ರೂ.ಗಳ ಈ ಎರಡು ಪರಿಯೋಜನೆಗಳನ್ನು ನಡೆಸುತ್ತಿರುವುದು ರಾಜ್ಯ ಸರಕಾರ. ಒಕ್ಕೂಟ ಸರಕಾರ ಖರ್ಚು ಮಾಡಿರುವುದು ವಂದೇ ಭಾರತ್‌ನ ಹಳಿಗಳಿಗೆ 94 ಕೋಟಿ ರೂ. ಮಾತ್ರ" ಎಂದು ರಾಜ್ಯದ ಹಣಕಾಸು ಮಂತ್ರಿಗಳು ಅವರೆಲ್ಲರಿಗೆ ಮತ್ತು ಮಾಧ್ಯಮಗಳಿಗೆ ನೆನಪಿಸಬೇಕಾಗಿ ಬಂತು.

ಡಿಜಿಟಲ್ ಪಾರ್ಕ್‌ನ ಸಮಾರಂಭದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಧಾನ ಮಂತ್ರಿಗಳ ಸಮ್ಮುಖದಲ್ಲೇ ಇದು ರಾಜ್ಯ ಸರಕಾರದ ಕನಸಿನ ಕೂಸು, ಒಕ್ಕೂಟ ಸರಕಾರದ ಕೊಡುಗೆ ಇದರಲ್ಲೇನೂ ಇಲ್ಲ ಎಂದು ಹೇಳಬೇಕಾಗಿ ಬಂತು. ರಾಜ್ಯದ ಹಣಕಾಸು ಮಂತ್ರಿ ಕೆ.ಎನ್. ಬಾಲಗೋಪಾಲ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಎಲ್‌ಡಿಎಫ್ ಸರಕಾರ ಒಕ್ಕೂಟ ಸರಕಾರದಿಂದ ರಾಜ್ಯಕ್ಕೆ ಅನುದಾನಗಳು ಮತ್ತು ನಿಧಿಗಳಲ್ಲಿ ಕಡಿತ ಮಾಡಿದ್ದರೂ ಜಾಗತಿಕ ಮಟ್ಟದ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸುತ್ತಿದೆ. ಪ್ರತಿಯೊಂದು ರಾಜಕೀಯ ಪಕ್ಷ ಮತ್ತು ವ್ಯಕ್ತಿಗಳು ನಮ್ಮ ಅಭಿವೃದ್ಧಿಗೆ ಒಕ್ಕೂಟ ಸರಕಾರದಿಂದ ಅರ್ಹ ನಿಧಿಗಳನ್ನು ಪಡೆಯಲು ತಮ್ಮ ದನಿ ಎತ್ತಬೇಕು" ಎಂದರು.

ಬಹುಶಃ ಯುವಜನರ 'ಆಯ್ದ' ಪ್ರಶ್ನೆಗಳಿಗೂ ತಮ್ಮಲ್ಲಿ ಉತ್ತರವಿಲ್ಲ ಎಂಬುದು ಈ ವೇಳೆಗೆ ಪ್ರಧಾನಿಗಳಿಗೆ ಮನವರಿಕೆಯಾಗಿರಬೇಕು.

ಮೊಗಲರಷ್ಟೇ ಅಲ್ಲ, ಡಾರ್ವಿನ್, ಪೈಥಾಗೊರಸ್‌ಗೂ ಜಾಗವಿಲ್ಲ!

ಎನ್.ಸಿ.ಇ.ಆರ್.ಟಿ. ಶಾಲಾ ಪಠ್ಯಪುಸ್ತಕಗಳಲ್ಲಿ ಕೊವಿಡ್ ಮಹಾಸೋಂಕಿನಿಂದಾಗಿ ಉಂಟಾದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಭಾರವನ್ನು ಇಳಿಸುವ ನೆಪದಲ್ಲಿ ಇತಿಹಾಸ, ರಾಜಕೀಯ ಶಾಸ್ತ್ರ ಮತ್ತು ಸಮಾಜಶಾಸ್ತ್ರದ ಮಾತ್ರವಲ್ಲ ವಿಜ್ಞಾನದ ಪಠ್ಯಗಳಲ್ಲಿಯೂ ಕೆಲವು ಪ್ರಮುಖ ಅಧ್ಯಾಯಗಳನ್ನು/ವಿಭಾಗಗಳನ್ನು ಕೈಬಿಟ್ಟಿರುವುದೂ ಈಗ ಗಮನಕ್ಕೆ ಬಂದಿದೆ. ಇದರಲ್ಲಿ ಮುಖ್ಯವಾದದ್ದು ಡಾರ್ವಿನನ ವಿಕಾಸವಾದ ಮತ್ತು ಪೈಥಾಗೊರಸ್ ಪ್ರಮೇಯ.

9ನೇ ಮತ್ತು 10ನೇ ತರಗತಿಯ ವಿಜ್ಞಾನ ಪಠ್ಯದಲ್ಲಿ ವಿಕಾಸವಾದದ ಕುರಿತಾಗಿ ಇದ್ದ ಅಧ್ಯಾಯ/ವಿಭಾಗವನ್ನು ಕೈಬಿಡಲಾಗಿದೆ, ಮತ್ತು ತರಗತಿ 11 ಮತ್ತು 12ರ ಪಠ್ಯದಲ್ಲಿದ್ದ ವಿಕಾಸವಾದ ಮತ್ತು ಆನುವಂಶಿಕತೆ ಕುರಿತಾದ ಅಧ್ಯಾಯವನ್ನು ಬದಲಿಸಿ ಕೇವಲ ಆನುವಂಶಿಕತೆಯ ಅಧ್ಯಾಯವಾಗಿ ಮಾಡಲಾಗಿದೆ. ಡಾರ್ವಿನ್ ಕುರಿತಾದ ಒಂದು ಬಾಕ್ಸನ್ನು ಕೂಡ ತೆಗೆಯಲಾಗಿದೆಯಂತೆ.

ತರಗತಿ 10ರ ವಿಜ್ಞಾನ ಪಠ್ಯ ಮತ್ತು ತರಗತಿ 11 ಮತ್ತು 12ರ ಜೀವಶಾಸ್ತ್ರ ಪಠ್ಯಗಳಲ್ಲಿ 'ಜೀವಿಗಳಲ್ಲಿ ಪುನರುತ್ಪತ್ತಿ ಕುರಿತ ಅಧ್ಯಾಯಗಳನ್ನು ಅಥವ ವಿಭಾಗಗಳನ್ನು ಕೈಬಿಡಲಾಗಿದೆ. 'ಜೀವಿಗಳಲ್ಲಿ ಪುನರುತ್ಪತ್ತಿ ಮತ್ತು ಆಹಾರ ಉತ್ಪಾದನೆಯಲ್ಲಿ ಹೆಚ್ಚಳ' ಅಧ್ಯಾಯವನ್ನು ತೆಗೆದು ಹಾಕಲಾಗಿದೆ. ಹಿಮನದಿಗಳು ಕರಗುತ್ತಿರುವ ಬಗ್ಗೆ ಮತ್ತು ಜಾಗತಿಕ ತಾಪಮಾನ ಏರಿಕೆಯ ಬಗ್ಗೆ ಇಡೀ ಜಗತ್ತು ಕಳವಳ ಪಡುತ್ತಿರುವಾಗ ಪರಿಸರ ಪ್ರಶ್ನೆಗಳ ಮೇಲಿನ ಅಧ್ಯಾಯಗಳನ್ನು ಕೈಬಿಡಲಾಗಿದೆ!

ಗಣಿತಶಾಸ್ತ್ರದ ಪಠ್ಯದಲ್ಲಿ ಪೈಥಾಗೊರಸ್ ಪ್ರಮೇಯದ ಪ್ರಮಾಣವನ್ನು ತೆಗೆದು ಹಾಕಲಾಗಿದೆ. ಇಷ್ಟೇ ಅಲ್ಲ, ಉನ್ನತ ತರಗತಿಗಳ ಗಣಿತದ ಪಠ್ಯಗಳಲ್ಲಿ, ಗಣಿತ ಒಂದು ವಿಶೇಷ ಆಯ್ಕೆಯ ವಿಷಯವಾಗಿರುವಲ್ಲಿಯೂ ಪ್ರೌಢ ಬೀಜಗಣಿತವನ್ನು ತೆಗೆದು ಹಾಕಲಾಗಿದೆ ಎಂದೂ ವಿಷಯ ತಜ್ಞರು ಹೇಳುತ್ತಿದ್ದಾರೆ.

ಮೂಲಧಾತುಗಳ ಆವರ್ತಕ ಪಟ್ಟಿ(ಪೀರಿಯೋಡಿಕಲ್ ಟೇಬಲ್ ಆಫ್ ಎಲಿಮೆಂಟ್ಸ್) ಕೂಡ 10ನೇ ತರಗತಿಯ ವಿಜ್ಞಾನ ಪಠ್ಯಪುಸ್ತಕದಲ್ಲಿ ಕಾಣೆಯಾಗಿದೆ ಎಂದು ಹೇಳಲಾಗಿದೆ.

ಕೊರೊನ ವೈರಸಿನಿಂದಾಗಿ ಹರಡಿದ ಕೊವಿಡ್ ಮಹಾಸೋಂಕು ಮತ್ತು ಆ ವೈರಸ್‌ನ ವಿವಿಧ ರೂಪಾಂತರಗಳು ಉಂಟುಮಾಡಿದ ಪರಿಸ್ಥಿತಿಯ ಹೆಸರು ಹೇಳಿಕೊಂಡು ಪಠ್ಯಪುಸ್ತಕಗಳಲ್ಲಿ ತಂದ ಬದಲಾವಣೆಗಳಲ್ಲಿ ವಿಕಾಸವಾದವನ್ನು ಕೈಬಿಟ್ಟಿರುವುದು ಕೊವಿಡ್ ಇದಕ್ಕೊಂದು ನೆಪ ಮಾತ್ರ ಎಂಬುದನ್ನು ಪುಷ್ಟಿಗೊಳಿಸಿದೆ ಎಂದು ಪರಿಣಿತರು ಹೇಳುತ್ತಾರೆ.

ವಿಕಾಸವಾದ ಮತ್ತು ಹಿಂದುತ್ವ:

ಡಾರ್ವಿನನ ವಿಕಾಸವಾದದ ಬಗ್ಗೆ ಧಾರ್ಮಿಕರು ಎಂದೆನಿಸಿಕೊಳ್ಳುವವರ ವಿರೋಧ ಎಲ್ಲ ಮತ-ಧರ್ಮಗಳಲ್ಲಿ ಸಾಮಾನ್ಯ, ಏಕೆಂದರೆ ಇದು ಮಾನವ ಜೀವಿಗಳು ಸೇರಿದಂತೆ ಇಡೀ ಜಗತ್ತು ದೇವರ ಸೃಷ್ಟಿ ಎಂಬ ಸಾಮಾನ್ಯ ನಂಬಿಕೆಯನ್ನು ಪ್ರಶ್ನಿಸಿದೆ. ಆದ್ದರಿಂದ ಅದಕ್ಕೆ ಸಾಮಾಜಿಕ- ವಿರೋಧ ಅಮೆರಿಕ ಸೇರಿದಂತೆ ಎಲ್ಲ ದೇಶಗಳಲ್ಲೂ ಸಾಮಾನ್ಯವಾಗಿ ಇದೆ. ಆದರೆ ಅದು ಹೆಚ್ಚಿನ ದೇಶಗಳಲ್ಲಿ ಶಾಲಾ ಪಠ್ಯಗಳಲ್ಲಿ ತಿರಸ್ಕಾರಕ್ಕೆ ಅಥವ ನಿಷೇಧಕ್ಕೆ ಒಳಗಾಗುವಷ್ಟು ತೀವ್ರವಾಗಿ ವ್ಯಕ್ತಗೊಂಡಿಲ್ಲ. ನಮ್ಮಲ್ಲಿಯೂ, ಹಾಗೆ ನೋಡಿದರೆ, ಇದು ನಮ್ಮ ನೆರೆಯ ಮಧ್ಯಪೂರ್ವ ಏಷ್ಯಾದ ದೇಶಗಳಲ್ಲಿ ವ್ಯಕ್ತಗೊಂಡಿದ್ದರೂ, ಹಿಂದುತ್ವದ ಪ್ರಭಾವ ಬೆಳೆಯುವ ವರೆಗೆ ಇರಲಿಲ್ಲ. ಆದರೆ ನೆರೆಯ ಪಾಕಿಸ್ತಾನದಲ್ಲಿ ಅಧ್ಯಾಪಕರು ಅದನ್ನು ಬಹಳ ಸಮಯದಿಂದ ತಿರಸ್ಕಾರದಿಂದ ಉಲ್ಲೇಖಿಸಬೇಕೆಂದು ನಿರೀಕ್ಷಿಸಲಾಗುತ್ತಿದೆ. ಸೌದಿ ಅರೇಬಿಯ, ಒಮಾನ್, ಅಲ್ಜೀರಿಯ ಮತ್ತು ಮೊರೊಕ್ಕೊದಲ್ಲಿ ಇದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. (ದಿನೇಶ್ ಸಿ ಶರ್ಮ, ದಿ ವೈರ್, ಎಪ್ರಿಲ್23). ಅಂದರೆ ನಮ್ಮ ಈಗಿನ ಆಳುವ ಮಂದಿ ಈಗ ಪಾಕಿಸ್ತಾನವನ್ನೂ ಮೀರಿಸಿ ಸೌದಿ ಅರೇಬಿಯಾವನ್ನು ಅನುಕರಿಸುತ್ತಿದ್ದಾರೆ!

'ಅಚ್ಛೇ ದಿನ್' ಸರಕಾರದಲ್ಲಿ, ಶಿಕ್ಷಣ ಮಂತ್ರಿ(ಮಾನವ ಸಂಪನ್ಮೂಲ ಮಂತ್ರಿ)ಯಾಗಿದ್ದ ಸತ್ಪಾಲ್ ಸಿಂಗ್ 2018ರಲ್ಲಿ ಡಾರ್ವಿನ್ ಸಿದ್ಧಾಂತ ವೈಜ್ಞಾನಿಕವಾಗಿ ತಪ್ಪು ಏಕೆಂದರೆ "ಒಂದು ಮಂಗ ಮಾನವನಾದದ್ದನ್ನು ಯಾರೂ ಇದುವರೆಗೆ ನೋಡಿಲ್ಲ" ಎಂದು ಹೇಳಿದ್ದನ್ನು ಮತ್ತು ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದ ಜಿ. ನಾಗೇಶ್ವರ ರಾವ್ 2019ರಲ್ಲಿ ಭಾರತೀಯ ವಿಜ್ಞಾನ ಸಮ್ಮೇಳನದಲ್ಲಿ ಇದಕ್ಕೆ ಪರ್ಯಾಯವಾಗಿ 'ದಶಾವತಾರ' ಸಿದ್ಧಾಂತವನ್ನು ಪ್ರತಿಪಾದಿಸಿದರು

ಪುಟ 14 ನೋಡಿ



ವ್ಯಂಗ್ಯಚಿತ್ರ: ರಾಜೇಂದ್ರ ಧೋಡಪ್‌ಕರ್

'ಮನ್ ಕೀ ಬಾತ್' ನೂರು: ಅದರ ನಿರರ್ಥಕತೆಯ ಉದಾಹರಣೆ ಮೂರು

ಉದಾಹರಣೆ 1: ಮೋದಿಯವರ 'ಮನ್ ಕೀ ಬಾತ್' ಎಂಬ ಮಂಥ್ಲೀ ಭಾಷಣಗಳನ್ನು 23 ಕೋಟಿ ಭಾರತೀಯರು ನಿಯಮಿತ ರೂಪದಲ್ಲಿ ಕೇಳುತ್ತಿದ್ದಾರೆಂದೂ, ಕಡೇಪಕ್ಷ 100 ಕೋಟಿ ಜನರು ಒಮ್ಮೆಯಾದರೂ ಕೇಳಿದ್ದಾರೆಂದೂ, ಐಐಎಮ್ ರೋಹ್ತಕ್ ನಡೆಸಿದ ಅಧ್ಯಯನದಲ್ಲಿ ಗೊತ್ತಾಗಿದೆ. ಈ ಅಧ್ಯಯನಕ್ಕೆ 'ಪ್ರಸಾರ ಭಾರತಿ' ಧನಸಹಾಯ ನೀಡಿತ್ತು.

ಈ ಸಮೀಕ್ಷೆಯ ಫಲಿತಾಂಶ/ಮುಖ್ಯಾಂಶವನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ ಪ್ರೊ. ಧೀರಜ್ ಶರ್ಮಾ ಅವರ ಹಿನ್ನೆಲೆ ನೋಡಿ:

ಇವರು ಐಐಎಮ್ ರೋಹ್ತಕ್ ಸಂಸ್ಥೆಯ ನಿರ್ದೇಶಕರು. ಸ್ವತಃ ಪ್ರಧಾನ ಮಂತ್ರಿಯವರು ಅಧ್ಯಕ್ಷರಾಗಿದ್ದ ಸಮಿತಿಯೇ ಅವರ ನೇಮಕಾತಿ ಮಾಡಿತ್ತು. ಅವರ ಮೇಲೆ ಹಣಕಾಸು ಅಪರಾತಪರಾ, ಲೈಂಗಿಕ ಅನೈತಿಕತೆಯ ಆಪಾದನೆಗಳು ಬಂದವು. ಶರ್ಮಾ ಅವರ ವಿದ್ಯಾರ್ಹತೆ, ಮತ್ತು ನೇಮಕಾತಿಯನ್ನು ಪ್ರಶ್ನಿಸಿ ಪಂಜಾಬ್– ಹರ್ಯಾಣಾ ನ್ಯಾಯಾಲಯದಲ್ಲಿ ಖಟ್ಲೆ ಹೂಡಲಾಗಿತ್ತು.

ಕೇಂದ್ರ ಶಿಕ್ಷಣ ಇಲಾಖೆ ಈತನಿಂದ ಪದವಿ ಸರ್ಟಿಫಿಕೇಟನ್ನು ಪಡೆಯಲು ಮೂರು ವರ್ಷಗಳಿಂದ ಯತ್ನಿಸಿ ಸೋತಿತ್ತು. ಆದರೆ ಮಾಹಿತಿ ಹಕ್ಕು ಕಾಯ್ದೆಯ ಆಧಾರದ ಮೇಲೆ ಪಡೆದ ದಾಖಲೆಗಳ ಪ್ರಕಾರ ಆತ ಎರಡನೇ ದರ್ಜೆಯಲ್ಲಿ ಪದವಿ ಪಾಸಾಗಿದ್ದು ನಿಜವೆಂಬುದು ಗೊತ್ತಾಗಿದೆ.

ಅಂದಮೇಲೆ ನಿರ್ದೇಶಕ ಹುದ್ದೆಗೆ ಅರ್ಹತೆಯೇ ಇರಲಿಲ್ಲವೆಂದಾಯಿತು. ಆದರೂ ಅವರ ಐದು ವರ್ಷಗಳ ಮೊದಲ ಸೇವಾವಧಿ ಮುಗಿದು, ಎರಡನೆಯ ಬಾರಿ ಮತ್ತೆ ನಿರ್ದೇಶಕ ಹುದ್ದೆಯಲ್ಲಿ ಮುಂದುವರೆದಿದ್ದಾರೆ.

ಶರ್ಮಾ ನೇಮಕಾತಿ ಅಸಿಂಧುವೆಂದೂ, ನಡತೆ ಅನೈತಿಕದ್ದೆಂದೂ, ಪ್ರಶ್ನಾರ್ಹವೆಂದೂ, ನಿರ್ದೇಶಕ ಹುದ್ದೆಯಲ್ಲಿರಲು ನಾಲಾಯಕ್ಕೆಂದೂ ಶಿಕ್ಷಣ ಇಲಾಖೆಯೇ ನ್ಯಾಯಾಲಯಕ್ಕೆ ಈಚೆಗಷ್ಟೆ ಹೇಳಿಕೆ ನೀಡಿದೆ. "ರಾಷ್ಟ್ರಮಟ್ಟದ ಶಿಕ್ಷಣಸಂಸ್ಥೆಯ ಪ್ರತಿಷ್ಠೆಯನ್ನು ನೀವು ಮಣ್ಣು ಪಾಲು ಮಾಡಿದಿರಿ, ನಿಮ್ಮ ಡಿಗ್ರಿಯ ವಿವರಗಳನ್ನು ಮುಚ್ಚಿಟ್ಟಿರಿ, ಹುದ್ದೆಯ ದುರುಪಯೋಗ ಮಾಡಿಕೊಂಡಿರಿ, ನಿಮ್ಮ ಮೇಲೆ ಕ್ರಮ ಕೈಗೊಳ್ಳಬಾರದೇಕೆ?– ಎಂದು ಇಲಾಖೆ ಈತನಿಂದ ಸ್ಪಷ್ಟೀಕರಣ ಕೇಳಿತ್ತು.

ಇದೇ ವ್ಯಕ್ತಿ ಮೊನ್ನೆ ಕೇಂದ್ರ ವಾರ್ತಾ ಇಲಾಖೆಯ ಮಾಧ್ಯಮಗೋಷ್ಠಿಯ ವೇದಿಕೆಯಲ್ಲಿ ಕೂತು 'ಮನ್ ಕೀ ಬಾತ್' ಅದೆಷ್ಟು ಜನಪ್ರಿಯವಾಗಿದೆ ಎಂಬುದರ ಸಮೀಕ್ಷಾ ವರದಿಯ ಸಾರಾಂಶವನ್ನು ಮಾಧ್ಯಮದ ಮುಂದೆ ಬಿಚ್ಚಿಟ್ಟರು "ಮೋದಿಯವರ ಮಾತುಗಳಿಂದಾಗಿ ಭಾರತದ ನಾಗರಿಕರ ನಡವಳಿಕೆಯೂ ಸುಧಾರಿಸಿದೆ ಮತ್ತು ಶೇ. 60 ಜನರು ರಾಷ್ಟ್ರದ ಉನ್ನತಿಗಾಗಿ ಶ್ರಮಿಸುವುದಾಗಿ ಈ ಸಮೀಕ್ಷೆಯಲ್ಲಿ ಹೇಳಿದ್ದಾರೆ" ಎಂತಲೂ ವಿಶ್ಲೇಷಿಸಿದ್ದಾರೆ. 'ನಡವಳಿಕೆ' ಸುಧಾರಿಸಿದ್ದನ್ನು ಹೇಗೆ ಪತ್ತೆ ಹಚ್ಚಿದರೊ? ಮೋದಿಯವರ ಮಾತುಗಳು ಈತನ ನಡವಳಿಕೆಯ ಮೇಲೆ ಪ್ರಭಾವ ಬೀರಿದಂತೇನೂ ಕಾಣಲಿಲ್ಲ.

ತನ್ನ ನಡವಳಿಕೆಗೆ ಸ್ಪಷ್ಟೀಕರಣ ನೀಡುವ ಬದಲು ಶಿಕ್ಷಣ ಇಲಾಖೆಯ ವಿರುದ್ಧವೇ ಶರ್ಮಾ ಖಟ್ಲೆ ಹಾಕಿದ್ದಾರೆ. ತನ್ನನ್ನು ನಿರ್ದೇಶಕ ಹುದ್ದೆಯಿಂದ ಕಿತ್ತು ಹಾಕುವಂತಿಲ್ಲವೆಂದು ಹೇಳಿ ನ್ಯಾಯಾಲಯಕ್ಕೆ ಹೋಗಿರುವ ಇದೇ ಮಹಾಶಯ, ಹಿಂದೊಮ್ಮೆ ನ್ಯಾಯಾಂಗವನ್ನೇ ಕಿಚಾಯಿಸಿ ಟ್ವೀಟ್ ಮಾಡಿದ್ದ. ಆ ಟ್ವೀಟ್‌ನ ಒಕ್ಕಣೆ ಹೀಗಿದೆ:

"ಆಶ್ಚರ್ಯದ ಸಂಗತಿ ಏನೆಂದರೆ, ಈ ದೇಶದ ನ್ಯಾಯಾಲಯಗಳು ತೀರ್ಪು ಕೊಡುವುದಕ್ಕಿಂತ

ಮೋದಿಯವರ ಮಾತಿನ ಮೋಡಿಯೇ ಅಂಥದ್ದು. ಆಮಿರ್ ಖಾನ್ ನಿಂದ ಹಿಡಿದು ಚೇತನ್ ಕುಮಾರ್ ವರೆಗೆ ಎಲ್ಲರನ್ನೂ ಸೆಳೆಯುವಂಥದ್ದು. ಆದರೆ ಅವರು 'ಮನ್ ಕಿ ಬಾತ್' ನಲ್ಲಿ ಹೇಳುವ ವಚನಾಮೃತಗಳನ್ನು ಅವರ ಅನುಯಾಯಿಗಳೇ ಪಾಲಿಸುತ್ತಿಲ್ಲ ಏಕೆ? ಈ ಕುರಿತು ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ ಹಿಂದೀ ಪತ್ರಕರ್ತ ರವೀಶ್ ಕುಮಾರ್ ನೀಡಿದ ಮೂರು ಉದಾಹರಣೆಗಳ ಮುಖ್ಯಾಂಶಗಳು ಇಲ್ಲಿವೆ: ಈ ಮೂರೂ ಕಳೆದ 3–4 ದಿನಗಳ ಸುದ್ದಿಯನ್ನು ಆಧರಿಸಿದ್ದು. ಕಳೆದ ಭಾನುವಾರ 100ನೆಯ 'ಮನ್ ಕಿ ಬಾತ್' ಪ್ರಸಾರವಾಗಿದೆ. ಅದಕ್ಕೆ ಸಂಬಂಧಿಸಿ ಮಾತುಗಳು ಇಲ್ಲಿವೆ.



ಉಪದೇಶ ನೀಡುವ ಕೆಲಸವನ್ನೇ ಹೆಚ್ಚಾಗಿ ಮಾಡುತ್ತಿವೆ. ಪ್ರವಚನ ನಿಲ್ಲಿಸಿ" ಎಂಬ ಮಾತನ್ನು ಬಿತ್ತರಿಸಿದ್ದರು!

ಮೋದಿಯವರ ಜನಪ್ರಿಯತೆಯನ್ನು ಅಳೆಯಲೆಂದು 'ಮನ್ ಕಿ ಬಾತ್' ಭಾಷಣವನ್ನು ಆಲಿಸಿದ 5 ಲಕ್ಷ ಜನರ ಶ್ಲಾಘನೀಯ ಪ್ರತಿಕ್ರಿಯೆಗಳನ್ನು ವಿಶ್ಲೇಷಣೆ ಮಾಡಿದ್ದಾಗಿ ಐಐಎಮ್ ಸಮೀಕ್ಷೆ ಹೇಳಿದೆ. ಇರಬಹುದು. ಆದರೆ 2020ರಲ್ಲಿ NEET/JEE ಪರೀಕ್ಷೆಯನ್ನು ಮುಂದೂಡಬೇಕೆಂಬ ಕೂಗು ಎಲ್ಲೆಡೆ ಕೇಳಬರುತ್ತಿದ್ದಾಗ ಆ ಅವಧಿಯಲ್ಲಿ ಬಂದ "ಮನ್ ಕಿ ಬಾತ್" ವಚನಾಮೃತವನ್ನು ಕೇಳಿ ತುಂಬ ಜನ ಕುಪಿತರಾದರು. ಹತ್ತು ಲಕ್ಷಕ್ಕೂ ಹೆಚ್ಚು ಡಿಸ್‌ಲೈಕ್‌ಗಳೂ ಟೀಕೆಗಳೂ ಬಂದವು. ಈಗ ಬಿಜೆಪಿಯ ಸ್ವಂತದ ಯೂಟ್ಯೂಬ್ ಚಾನೆಲ್ ನಲ್ಲಿ ಕಮೆಂಟ್‌ಗಳನ್ನು ಪ್ರಕಟಿಸುವುದನ್ನೇ ಕೈಬಿಡಲಾಗಿದೆ.

ಸಾರ್ವತ್ರಿಕ ಯೂಟ್ಯೂಬ್‌ನಲ್ಲಿ 'ಮನ್‌ಕಿ ಬಾತ'ನ್ನು ಕೇಳಿ ಯಾರು ಬೇಕಾದರೂ ಕಮೆಂಟ್ ಮಾಡಬಹುದು. ಇತ್ತೀಚಿನ 99ನೇ ಎಪಿಸೋಡನ್ನು 74 ಸಾವಿರ ಜನರು ನೋಡಿದ್ದಾಗಿ ಅಲ್ಲಿ ದಾಖಲೆ ಇದೆಯಾದರೂ ಕೇವಲ 6 ಕಮೆಂಟ್‌ಗಳು ಬಂದಿವೆ.

ಯೂಟ್ಯೂಬ್ ಚಾನೆಲ್‌ಗಳನ್ನು ಕೋಟಿಗಟ್ಟಲೆ ಜನರು ನೋಡುವುದು ಅಂಥ ಅಸಾಮಾನ್ಯ ಸಂಗತಿಯೇನಲ್ಲ. ನಟ ಭುವನ್ ಬಾಮ್ ಎಂಬಾತನಿಗೆ ಎರಡೂವರೆ ಕೋಟಿ ಚಂದಾದಾರರಿದ್ದಾರೆ. ತನ್ಮಯ್ ಭಟ್‌ಗೆ 128 ಕೋಟಿ, ಧ್ರುವ್ ರಾಠಿಗೆ 149 ಕೋಟಿ, ಆಶಿಶ್ ಚಂಚಲಾನಿ ಎಂಬಾತನಿಗೆ 436 ಕೋಟಿ ವ್ಯೂಸ್ ಸಿಕ್ಕಿವೆ.

ನಾಗೇಶ ಹೆಗಡೆ

ಮೋದಿಯವರ ಮಾತನ್ನು ಜಗತ್ತಿನ ಅತಿ ದೊಡ್ಡ ರೇಡಿಯೊ ಜಾಲವೆನಿಸಿದ ಆಲ್ ಇಂಡಿಯಾ ರೇಡಿಯೊ ಮೂಲಕ ಪ್ರಸಾರ ಮಾಡಲಾಗುತ್ತಿದೆ. 262 ರೇಡಿಯೊ ಕೇಂದ್ರಗಳು 375ಕ್ಕೂ ಹೆಚ್ಚು ಖಾಸಗಿ ಮತ್ತು ಸಮುದಾಯ ರೇಡಿಯೊ ಕೇಂದ್ರಗಳ ಮೂಲಕ 52 ಭಾರತೀಯ ಭಾಷೆಗಳಲ್ಲೇ ಅಲ್ಲದೆ, ಹನ್ನೊಂದು ವಿದೇಶೀ ಭಾಷೆಗಳಲ್ಲೂ ಇದು ಪ್ರಸಾರವಾಗುತ್ತಿದೆ. ದೂರದರ್ಶನದ 34 ಕೇಂದ್ರಗಳು ಮತ್ತು ನೂರಕ್ಕೂ ಹೆಚ್ಚು ಖಾಸಗಿ ವಾರ್ತಾ ಚಾನೆಲ್‌ಗಳು ಇದನ್ನು ಪ್ರಸಾರ ಮಾಡುತ್ತಿವೆ. ಆದರೂ ನೀವು ರಸ್ತೆಯ ಬದಿಯ ಶ್ರಮಜೀವಿಗಳನ್ನು ಅಥವಾ ದಾರಿಹೋಕರನ್ನು ವಿಚಾರಿಸಿ ನೋಡಿ, "ಒಂದು ಬಾರಿಯೂ ಮನ್‌ಕಿ ಬಾತನ್ನು ಕೇಳಿಲ್ಲ" ಎನ್ನುವವರು ಸಿಕ್ಕೇ ಸಿಗುತ್ತಾರೆ. ಐಐಎಮ್ ಸಮೀಕ್ಷೆಯ ಪ್ರಕಾರ ಕೇವಲ 4%ರಷ್ಟು ಜನರೂ ಅದನ್ನು ಕೇಳಿಲ್ಲ. ಅಂಥವರನ್ನು ಹುಡುಕಿ ಹುಡುಕಿ ಅವರ ಮನೆಗೆ ಹೋಗಿ ಅಲ್ಲಿರುವವರಿಗೆ ಮನ್ ಕೀ ಬಾತನ್ನು ಕೇಳಿಸುವುದು ಒಳ್ಳೆಯದೇನೊ.

ಉದಾಹರಣೆ 2: ಭಾರತೀಯ 'ಕುಸ್ತಿ ಮಹಾಸಂಘ'ದ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ ಶರಣ್ ಸಿಂಗ್ ಎಂಬಾತನ ಚರಿತ್ರೆ ಇದು. ಆತನ ಮೇಲೆ ಲೈಂಗಿಕ ಕಿರುಕುಳ, ಗೂಂಡಾಗಿರಿ, ಹಣಕಾಸಿನ ಅವ್ಯವಹಾರ ಮತ್ತು ನಿರಂಕುಶ ಮನೋವೃತ್ತಿಯ ಆಪಾದನೆಗಳಿವೆ. ಅವನ ಮೇಲೆ ಎಫ್‌ಐಆರ್ ದಾಖಲಿಸಬೇಕೆಂದು ಒತ್ತಾಯಿಸಿ ದಿಲ್ಲಿಯ ಜಂತರ್ ಮಂತರ್ ಮೈದಾನದಲ್ಲಿ ಅಂತಾರಾಷ್ಟ್ರೀಯ ಮೆಡಲ್ ಗಳಿಸಿದ ಕುಸ್ತಿ ಪ್ರವೀಣೆಯರು ಮತ್ತು ಪಟುಗಳು ಈ ಉರಿಬಿಸಿಲಲ್ಲೂ ಕೂತಿದ್ದಾರೆ. ನ್ಯಾಯಾಲಯದ ಬಾಗಿಲನ್ನೂ ತಟ್ಟಿದ್ದಾರೆ. ರಾತ್ರಿ ದೀವಟಿಗೆ ಪ್ರತಿಭಟನೆಯೂ ನಡೆದಿದೆ.

ತಾನು ಗೂಂಡಾ ಹೌದೆಂಬುದಕ್ಕೆ ಬಿಬಿಸಿಂಗ್ ಅನೇಕ ಸಾಕ್ಷ್ಯಗಳನ್ನು ಹಿಂದಿನಿಂದಲೂ ಉದುರಿಸುತ್ತಲೆ ಬಂದಿದ್ದಾನೆ. ಬಾಬ್ರಿ ಮಸೀದಿ ಬೀಳಿಸಿದ ತರುವಾಯ ತನ್ನ ಮೇಲೆಯೇ ಮೊದಲ ಕೇಸು ಬಿತ್ತೆಂದು ಹೆಮ್ಮೆಯಿಂದ ಹೇಳಿಕೊಂಡವ ಈತ. ತಾನು ಇಂಥವನನ್ನು ಕೊಂದಿದ್ದು ಹೌದು ಎಂದು ಯೂಟ್ಯೂಬ್ ಸಂದರ್ಶನದಲ್ಲಿ ಹೇಳಿಕೊಂಡವ.

'ಈ ಕುಸ್ತಿಪಟುಗಳು ಶಕ್ತಿಶಾಲಿಗಳು. ಅವರನ್ನು ನಿಯಂತ್ರಿಸಲು ಅವರಿಗಿಂತ ಶಕ್ತಿಶಾಲಿಯಾದ ನನ್ನಂಥವರೇ ಬೇಕು' ಎಂದಿದ್ದಕ್ಕೂ ದಾಖಲೆಗಳಿವೆ. ಮೋದಿಯವರ ಮಾದರಿಯಲ್ಲೇ ತಾನೂ ತನ್ನ ಅನುಯಾಯಿಗಳಿಗಾಗಿ 'ಮನ್ ಕಿ ಬಾತ್' ಆರಂಭಿಸುತ್ತೇನೆ ಎಂದು ಕೂಡ ಹೇಳಿದ್ದು ದಾಖಲಾಗಿದೆ.

ಉದಾಹರಣೆ 3: ಬಾಲೇಶ್ ಧನಖರ್ ಎಂಬಾತನ ಕತೆ ಇನ್ನೊಂದು ತೆರನಾದದ್ದು. ಆತ 'ಬಿಜೆಪಿಯ ವಿದೇಶೀ ಗೆಳೆಯರ ಬಳಗದ (OFBJP) ಆಸ್ಟ್ರೇಲಿಯಾ ಶಾಖೆಯ ಮುಖ್ಯಸ್ಥನಾಗಿದ್ದ. ಸಿಡ್ನಿಯಲ್ಲಿ ವಾಸವಾಗಿರುವ ಈತ ಕೊರಿಯಾ ದೇಶದ ಹುಡುಗಿಯರನ್ನು ಕೆಲಸ ಕೊಡುತ್ತೇನೆಂದು ಸಂದರ್ಶನಕ್ಕೆ ಕರೆಸಿಕೊಂಡು, ಅವರಿಗೆ ಅಮಲು ಪದಾರ್ಥ ಕೊಟ್ಟು ನಂತರ ರೇಪ್ ಮಾಡುತ್ತಿದ್ದ, ತನ್ನ ಕೃತ್ಯವನ್ನು ರೆಕಾರ್ಡ್ ಕೂಡ ಮಾಡಿಕೊಳ್ಳುತ್ತಿದ್ದ. ಐವರು ಕೊರಿಯನ್ ಯುವತಿಯರ ಮೇಲೆ ದೌರ್ಜನ್ಯ ನಡೆಸಿದ ಮತ್ತು ಅದಕ್ಕೆ ಸಂಬಂಧಿಸಿ ಇನ್ನೂ 38 ಅಪರಾಧಗಳನ್ನು ಎಸಗಿದ ತಪ್ಪಿಗೆ ಅಲ್ಲಿನ ನ್ಯಾಯಾಲಯ ಧನಖರ್‌ಗೆ ಬೇಡಿ ಹಾಕಿ ಮೊನ್ನೆ ಜೈಲಿಗೆ ಕಳಿಸಿದೆ.

ಈತನೂ ಮೋದಿಯವರ ಜೊತೆ ಹಾಗೂ ಇತರ ಬಿಜೆಪಿ ಮುಖಂಡರ ಜೊತೆ ನಿಂತು ತೆಗೆಸಿಕೊಂಡ ಅದೆಷ್ಟೊ ಚಿತ್ರಗಳು ಇಂಟರ್ನೆಟ್ ನಲ್ಲಿ ಸಿಗುತ್ತವೆ. ಧನಖರ್ ಕಾನೂನಿನ ಬಲೆಗೆ ಬಿದ್ದನೆಂಬುದು ಗೊತ್ತಾದ ತಕ್ಷಣ ಔಈಃಎಕಯ ಆಸ್ಟ್ರೇಲಿಯಾ ಶಾಖೆ ಟ್ವೀಟ್ ಮಾಡಿ, ಈತ 2018ರಲ್ಲೇ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಟ್ಟಿದ್ದಾನೆಂದೂ, ಆತನ ಕರಾಳ ಕೃತ್ಯಗಳು ಅಕ್ಷಮ್ಯವೆಂದೂ, ಕಾನೂನಿನ ಉಗ್ರ ಕ್ರಮಗಳನ್ನು ಆತ ಎದುರಿಸಲೇಬೇಕೆಂದೂ ಟ್ವೀಟ್ ಮಾಡಿದೆ.

ಯುವತಿಯರ ಲೈಂಗಿಕ ಶೋಷಣೆ ಮಾಡುವುದು ಅಕ್ಷಮ್ಯವೆಂದು ಬಿಜೆಪಿಗೆ ನಿಜಕ್ಕೂ ಅನ್ನಿಸಿದ್ದರೆ, ಬ್ರಿಜ್ ಭೂಷಣ್ ಸಿಂಗ್ ಕೂಡ ಕಾನೂನಿನ ಕ್ರಮವನ್ನು ಎದುರಿಸಬೇಕೆಂದು ಬಿಜೆಪಿ ಟ್ವೀಟ್ ಏಕೆ ಮಾಡುತ್ತಿಲ್ಲ?

ಡಿಗ್ರಿ ಸರ್ಟಿಫಿಕೇಟ್‌ಗಳನ್ನು ಮುಚ್ಚಿಡುವುದು ಸರಿಯಲ್ಲವೆಂಬ ಶಿಕ್ಷಣ ಇಲಾಖೆಯ ಮಾತುಗಳನ್ನು ಮೋದಿಯವರೆಗೆ ಬಿಜೆಪಿ ಕೊಂಡೊಯ್ಯಬಹುದೆ?

ಅಧಿಕಾರಸ್ಥರಿಂದ ಶೋಷಣೆಗೊಳಗಾಗುವ 'ಹೆಣ್ಣುಮಕ್ಕಳ ಮನ್ ಕಿ ಬಾತ್' ಏನೆಂದು ದಿಲ್ಲಿಯಲ್ಲಿರುವ ಯಾರಾದರೂ ಮೋದಿಯವರ ಕಿವಿಗೆ ಹಾಕಬಹುದೆ?

ಮೋದಿಯವರು ತಮ್ಮ ಮನ್ ಕಿ ಬಾತ್‌ನಲ್ಲಿ ಈ ವಿಷಯದ ಬಗ್ಗೆ ಬೆಳಕು ಚೆಲ್ಲಬಹುದೆ?

ಮಾತಿನ ಮೋಡಿಗಾರ ಅವರು!







ಜನಶಕ್ತಿ ಕನ್ನಡ ವಾರಪತ್ರಿಕೆ ಮೇ 1–7, 2023 11 May 1-7, 2023 JANASHAKTHI KANNADA VARA PATRIKE

ಕರ್ನಾಟಕ: ಅಂತಿಮ ಚುನಾವಣಾ ಕದನ ಆರಂಭವಾಗಿದೆ........

ಪುಟ 16 ರಿಂದ


ಸರಕುಗಳು ಮತ್ತು ರೂ. 16 ಕೋಟಿ ಮೌಲ್ಯದ ಮಾದಕವಸ್ತುಗಳು ಸೇರಿವೆ. ಕಳೆದ ಚುನಾವಣೆಗಿಂತ ಎರಡು ಪಟ್ಟಿಗಿಂತಲೂ ಹೆಚ್ಚು ವಶವಾಗಿದೆ. ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಒಟ್ಟು 58 ಕೋಟಿ ರೂ. ವಶಪಡಿಸಿಕೊಳ್ಳಲಾಗಿತ್ತು. ಚುನಾವಣಾ ಅಕ್ರಮಗಳಿಗಾಗಿ ಇದುವರೆಗೆ 1873 FIR ಗಳನ್ನು ದಾಖಲಿಸಲಾಗಿದೆ. ಆದಾಗ್ಯೂ ಬೆಳಕಿಗೆ ಬಂದವುಗಳು ಒಟ್ಟು ಅಕ್ರಮಗಳ ಒಂದು ಸಣ್ಣ ಭಾಗ ಎಂಬುದು ಸ್ಪಷ್ಟವಾಗಿದೆ.

ಪ್ರಣಾಳಿಕೆಗಳಿಲ್ಲ, ಕೇವಲ ಭರವಸೆಗಳು/ಖಾತರಿ ಮಾತ್ರ:

ಹೆಚ್ಚಿನ ಪಕ್ಷಗಳು ಚುನಾವಣಾ ಪ್ರಣಾಳಿಕೆಗೆ ಪ್ರಾಮುಖ್ಯತೆ ನೀಡುವುದನ್ನು ನಿಲ್ಲಿಸಿವೆ ಮತ್ತು ಪಕ್ಷದ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ವ್ಯಕ್ತಪಡಿಸುವ ವಿವರವಾದ ಚುನಾವಣಾ ಪ್ರಣಾಳಿಕೆಗಳನ್ನು ಪ್ರಚಾರ ಮಾಡುವುದನ್ನು ನಿಲ್ಲಿಸಿವೆ. ಮೂರು ಪ್ರಮುಖ ಪಕ್ಷಗಳಲ್ಲಿ ಜೆಡಿ(ಎಸ್) ಮಾತ್ರ ಎಪ್ರಿಲ್ 27ರಂದು ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿತು. ಒಂದು ವೇಳೆ ಪ್ರಣಾಳಿಕೆ ಮಾಡಿದರೆ ಅದು ದಾಖಲೆಗಾಗಿ ಮಾತ್ರ. ಬದಲಾಗಿ, ಮಾಧ್ಯಮ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿನ ಜಾಹೀರಾತುಗಳು ಅಥವಾ ಪೋಸ್ಟರ್‌ಗಳಲ್ಲಿ ಹೆಚ್ಚಾಗಿ ಜಂಟಿಯಾಗಿ ಮಾಡಲಾದ 'ಭರವಸೆ'ಗಳ ಒಂದು ಸೆಟ್, ಸಾರ್ವಜನಿಕ ಸಭೆಗಳಲ್ಲಿ ಪೂರ್ವಸಿದ್ಧತೆಯಿಲ್ಲದ ಘೋಷಣೆಗಳು ಪ್ರಣಾಳಿಕೆಯಾಗಿ ಕಾರ್ಯನಿರ್ವಹಿಸುತ್ತವೆ.

ಮಹಿಳೆಯರಿಗೆ 2,000 ರೂ., 200 ಯೂನಿಟ್ ಉಚಿತ ವಿದ್ಯುತ್, 10 ಕೆಜಿ ಉಚಿತ ಅಕ್ಕಿ ಮತ್ತು ನಿರುದ್ಯೋಗಿ ಪದವೀಧರರಿಗೆ 3,000 ರೂ.ಗಳ ನಾಲ್ಕು 'ಗ್ಯಾರಂಟಿಗಳ ಮೇಲೆ ಕಾಂಗ್ರೆಸ್ ಪ್ರಚಾರ ಮಾಡುತ್ತಿದೆ. ಸಾರ್ವಜನಿಕ ಸಾರಿಗೆಗಳನ್ನು ಮಹಿಳೆಯರಿಗೆ ಉಚಿತಗೊಳಿಸುವ ಐದನೆಯ ಗ್ಯಾರಂಟಿಯನ್ನು ಏಪ್ರಿಲ್ 27ರಂದು ಘೋಷಿಸಿದೆ. ಕರಾವಳಿ ಪ್ರದೇಶದ 10 ಅಂಶಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಬಿಡುಗಡೆ ಮಾಡಿದೆ. ಬಿಜೆಪಿ ಹಲವು ಕಾರ್ಯಕ್ರಮಗಳನ್ನು ಕ್ಷೇತ್ರವಾರು ಹೆಚ್ಚಾಗಿ ಸರ್ಕಾರಿ ಜಾಹೀರಾತುಗಳ ರೂಪದಲ್ಲಿ ಪ್ರಕಟಿಸುತ್ತಿದೆ. ಜೆಡಿಎಸ್ 12 ಅಂಶಗಳ ಪ್ರಣಾಳಿಕೆಯಲ್ಲಿ ಮಹಿಳಾ ಸಬಲೀಕರಣ ಮತ್ತು ರೈತರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಸ್ತ್ರೀ ಶಕ್ತಿ ಗುಂಪುಗಳಿಂದ ಪಡೆದಿರುವ ಸಾಲ ಮನ್ನಾ, ವರ್ಷದಲ್ಲಿ ಐದು ಎಲ್ಪಿಜಿ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡುವುದಾಗಿ, ಗರ್ಭಿಣಿಯರಿಗೆ ಆರು ತಿಂಗಳಿಗೆ 6,000 ರೂ. ಭತ್ಯೆ, ವಿಧವಾ ಪಿಂಚಣಿಯನ್ನು 900 ರೂ.ನಿಂದ 2,500 ರೂ.ಗೆ ಹೆಚ್ಚಿಸುವುದಾಗಿ ಭರವಸೆ ನೀಡಿದೆ. ಪಕ್ಷವು ರೈತರಿಗೆ ಪ್ರತಿ ಎಕರೆಗೆ ರೂ 10,000 ಸಹಾಯಧನವನ್ನು ನೀಡಲು ಪ್ರಸ್ತಾಪಿಸಿದೆ; ಕೃಷಿ ಕಾರ್ಮಿಕರಿಗೆ ರೂ 2,000 ಮಾಸಿಕ ಭತ್ಯೆ; ಕೃಷಿ ಕೈಗೊಂಡಿರುವ ಯುವಕರನ್ನು ವಿವಾಹವಾಗುವ ಮಹಿಳೆಯರಿಗೆ 2 ಲಕ್ಷ ರೂ. ವಿವಿಧ ನಾಗರಿಕ ಸೇವೆಗಳು ಮತ್ತು ರಕ್ಷಣಾ ನೇಮಕಾತಿಗಳಿಗೆ ಕನ್ನಡದಲ್ಲಿ ಪರೀಕ್ಷೆಗಳನ್ನು ನಡೆಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವುದಾಗಿ ಜೆಡಿಎಸ್ ಭರವಸೆ ನೀಡಿದೆ. ಪಕ್ಷ ಅಧಿಕಾರಕ್ಕೆ ಬಂದರೆ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸಲು ಕಾನೂನು ತರುವುದಾಗಿ ಅದು ಭರವಸೆ ನೀಡಿದೆ.

ಸಿಪಿಐ(ಎಂ) ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದು, ಬಿಜೆಪಿಯನ್ನು ಸೋಲಿಸಲು, ಸಿಪಿಐ(ಎಂ) ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ವಿಧಾನಸಭೆಯಲ್ಲಿ ದುಡಿಯುವ ಜನರ ಧ್ವನಿಯಾಗಲು ಮತ್ತು ಜಾತ್ಯತೀತ ಶಕ್ತಿಗಳನ್ನು ಬಲಪಡಿಸಲು ಕರೆ ನೀಡಿದೆ. ಪ್ರಣಾಳಿಕೆಯು ಬಿಜೆಪಿ ಸರ್ಕಾರದ ಜನವಿರೋಧಿ ಸ್ವಭಾವ, ನೀತಿಗಳು, ದುಷ್ಕೃತ್ಯಗಳು ಮತ್ತು ಅವುಗಳ ವಿರುದ್ಧ ಸಿಪಿಐ(ಎಂ) ಮಧ್ಯಪ್ರವೇಶದ ಸಂಕ್ಷಿಪ್ತ ಅವಲೋಕನವನ್ನು ನೀಡುತ್ತದೆ. ಸಿಪಿಐ(ಎಂ) ಭದ್ರತೆಗಾಗಿ ಮತ್ತು ಬೆಲೆ ಏರಿಕೆಯ ವಿರುದ್ಧ, ಭ್ರಷ್ಟಾಚಾರದ ವಿರುದ್ಧ; ಕೃಷಿ, ರೈತರು ಮತ್ತು ಕೃಷಿ ಕಾರ್ಮಿಕರ ರಕ್ಷಣೆಗಾಗಿ; ಕಾರ್ಮಿಕ, ಕೈಗಾರಿಕೆ ಮತ್ತು ನಗರ ಬಡವರಿಗೆ; ಬಗರ್ ಹುಕುಂ/ವಸತಿ ನಿವೇಶನಕ್ಕಾಗಿ; ಶಿಕ್ಷಣ, ಆರೋಗ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ; ಸಾಮಾಜಿಕ ನ್ಯಾಯಕ್ಕಾಗಿ–ಗುರುತಿಸಲಾದ ನಿರ್ದಿಷ್ಟ ಕ್ರಮಗಳಿಗಾಗಿ ಹೋರಾಡಲು ಮತ್ತು ಅವುಗಳನ್ನು ಜಾರಿಗೆ ತರಲು ಭರವಸೆ ನೀಡುತ್ತದೆ.



ಕೃಪೆ: ದಿನೇಶ್ ಕುಕ್ಕುಜಡ್ಕ

ಜಾತಿ, ಧರ್ಮ, ಹಣ ಬಲ, ಭುಜಬಲ, ಮಠಾಧೀಶರು, ಉಡುಗೊರೆಗಳು, ಮದ್ಯ, ಲಂಚ, ರೋಡ್ಶೋ, ಬಾಡಿಗೆ ಜನರೊಂದಿಗೆ ರ್ಯಾಲಿ ಇತ್ಯಾದಿಗಳೊಂದಿಗೆ ಚುನಾವಣಾ ಪ್ರಚಾರ ನಡೆಯುತ್ತಿವೆ. ಅನೇಕ ವರ್ಗ/ಸಮೂಹ ಸಂಘಟನೆಗಳು, ಜನಾಂದೋಲನಗಳು, ಬುದ್ಧಿಜೀವಿಗಳು/ಸಾಮಾಜಿಕ ಕಾರ್ಯಕರ್ತರ ಗುಂಪುಗಳು ವಿವಿಧ ಸಂಬಂಧಿತ ವಿಷಯಗಳ ಕುರಿತು 'ಜನರ ಪ್ರಣಾಳಿಕೆ' ಗಳನ್ನು ಹೊರಡಿಸಲು ಮತ್ತು ಜನರಿಗೆ ಶಿಕ್ಷಣ ನೀಡಲು ತೊಡಗಿಸಿಕೊಂಡಿವೆ. ಸಿಐಟಿಯು 20 ಪುಟಗಳ 'ಕಾರ್ಮಿಕರ ಪ್ರಣಾಳಿಕೆ' ಬಿಡುಗಡೆ ಮಾಡಿದ್ದು, ಕಾರ್ಮಿಕ ವಿರೋಧಿ ಬಿಜೆಪಿ ಸರ್ಕಾರವನ್ನು ಸೋಲಿಸುವಂತೆ ಕಾರ್ಮಿಕರಿಗೆ ಮನವಿ ಮಾಡಿದ್ದು, ಈ ಪ್ರಣಾಳಿಕೆಯನ್ನು ಕಾರ್ಮಿಕರ ನಡುವೆ ಕೊಂಡೊಯ್ಯುತ್ತಿದೆ. ಪ್ರಣಾಳಿಕೆಯಲ್ಲಿ ಕಾರ್ಮಿಕರ ಬೇಡಿಕೆಗಳು ಮತ್ತು ಆಕಾಂಕ್ಷೆಗಳನ್ನು ಎಲ್ಲಾ ರಾಜಕೀಯ ಪಕ್ಷಗಳಿಗೂ ತಿಳಿಸಲಾಗಿದೆ. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ರೈತರ ಸಂಘಟನೆಯ ಜಾಲ 'ಸಂಯುಕ್ತ ಕಿಸಾನ್ ಮೋರ್ಚಾ' ಮತ್ತು ಕರ್ನಾಟಕ ಪ್ರಾಂತ ರೈತ ಸಂಘ (ಎಐಕೆಎಸ್ ರಾಜ್ಯ ಘಟಕ) ಸೇರಿದಂತೆ ರಾಜ್ಯದ ರೈತರ ಸಂಘಟನೆಗಳ ನೆಟ್ವರ್ಕ್ ಸಭೆ ನಡೆಸಿ 15 ಅಂಶಗಳ ರೈತರ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಎಲ್ಲಾ ರಾಜಕೀಯ ಪಕ್ಷಗಳು ಮತ್ತು ರೈತರು ಮತ್ತು ಎಲ್ಲಾ ನಾಗರಿಕರನ್ನು ಈ ಪ್ರಣಾಳಿಕೆ ಉದ್ದೇಶಿಸಿದೆ. ಜನವಾದಿ ಮಹಿಳಾ ಸಂಘಟನೆ ಎಲ್ಲಾ ಮಹಿಳಾ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಿ 'ಮಹಿಳಾ ಪ್ರಣಾಳಿಕೆ' ಬಿಡುಗಡೆ ಮಾಡಿದೆ. ಇದನ್ನು ಎಲ್ಲಾ ರಾಜಕೀಯ ಪಕ್ಷಗಳಿಗೂ ಕಳುಹಿಸಲಾಗಿದೆ ಮತ್ತು ರಾಜ್ಯದಾದ್ಯಂತ ಮಹಿಳೆಯರ ನಡುವೆ ಕೊಂಡೊಯ್ಯಲಾಗುತ್ತಿದೆ.

ಹಿಂದಿನ ಚುನಾವಣೆಯಲ್ಲೂ ಎಡಪಂಥೀಯ/ಸಮೂಹ ಸಂಘಟನೆಗಳು ಇದನ್ನು ಮಾಡುತ್ತಿದ್ದರೆ, ಕೆಲವು ಜನಾಂದೋಲನಗಳು, ಬುದ್ಧಿಜೀವಿಗಳು/ಸಾಮಾಜಿಕ ಕಾರ್ಯಕರ್ತರ ಗುಂಪುಗಳು ಹೊಸ ವಿಧಾನಗಳಲ್ಲಿ ಹೊಸ ಮಾದರಿಯಲ್ಲಿ ಇಂತಹ ಜನಪ್ರಣಾಳಿಕೆಗಳನ್ನು ಸಿದ್ಧಪಡಿಸಿ ಜನಪರ ಬೇಡಿಕೆಗಳ ಪ್ರಚಾರಕ್ಕೆ ಮುಂದಾಗಿರುವುದು ಈ ಚುನಾವಣೆಯಲ್ಲಿ ಹೊಸ ಬೆಳವಣಿಗೆಯಾಗಿದೆ. ಸಿವಿಕ್ ಫೋರಂ, 'ಎದ್ದೇಳು ಕರ್ನಾಟಕ', 'ಬಹುತ್ವ ಕರ್ನಾಟಕ, 'ಸಮಾನ ಮನಸ್ಕರು'ಮುಂತಾದ ಸಂಘಟನೆಗಳು ಈ ಕಾರ್ಯವನ್ನು ಕೈಗೆತ್ತಿಕೊಂಡಿವೆ.

ಪ್ರಚಾರದಲ್ಲಿ ಕೇಳಿಬರುತ್ತಿರುವ ವಿಷಯಗಳು

ಮೂರು ಪ್ರಮುಖ ಪಕ್ಷಗಳ ಸ್ಟಾರ್ ಪ್ರಚಾರಕರ ಸಾರ್ವಜನಿಕ ಸಭೆಗಳು, ರ್ಯಾಲಿಗಳು, ರೋಡ್ಶೋಗಳು ಪ್ರಾರಂಭವಾಗಿವೆ ಮತ್ತು ಸಂಪೂರ್ಣ ವೇಗವನ್ನು ಪಡೆದುಕೊಂಡಿವೆ. ಬಿಜೆಪಿಗೆ ಪ್ರಧಾನಿ ಮೋದಿ, ಅಮಿತ್ ಶಾ, ಜೆಪಿ ನಡ್ಡಾ, ಯೋಗಿ, ಯಡಿಯೂರಪ್ಪ, ಬೊಮ್ಮಾಯಿ; ಕಾಂಗ್ರೆಸ್ಗೆ ರಾಹುಲ್ ಗಾಂಧಿ, ಪ್ರಿಯಾಂಕಾ ವಾದ್ರಾ, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ ಕೆ ಶಿವಕುಮಾರ್; ಜೆಡಿಎಸ್ ಪರ ದೇವೇಗೌಡ, ಹೆಚ್ ಡಿ ಕುಮಾರಸ್ವಾಮಿ ಭರ್ಜರಿ ಪ್ರಚಾರ ಆರಂಭಿಸಿದ್ದಾರೆ.

ಕಾಂಗ್ರೆಸ್ ಪ್ರಚಾರಕರು ಹೆಚ್ಚಾಗಿ ಬಿಜೆಪಿ ಸರ್ಕಾರದ ಕಾರ್ಯವೈಖರಿ/ ದುಷ್ಕೃತ್ಯಗಳು ಮತ್ತು ಈಡೇರದ ಭರವಸೆಗಳ ಮೇಲೆ ಗಮನ ಕೇಂದ್ರೀಕರಿಸಿದ್ದಾರೆ. ಅವರು 'ಡಬಲ್ ಇಂಜಿನ್ ವೈಫಲ್ಯ'ವನ್ನು ಲೇವಡಿ ಮಾಡುತ್ತಿದ್ದಾರೆ ಮತ್ತು ಮೀಸಲಾತಿ ವ್ಯವಸ್ಥೆಯಲ್ಲಿನ ಕೊನೆ–ಗಳಿಗೆಯ ಬೇಕಾಬಿಟ್ಟಿ ಬದಲಾವಣೆಗಳನ್ನು ಪ್ರಶ್ನಿಸಿ ಟೀಕೆ ಮಾಡುತ್ತಿದ್ದಾರೆ. ಅವರು ಸಾಮಾನ್ಯವಾಗಿ ಕೋಮುವಾದದ ಬಗ್ಗೆ ಮೌನವಾಗಿದ್ದರೂ, ಆಯ್ದ ಕೆಲವು ಕೋಮುವಾದದ ಮಗ್ಗುಲುಗಳ ಎತ್ತಿಕೊಂಡು ದಾಳಿ ಮಾಡುತ್ತಿದ್ದಾರೆ. ಮುಸ್ಲಿಂ ಮೀಸಲಾತಿ ರದ್ದತಿಯನ್ನು ಮತ್ತು ಬಿಜೆಪಿ ಸರ್ಕಾರ ತನ್ನ ತರ್ಕವನ್ನು ಸುಪ್ರೀಂ ಕೋರ್ಟ್ನಲ್ಲಿ ಏಕೆ ನೀಡಲಿಲ್ಲ ಎಂದು ಪ್ರಶ್ನಿಸುತ್ತಿದ್ದಾರೆ. ನಂದಿನಿ–ಅಮುಲ್ ವಿಲೀನ, ಕರ್ನಾಟಕ ಮೂಲದ ಬ್ಯಾಂಕ್ಗಳ ವಿಲೀನ, ವಿಐಎಸ್ಎಲ್ನ ಮುಚ್ಚುವಿಕೆ ಇತ್ಯಾದಿಗಳನ್ನು ಪ್ರಾದೇಶಿಕ ಪ್ರತಿಷ್ಠೆ ಅಥವಾ ಅಸ್ಮಿತೆಯ/ ಸ್ವಾಯತ್ತತೆಯ ಮೇಲಿನ ದಾಳಿಯಾಗಿ ಖಂಡಿಸುತ್ತಿದ್ದಾರೆ. 'ಕರ್ನಾಟಕದ ಅಭಿವೃದ್ಧಿಗೆ ಮೋದಿಯವರ ಆಶೀರ್ವಾದ ಬೇಕು' ಎಂಬ ಜೆಪಿ ನಡ್ಡಾ ಅವರ ಹೇಳಿಕೆಯನ್ನು ಪ್ರಾದೇಶಿಕ ಹೆಮ್ಮೆಯ ವಿಚಾರವಾಗಿ ಭಾರಿ ಟ್ರೋಲ್ ಮಾಡಲಾಗಿದೆ. ಆರಂಭದಲ್ಲಿ 'ಬಿಜೆಪಿಯಲ್ಲಿ ಲಿಂಗಾಯತರನ್ನು ಅವಮಾನಿಸಲಾಗುತ್ತಿದೆ/ ಅವರನ್ನು ಬದಿಗೆ ಸರಿಸಲಾಗುತ್ತಿದೆ' ಎಂಬ ಅಭಿಯಾನವನ್ನು ಕೈಗೆತ್ತಿಕೊಳ್ಳಲಾಗಿತ್ತು. ಆದರೆ ನಂತರ ಬಿಜೆಪಿಯಿಂದ 'ಲಿಂಗಾಯತ ಸಿಎಂ ಘೋಷಿಸಿ' ಸವಾಲು ಎದುರಾದಾಗ ಅದರ ಮೇಲೆ ಒತ್ತು ನಿಲ್ಲಿಸಲಾಯಿತು. ಕಾಂಗ್ರೆಸ್ ಇದುವರೆಗೆ ಜೆಡಿಎಸ್ ವಿರುದ್ಧ ನೇರ ಟೀಕೆ ಮಾಡುವುದನ್ನು ತಪ್ಪಿಸಿದೆ.

'ಡಬಲ್ ಇಂಜಿನ್' ಸರ್ಕಾರಗಳ ಲಾಭದ ಕುರಿತು ಪ್ರಚಾರವನ್ನು ಬಿಜೆಪಿ ನಾಯಕರು ಮುಂದುವರಿಸಿದ್ದಾರೆ, ಭರವಸೆಗಳನ್ನು ಈಡೇರಿಸಲಾಗಿದೆ ಎಂದು ಬಿಜೆಪಿ ಹೇಳಿಕೊಳ್ಳುತ್ತದೆ ಮತ್ತು 'ಹೊಸ' (ಹೆಚ್ಚಾಗಿ ಮರುಹೆಸರಿಸಲಾಗಿದೆ/ ಮರುಬಳಕೆ ಮಾಡಿದ ಹಳೆಯ) ಭರವಸೆಗಳನ್ನು ನೀಡುತ್ತದೆ. ಅದು ಕಾಂಗ್ರೆಸ್ ಅನ್ನು ಹಿಂದೂ ವಿರೋಧಿ ಜಾತಿಯ ಆಧಾರದ ಮೇಲೆ ಹಿಂದೂಗಳನ್ನು ವಿಭಜಿಸುತ್ತದೆ ಮತ್ತು ಮತ ಬ್ಯಾಂಕ್ ಆಗಿ ಮುಸ್ಲಿಮರ ಓಲೈಕೆಗಾಗಿ ಎಂದು ಆರೋಪಿಸುತ್ತಲೇ ಇದೆ. ಮುಸ್ಲಿಮರ ಮೀಸಲಾತಿ ರದ್ದತಿಯನ್ನು ಬಿಜೆಪಿ ಸಮರ್ಥಿಸುತ್ತಲೇ ಇದೆ. 'ಪ್ರಾದೇಶಿಕ ಹೆಮ್ಮೆ ಮತ್ತು ಸ್ವಾಯತ್ತತೆಯ ಮೇಲಿನ ದಾಳಿ'ಗೆ 'ಸಹಕಾರಿ ಫೆಡರಲಿಸಂ' ಎಂಬ ಪರಿಭಾಷೆಯೊಂದಿಗೆ ಉತ್ತರಿಸುತ್ತದೆ. ಆದರೆ ಬಿಜೆಪಿ 2018 ರಂತಹ ಉಗ್ರ ಕೋಮು ಪ್ರಚಾರವನ್ನು ಕರಾವಳಿ ಪ್ರದೇಶಗಳಲ್ಲಿಯೂ ಸಹ ಕೈಗೊಂಡಿಲ್ಲ. ಹಾಗಂತ ಬಿಟ್ಟಿದೆಯೆಂದೂ ಹೇಳುವಂತಿಲ್ಲ. ಈಶ್ವರಪ್ಪ ('ಮುಸ್ಲಿಮರ ಮತ ಬೇಡ'), ಅಮಿತ್ ಷಾ, ಅಣ್ಣಾಮಲೈ ('ಕಾಂಗ್ರೆಸ್ಗೆ ಅಧಿಕಾರ ಸಿಕ್ಕರೆ ಕೋಮುಗಲಭೆ'), ಸಿ.ಟಿ.ರವಿ ಅವರಂತಹ ಕೆಲವು ನಾಯಕರು ಆಗಾಗ ಕೋಮುದ್ವೇಷದ ವಿಷಕಾರುತ್ತಲೇ ಇದ್ದಾರೆ.

'ಬಿಜೆಪಿ ಲಿಂಗಾಯತ ಸಿಎಂ ಹೊಂದಿದೆ, ಕಾಂಗ್ರೆಸ್ ಅದನ್ನು ಘೋಷಿಸಬಹುದೇ?' ಎಂದು ಕಾಂಗ್ರೆಸ್ಗೆ ಸವಾಲು ಹಾಕುವ ಮೂಲಕ 'ಲಿಂಗಾಯತ ನಾಯಕರ ಅವಮಾನ/ಮೂಲೆಗುಂಪು' ಎಂಬ ಕಾಂಗ್ರೆಸ್ ಆರೋಪಗಳನ್ನು ಎದುರಿಸಲು ಬಿಜೆಪಿ ಪ್ರಯತ್ನಿಸಿತು, ಆದರೆ ಅಮಿತ್ ಶಾ ಅವರ ಅಸಮ್ಮತಿಯಿಂದ ತರಾತುರಿಯಲ್ಲಿ ಅದನ್ನು ಬಿಜೆಪಿ ಹಿಂತೆಗೆದುಕೊಂಡಿತು. ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸುವ ಅವರು, 'ಜೆಡಿಎಸ್‌ಗೆ ಮತ ಹಾಕುವುದು ಕಾಂಗ್ರೆಸ್‌ಗೆ ಮತ ಹಾಕಿದಂತೆ ಎಂದು ಹೇಳತೊಡಗಿದ್ದಾರೆ.

ಜೆಡಿ(ಎಸ್) ಮುಖ್ಯವಾಗಿ ಪ್ರಾದೇಶಿಕ ಅಭಿಮಾನವನ್ನು ಮುಂದೆ ಮಾಡುತ್ತದೆ ಮತ್ತು ಪ್ರಾದೇಶಿಕ ಅಸ್ಮಿತೆ/ಸ್ವಾಯತ್ತತೆ, ಕರ್ನಾಟಕದ ಜಲ/ಭೂಮಿಗಳ ಮೇಲಿನ ದಾಳಿಗಳಿಂದ ರಕ್ಷಿಸುವುದು ಅವರಿಂದ ಸಾಧ್ಯವಿಲ್ಲ ಎಂದು ಎಲ್ಲಾ 'ರಾಷ್ಟ್ರೀಯ ಪಕ್ಷ'ಗಳ ಮೇಲೆ ದಾಳಿ ಮಾಡುತ್ತದೆ.

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಅಧಿಕೃತವಾಗಿ ಏನೇ ಹೇಳಿಕೊಂಡರೂ 2023-24ರ ಜಿಡಿಪಿಯ ಬೆಳವಣಿಗೆಯ ದರವು 2022-23ರ ದರಕ್ಕಿಂತಲೂ ಕಡಿಮೆ ಇರಲಿದೆ ಎಂಬ ನಿರೀಕ್ಷೆ ಮಹತ್ವದ ಸಂಗತಿಯಾಗಿದೆ. ನಿರೀಕ್ಷಿತ ಮಂದಗತಿಗೆ ಖಾಸಗಿ ಬಳಕೆ ಮತ್ತು ಖಾಸಗಿ ಹೂಡಿಕೆ ಇವುಗಳು ತಗ್ಗುವ ಮತ್ತು ಜಾಗತಿಕ ಅರ್ಥವ್ಯವಸ್ಥೆಯ ಸ್ಥಗಿತತೆಯಿಂದಾಗಿ ರಫ್ತು ಬೆಳವಣಿಗೆಯು ಕುಂಠಿತಗೊಳ್ಳುವ ಅಂಶಗಳು ಕಾರಣವೆಂದು ಐಎಂಎಫ್ ಕೂಡ ಹೇಳುತ್ತದೆ. ನವ-ಉದಾರವಾದಿ ಆಳ್ವಿಕೆಯಲ್ಲಿ ಸರ್ಕಾರದ ವೆಚ್ಚಗಳ ಮೇಲೆ ಜಿಡಿಪಿಯ ಅನುಪಾತದಲ್ಲಿ ಹೇರಿದ ನಿರ್ಬಂಧಗಳಿದ್ದರೂ ಸಹ, ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹೇರುವ ಮತ್ತು ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯನ್ನು ಹೊಂದುವ ಈ ಎರಡೂ ಕ್ರಮಗಳನ್ನೂ ಸರಕಾರ ಕೈಗೊಳ್ಳಲಿಕ್ಕಿಲ್ಲ ಎಂದು ತಳ್ಳಿಹಾಕಿದರೂ ಸಹ, ತನ್ನ ವೆಚ್ಚಗಳ ದಿಕ್ಕನ್ನು ದುಡಿಯುವ ಜನರ ಪರವಾಗಿ ಬದಲಾಯಿಸುವ ಮೂಲಕವೂ ತನಗೆ ಕೈಕಾಲಾಡಿಸುವಷ್ಟು ಜಾಗವನ್ನು ಸರ್ಕಾರವು ಸೃಷ್ಟಿಸಿಕೊಳ್ಳಬಹುದು. ಆದರೆ, ಮೋದಿ ಸರ್ಕಾರವು ಬಂಟ ಬಂಡವಾಳಶಾಹಿಗಳ ಬಗ್ಗೆ ಕಾಳಜಿ ಹೊಂದಿದೆಯೇ ಹೊರತು ದುಡಿಯುವ ಜನರ ಬಗ್ಗೆ ಅಲ್ಲ.

ಭಾರತದ ಅರ್ಥವ್ಯವಸ್ಥೆಯ ಅವ್ಯವಸ್ಥೆ



ಪ್ರೊ. ಪ್ರಭಾತ್‌ಪಟ್ನಾಯಕ್
ಅನು:ಕೆ.ಎಂ.ನಾಗರಾಜ್

ಇಂದಿನ ದಿನಗಳಲ್ಲಿ ವಿಶ್ವದ ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಅತಿ ಹೆಚ್ಚು ವೇಗವಾಗಿ ಬೆಳೆಯುತ್ತಿರುವ ದೇಶವೆಂದರೆ ಭಾರತದ ಅರ್ಥವ್ಯವಸ್ಥೆಯೇ ಎಂದು ಹೇಳಿದ್ದನ್ನೇ ಹೇಳುತ್ತಲೇ ಇದ್ದಾರೆ ನಮ್ಮ ಸರ್ಕಾರದ ಅಧಿಕಾರಿಗಳು. ಅವರು ಹೇಳದೇ ಬಿಟ್ಟದ್ದು ಏನೆಂದರೆ, 2020-21ರಲ್ಲಿ ದೇಶದ ಮೇಲೆ ಹೇರಿದ ಒಂದು ಕಠೋರ ಲಾಕ್‌ಡೌನ್‌ನಿಂದಾಗಿ ಭಾರತದ ಜಿಡಿಪಿಯು ವಿಶ್ವದ ಯಾವುದೇ ಪ್ರಮುಖ ಅರ್ಥವ್ಯವಸ್ಥೆಗಿಂತಲೂ ಅತಿ ಹೆಚ್ಚಿನ ಕುಸಿತವನ್ನು ಅನುಭವಿಸಿತು ಎಂಬುದನ್ನು. ಈ ಅಂಶವನ್ನು ಅವರು ಅಪ್ಪಿ ತಪ್ಪಿಯೂ ಉಲ್ಲೇಖಿಸುವುದಿಲ್ಲ. ಲಾಕ್‌ಡೌನ್‌ನಿಂದಾಗಿ ಕುಸಿದು ನೆಲ ಕಚ್ಚಿದ ಜಿಡಿಪಿಯು ತಲುಪಿದ ಕೆಳ-ಮಟ್ಟವನ್ನು(ಮೈನಸ್ 23%) ಲೆಕ್ಕಾಚಾರದ ಉದ್ದೇಶಕ್ಕೆ ಮೂಲವಾಗಿ ಪರಿಗಣಿಸುವ ಕಾರಣದಿಂದಾಗಿಯೇ ಉನ್ನತವಾಗಿ ಕಾಣುವ ಇಂದಿನ ಬೆಳವಣಿಗೆಯ ದರವನ್ನು ಬಹಳವಾಗಿ ಉತ್ಪ್ರೇಕ್ಷೆ ಮಾಡಲಾಗುತ್ತಿದೆ.

2021-22ರ ಜಿಡಿಪಿಯನ್ನು ಲಾಕ್‌ಡೌನ್ ಹಿಂದಿನ 2019-20ರ ಜಿಡಿಪಿಗೆ ಹೋಲಿಸಿದರೆ, ಅದು ಕೇವಲ ಶೇ. 1.5ರಷ್ಟು ವೃದ್ಧಿಸಿದೆ. ಭಾರತದ 2022-23ರ ಜಿಡಿಪಿಯು ಅದರ ಹಿಂದಿನ ವರ್ಷಕ್ಕೆ (2021-22) ಹೋಲಿಸಿದರೆ ಶೇ. 6.8ರಷ್ಟು ವೃದ್ಧಿಸುತ್ತದೆ ಎಂದು ಐಎಂಎಫ್ ಮತ್ತು ರಿಸರ್ವ್ ಬ್ಯಾಂಕ್ ಅಂದಾಜು ಮಾಡಿದ್ದವು. ಈ ಬಗ್ಗೆ ಹೇಳುವುದಾದರೆ, 2022-23ರ ಜಿಡಿಪಿಯು 2019-20ರಲ್ಲಿದ್ದುದಕ್ಕಿಂತ ಕೇವಲ ಶೇ. 8.4ರಷ್ಟು ವೃದ್ಧಿಸಿದೆ ಮತ್ತು 2019-20 ಮತ್ತು 2022-23ರ ಮೂರು ವರ್ಷಗಳ ಒಟ್ಟುಗೂಡಿಸಿದ ಜಿಡಿಪಿಯ ವಾರ್ಷಿಕ ಬೆಳವಣಿಗೆಯ ದರವು ಕೇವಲ ಶೇ. 2.7ರಷ್ಟಾಗುತ್ತದೆ! ಮೇಲಾಗಿ, ಕುಸಿತದ ನಂತರ ಉಂಟಾದ ಈ ಅಲ್ಪ ಚೇತರಿಕೆಯನ್ನು ಈಗ ಊರ್ಜಿತಗೊಳಿಸಿಕೊಳ್ಳಲಾಗುತ್ತಿಲ್ಲ . 2023-24ರ ಜಿಡಿಪಿಯ ಬೆಳವಣಿಗೆಯ ದರವು 2022-23ರ ದರಕ್ಕಿಂತಲೂ ಕಡಿಮೆ ಇರಲಿದೆ ಎಂದು ನಿರೀಕ್ಷಿಸಲಾಗಿದೆ.

ಕೇಂದ್ರ ಸರ್ಕಾರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರರೊಬ್ಬರು ಬೆಳವಣಿಗೆಯ ದರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಬಹಳವಾಗಿ ಉತ್ಪ್ರೇಕ್ಷೆ ಮಾಡಲಾಗುತ್ತಿದೆ ಎಂದು ಹೇಳಿದ್ದರು. ಜಿಡಿಪಿಯ ಪರಿಕಲ್ಪನೆಯೂ ದೋಷಮುಕ್ತವೇನಲ್ಲ. ಅದೇನೇ ಇರಲಿ, 2023-24ರ ಜಿಡಿಪಿ ಬೆಳವಣಿಗೆಯ ಅಂದಾಜು ದರವನ್ನು ಬಹುತೇಕ ಸಂಸ್ಥೆಗಳು ಕೆಳದರ್ಜೆಗೆ ಇಳಿಸಿವೆ ಮತ್ತು ಅದು (2023-24ರ ಜಿಡಿಪಿಯ ಬೆಳವಣಿಗೆ) ಹಿಂದಿನ ವರ್ಷಕ್ಕಿಂತಲೂ (2022-23) ಕಡಿಮೆ ಇರುತ್ತದೆ ಎಂದು ಹೇಳಿವೆ. ಉದಾಹರಣೆಗೆ, 2023-24ರಲ್ಲಿ ಭಾರತದ ಜಿಡಿಪಿಯು ಶೇ. 5.9ರಷ್ಟು ಬೆಳೆಯಲಿದೆ ಎಂದು ಐಎಂಎಫ್ ನಿರೀಕ್ಷಿಸುತ್ತದೆ. ಇದು ಐಎಂಎಫ್, 2022-23ರ ವರ್ಷದ ಬೆಳವಣಿಗೆಯ ಬಗ್ಗೆ ಮಾಡಿದ್ದ ಶೇ. 6.8 ನಿರೀಕ್ಷೆಗಿಂತಲೂ ಕೆಳಗಿದೆ ಎಂಬ ಅಂಶವು ಗಮನಾರ್ಹವಾಗಿದೆ. ಹಾಗಾಗಿ, ಜಿಡಿಪಿಯ ನಿಧಾನಗತಿಯ ಈ ನಿರೀಕ್ಷೆಯು ಸಂಗತವಾಗುತ್ತದೆ. ಒಟ್ಟಾರೆಯಾಗಿ ಈ ನಿಧಾನಗತಿಯು ನಿರೀಕ್ಷಿತವೇ. ಲಾಕ್‌ಡೌನ್ ನಂತರದ ಚೇತರಿಕೆಯೇ ಕುಂಠಿತವಾಗಿತ್ತು. ಹಾಗಾಗಿ, ಆ ನಂತರವೂ ಬೆಳವಣಿಗೆಯ ದರವು ಮತ್ತಷ್ಟು ಕುಸಿಯಲಿದೆ ಎಂಬ ನಿರೀಕ್ಷೆಯ ಸಂಗತಿಯು ಮಹತ್ವ ಪಡೆಯುತ್ತದೆ.

ಒಪೆಕ್+ ದೇಶಗಳು ಇತ್ತೀಚೆಗೆ ಘೋಷಣೆ ಮಾಡಿದ ದಿನ ಪ್ರತಿ ಒಂದು ಮಿಲಿಯನ್ ಬ್ಯಾರೆಲ್‌ಗಳಷ್ಟು ತೈಲ ಉತ್ಪಾದನೆಯ ಕಡಿತದ ಹೊಸ ಬೆಳವಣಿಗೆಯಿಂದಾಗಿ ಜಿಡಿಪಿಯ ನಿರೀಕ್ಷಿತ ಬೆಳವಣಿಗೆಯ ದರವು ಇನ್ನೂ ಕೆಳಗಿಳಿಯಲಿದೆ. ತೈಲ ಉತ್ಪಾದನೆಯ ಈ ಕಡಿತವು ಮೇ 1ರಿಂದ ಜಾರಿಗೆ ಬರಲಿದೆ ಮತ್ತು ಇದು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಘೋಷಣೆ ಮಾಡಿದ್ದ ದಿನ ಪ್ರತಿ ಎರಡು ಮಿಲಿಯನ್ ಬ್ಯಾರೆಲ್ ಕಡಿತದ ಜೊತೆಗೆ ಅಧಿಕವಾಗಿ ಸೇರಿಕೊಳ್ಳುತ್ತದೆ. ತೈಲ ಉತ್ಪಾದನೆಯ ಈ ರೀತಿಯ ಕಡಿತವು ಭಾರತದ ಬೆಳವಣಿಗೆಯ ದರದ ಮೇಲೆ ಕನಿಷ್ಠ ಎರಡು ವಿಭಿನ್ನ ಪರಿಣಾಮಗಳನ್ನು ಬೀರುತ್ತದೆ: ಒಂದು, ಇದು ಅಮೆರಿಕದಲ್ಲಿ ಹಣದುಬ್ಬರದ ನಿಯಂತ್ರಣವನ್ನು ಹೆಚ್ಚು ಕಷ್ಟಕರವಾಗಿಸುತ್ತದೆ. ಅಂದರೆ, ಬಡ್ಡಿ ದರಗಳನ್ನು ಅಮೆರಿಕಾ ಮತ್ತಷ್ಟು ಏರಿಸಬೇಕಾಗುತ್ತದೆ. ಈ ಏರಿಕೆಯ ಪರಿಣಾಮವಾಗಿ ಡಾಲರ್‌ಗೆ ಹೋಲಿಸಿದರೆ ರೂಪಾಯಿಯ ಮೌಲ್ಯವು ಕುಸಿಯುತ್ತದೆ. ರೂಪಾಯಿಯ ಮೌಲ್ಯದ ಕುಸಿತದ ಪರಿಣಾಮವಾಗಿ ಭಾರತದಲ್ಲಿ ಹಣದುಬ್ಬರ ಏರಿಕೆಯಾಗುತ್ತದೆ. ಅಮೆರಿಕದಲ್ಲಿ ಏರಿಕೆಯಾದ ಬಡ್ಡಿದರಗಳು ಹೂಡಿಕೆಯನ್ನು ಆಕರ್ಷಿಸುವ ಕಾರಣದಿಂದ ಹಣಕಾಸು ಬಂಡವಾಳವು ಭಾರತದಿಂದ ಕಂಬಿ ಕೀಳುತ್ತದೆ. ಅಂದರೆ, ಅಪಾರ ಪ್ರಮಾಣದ ಡಾಲರ್‌ಗಳು ಭಾರತದಿಂದ ಹೊರಹರಿಯುತ್ತವೆ. ಡಾಲರ್‌ಗಳ ಹೊರಹರಿವಿನಿಂದಾಗಿ ಉಂಟಾಗುವ ರೂಪಾಯಿಯ ಅಪಮೌಲ್ಯವನ್ನು ತಡೆಗಟ್ಟಲು, ಭಾರತದಲ್ಲೂ ಬಡ್ಡಿ ದರಗಳನ್ನು ಏರಿಸಬೇಕಾಗುತ್ತದೆ. ಬಡ್ಡಿ ದರಗಳ ಈ ಏರಿಕೆಯು ಬೆಳವಣಿಗೆಯ ದರವನ್ನು ತಗ್ಗಿಸುತ್ತದೆ. ಎರಡನೆಯದಾಗಿ, ತೈಲ ಉತ್ಪಾದನೆಯ ಕಡಿತವನ್ನು ತಪ್ಪಿಸಲು ಅಮೆರಿಕಾ ವಹಿಸುತ್ತಿರುವ ಮಧ್ಯಸ್ಥಿಕೆಯ ಪರಿಣಾಮವನ್ನು ಬದಿಗಿಟ್ಟರೂ ಸಹ, ತೈಲ ಬೆಲೆಯ ಹೆಚ್ಚಳವು ನೇರವಾಗಿ ಬೆಳವಣಿಗೆ-ತಗ್ಗಿಸುವ ಪರಿಣಾಮವನ್ನು ಬೀರುತ್ತದೆ: ರಫ್ತುಗಳ ನಿವ್ವಳ ಇಳಿಕೆಯಿಂದಾಗಿ (ತೈಲ ಬೆಲೆ ಏರಿಕೆಯಿಂದಾಗಿ ಆಮದು ವೆಚ್ಚಗಳ ಹೆಚ್ಚಳದಿಂದ ಈ ಸಮಸ್ಯೆ ಉದ್ಭವಿಸುತ್ತದೆ) ದೇಶದಲ್ಲಿ ಉತ್ಪಾದನೆಯ ಮೇಲೆ ಮಾಡುವ ವೆಚ್ಚಗಳು ತಗ್ಗುತ್ತವೆ.

ತೈಲ ಬೆಲೆಗಳ ಇತ್ತೀಚಿನ ಏರಿಕೆಯ ವಿದ್ಯಮಾನದ ಹೊರತಾಗಿಯೂ, ಬೆಳವಣಿಗೆಯ ದರವು ನಿಧಾನಗೊಳ್ಳಲಿದೆ ಎಂಬುದನ್ನು ನಿರೀಕ್ಷಿಸಲಾಗಿತ್ತು. 2022-23ರ ನಾಲ್ಕನೇ ತ್ರೈಮಾಸಿಕ ಜಿಡಿಪಿಯ ಬೆಳವಣಿಗೆಯ ದರವು ಮೂರನೇ ತ್ರೈಮಾಸಿಕಕ್ಕಿಂತಲೂ ಕಡಿಮೆಯಾಗಲಿದೆ (ಅಂದರೆ, ಮೂರನೇ ತ್ರೈಮಾಸಿಕದಲ್ಲಿ ಶೇ. 4.4ರಷ್ಟಿದ್ದ ಜಿಡಿಪಿಯ ಬೆಳವಣಿಗೆಯು ನಾಲ್ಕನೇ ತ್ರೈಮಾಸಿಕದಲ್ಲಿ ಶೇ. 4.2ಕ್ಕೆ ಇಳಿಯಲಿದೆ) ಎಂಬ ಅಂದಾಜನ್ನು ರಿಸರ್ವ್ ಬ್ಯಾಂಕ್ ಮಾಡಿತ್ತು. ಪ್ರಶ್ನೆಯೆಂದರೆ: ಕೊರೊನಾ ಸಾಂಕ್ರಾಮಿಕದ ಸನ್ನಿವೇಶದಲ್ಲಿ ನೆಲಕ್ಕೆ ಕುಸಿದ ನಂತರ ಅಲ್ಪ ಸ್ವಲ್ಪ ಚೇತರಿಕೆ ಹೊಂದುತ್ತಿದ್ದ ಉತ್ಪಾದನೆಯು ಕ್ರಮೇಣ ಕಡಿಮೆಯಾಗುತ್ತಿದೆ, ಏಕೆ?

ಈ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ, ಸಮಸ್ಯೆಯ ಮೂಲವು ನವ-ಉದಾರವಾದಿ ಅರ್ಥವ್ಯವಸ್ಥೆಯ ಸ್ವರೂಪದಲ್ಲೇ ಅಂತರ್ಗತವಾಗಿದೆ. ಒಂದು ನವ-ಉದಾರವಾದಿ ಅರ್ಥವ್ಯವಸ್ಥೆಯಲ್ಲಿ ಆದಾಯದ ಅಸಮಾನತೆಯ ಹೆಚ್ಚಳದಿಂದಾಗಿ ಖಾಸಗಿ ಬಳಕೆಯು ಉತ್ಪಾದನೆಯ ಅನುಪಾತದಲ್ಲಿ ಕಡಿಮೆಯಾಗುತ್ತಲೇ ಇರುತ್ತದೆ. ಇದರ ಅರ್ಥವೆಂದರೆ, ವರಮಾನದ ಆಚೆ ಸ್ವತಂತ್ರವಾಗಿ ದೊರಕಬಹುದಾದುದನ್ನು ಹೊರತುಪಡಿಸಿದರೆ, ಖಾಸಗಿ ಬಳಕೆಯೇ ವರಮಾನಗಳ ಬೆಳವಣಿಗೆಗೆ ಉತ್ತೇಜನ ನೀಡುವುದು ಸಾಧ್ಯವಿಲ್ಲ. ಮತ್ತೊಂದೆಡೆಯಲ್ಲಿ ಖಾಸಗಿ ಹೂಡಿಕೆಯು ಮಾರುಕಟ್ಟೆಯ ಬೆಳವಣಿಗೆಯ ಗಾತ್ರದ ಬಗ್ಗೆ ಹೂಡಿಕೆದಾರರು ಹೊಂದಿದ ನಿರೀಕ್ಷೆಯನ್ನು ಅವಲಂಬಿಸಿರುತ್ತದೆ. ಮತ್ತು, ಮಾರುಕಟ್ಟೆಯು ವೃದ್ಧಿಸಲು ಅರ್ಥವ್ಯವಸ್ಥೆಯ ವಾಸ್ತವಿಕ ಬೆಳವಣಿಗೆಯ ದರವು ಒಂದು ಸೂಚಕವಾಗುತ್ತದೆ. ಇದರ ಅರ್ಥವೆಂದರೆ, ಖಾಸಗಿ ಹೂಡಿಕೆಯೇ ಸ್ವತಂತ್ರವಾಗಿ ಅರ್ಥವ್ಯವಸ್ಥೆಯ ಬೆಳವಣಿಗೆಯನ್ನು ಉತ್ತೇಜಿಸುವುದು ಸಾಧ್ಯವಿಲ್ಲ ಎಂಬುದು. ಜಿಡಿಪಿಯ ಅನುಪಾತದಲ್ಲಿ ವಿತ್ತೀಯ ಕೊರತೆಯ ಮಿತಿಯನ್ನು ನಿಗದಿಪಡಿಸಿರುವ ಕಾರಣದಿಂದಾಗಿ ಸರ್ಕಾರವು ತನ್ನ ಆದಾಯದ ಅನುಪಾತದಲ್ಲಿ ಕೈಗೊಳ್ಳಬಹುದಾದ ವೆಚ್ಚಗಳೂ ಸಹ ಈ ಮಿತಿಗೆ ಒಳಪಡುತ್ತವೆ. ಆದ್ದರಿಂದ, ಸರ್ಕಾರವು ಶ್ರೀಮಂತರ ಮೇಲೆ ತೆರಿಗೆ ಹೇರುವ ಮೂಲಕ ತೆರಿಗೆ-ಜಿಡಿಪಿಯ ಅನುಪಾತವನ್ನು ಹೆಚ್ಚಿಸಿಕೊಳ್ಳದ ಹೊರತು, ಬೆಳವಣಿಗೆಯನ್ನು ಸ್ವತಂತ್ರವಾಗಿ ಉತ್ತೇಜಿಸುವುದು ಸಾಧ್ಯವಿಲ್ಲ. ಆದರೆ, ಶ್ರೀಮಂತರ ಮೇಲೆ ತೆರಿಗೆ ಹೇರುವುದನ್ನು ಜಾಗತಿಕ ಹಣಕಾಸು ಬಂಡವಾಳವು ಇಷ್ಟಪಡುವುದಿಲ್ಲ. ಹಾಗಾಗಿ, ನವ-ಉದಾರವಾದಿ ಆಳ್ವಿಕೆಯಲ್ಲಿ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಉತ್ತೇಜನ ನೀಡಬಹುದಾದ ಎರಡೇ ಎರಡು ಮೂಲಗಳೆಂದರೆ: ನಿವ್ವಳ ರಫ್ತುಗಳು ಮತ್ತು ಆದಾಯದಿಂದ ಸ್ವತಂತ್ರವಾಗಿ ಬಳಕೆಯ ಹೆಚ್ಚಳಕ್ಕೆ ಕಾರಣವಾಗುವ ಆಸ್ತಿ-ಬೆಲೆ ಗುಳ್ಳೆಗಳು.

ಆರ್ಥಿಕ ಸ್ಥಗಿತತೆ ಮತ್ತು ಆರ್ಥಿಕ ಹಿಂಜರಿತ (ಹಣದುಬ್ಬರಕ್ಕೆ ಪರಿಹಾರವಾಗಿ ಎಲ್ಲೆಡೆಯೂ ಆರ್ಥಿಕ ಹಿಂಜರಿತವನ್ನು ರೂಪಿಸಲಾಗಿದೆ) ಇವುಗಳು ಆವಿರ್ಭವಿಸಿರುವ ವಿಶ್ವದಲ್ಲಿ, ರಫ್ತುಗಳು ಹೆಚ್ಚುವ ಬದಲು ಇಳಿಯುತ್ತವೆ. ಬಳಕೆಯ ಅಧಿಕ ಬೇಡಿಕೆಯನ್ನು ಸೃಷ್ಟಿಸುವಲ್ಲಿ ಆಸ್ತಿ ಬೆಲೆ ಗುಳ್ಳೆಗಳು ಹೆಚ್ಚು ಪರಿಣಾಮಕಾರಿಯಾಗುವುದಿಲ್ಲ. ಈ ಗುಳ್ಳೆಗಳು ಹೆಚ್ಚೆಂದರೆ ವ್ಯಕ್ತಿಗಳ ಒಂದು ತೆಳು ಸ್ತರವನ್ನು ಸಿರಿವಂತರನ್ನಾಗಿಸುತ್ತವೆ ಮತ್ತು ಈ ರೀತಿಯಲ್ಲಿ ಶ್ರೀಮಂತಿಕೆ ಹೊಂದಿದವರ ಬಳಕೆಯ ಬೇಡಿಕೆಯು ಹೆಚ್ಚಾಗಿ ವಿದೇಶಗಳಿಗೆ ಸೋರಿಕೆಯಾಗುತ್ತದೆ (ಅಂದರೆ, ಅವರ ಬೇಡಿಕೆ ಆಮದು ವಸ್ತುಗಳ ಮೇಲೆ ಮಾತ್ರ). ಆದ್ದರಿಂದ, ಭಾರತದ ಆರ್ಥಿಕ ಬೆಳವಣಿಗೆಯ ದರ ವೃದ್ಧಿಸುತ್ತದೆ ಎಂದು ನಿರೀಕ್ಷಿಸಲಾಗದು. ತದ್ವಿರುದ್ಧವಾಗಿ, ಆದಾಯಗಳ ಹೆಚ್ಚುತ್ತಿರುವ ಅಸಮಾನತೆಯಿಂದಾಗಿ ಹೂಡಿಕೆಯ ಬೆಳವಣಿಗೆಯ ವೇಗ ತಗ್ಗುತ್ತದೆ ಮತ್ತು ಬಳಕೆಯ ಬೇಡಿಕೆಯ ದರ ಜಡಗೊಳ್ಳುತ್ತದೆ. ಹಾಗಾಗಿ, ಬೆಳವಣಿಗೆಯ ದರ ಕುಸಿಯುತ್ತದೆ. ಭಾರತದ ಆರ್ಥಿಕ ಬೆಳವಣಿಗೆಯ ನಿರೀಕ್ಷಿತ ಮಂದಗತಿಗೆ ಖಾಸಗಿ ಬಳಕೆ ಮತ್ತು ಖಾಸಗಿ ಹೂಡಿಕೆ ಇವುಗಳು ತಗ್ಗುವ ಮತ್ತು ಜಾಗತಿಕ ಅರ್ಥವ್ಯವಸ್ಥೆಯ ಸ್ಥಗಿತತೆಯಿಂದಾಗಿ ರಫ್ತು ಬೆಳವಣಿಗೆಯು ಕುಂಠಿತಗೊಳ್ಳುವ ಅಂಶಗಳು ಕಾರಣವೆಂದು ಐಎಂಎಫ್ ಕೂಡ ಹೇಳುತ್ತದೆ. ಈ ಅಂಶಗಳಿಂದ ಉಂಟಾಗುವ ಮಂದಗತಿಯನ್ನು ಸರ್ಕಾರದ ಕಳೆಗುಂದಿದ ವೆಚ್ಚಗಳ ಹೆಚ್ಚಳದ ಮೂಲಕ ಸರಿದೂಗಿಸುವುದು ಸಾಧ್ಯವಿಲ್ಲ.

ಇಷ್ಟೆಲ್ಲಾ ಮಿತಿಗಳಿದ್ದರೂ ಸಹ, ಅರ್ಥವ್ಯವಸ್ಥೆಯನ್ನು ಉತ್ತೇಜಿಸಲು ಸರ್ಕಾರವು ಅನುಸರಿಸಬಹುದಾದ ಮತ್ತೊಂದು ಮಾರ್ಗವಿದೆ. ಆ ಮಾರ್ಗವೆಂದರೆ, ಸರ್ಕಾರದ ವೆಚ್ಚಗಳ ಸಂಯೋಜನೆಯನ್ನು ಬದಲಿಸುವುದು. ಈ ಅಂಶದ ಸ್ವಾರಸ್ಯವನ್ನು ಒಂದು ಉದಾಹರಣೆಯ ಮೂಲಕ ಗ್ರಹಿಸಬಹುದು: ಒಂದೇ ಮೊತ್ತವನ್ನು ಸರ್ಕಾರವು ಎರಡು ಭಿನ್ನ ವಿಧಾನಗಳ ಮೂಲಕ ಖರ್ಚು ಮಾಡಬಹುದು. 100 ರೂ.ಗಳನ್ನು ದುಡಿಯುವ ಜನರಿಗೆ ವರ್ಗಾವಣೆ ಮಾಡುವ ಮೂಲಕ ಖರ್ಚು ಮಾಡಬಹುದು. ಅಥವಾ, ಪರ್ಯಾಯವಾಗಿ, ಅದೇ 100 ರೂ.ಗಳನ್ನು 2023-24ರ ಕೇಂದ್ರ ಬಜೆಟ್‌ನಲ್ಲಿ ಉದ್ದೇಶಿಸಿರುವ ರೀತಿಯಲ್ಲಿ ಆಧುನಿಕ ಮೂಲಸೌಕರ್ಯ ಯೋಜನೆಗಳಿಗಾಗಿ ಖರ್ಚು ಮಾಡಬಹುದು. ನೂರು ರೂಪಾಯಿಗಳನ್ನು ದುಡಿಯುವ ಜನರಿಗೆ ಒದಗಿಸಿದರೆ, ಹೆಚ್ಚು ಕಡಿಮೆ ಎಲ್ಲ ಹಣವನ್ನೂ ಅವರು ಖರ್ಚು ಮಾಡುತ್ತಾರೆ. ಈ ಹಣವನ್ನು ಅವರು ಮುಖ್ಯವಾಗಿ ಸಣ್ಣ-ಕೈಗಾರಿಕಾ ವಲಯದಲ್ಲಿ ತಯಾರಿಸಿದ ಸರಕುಗಳು ಮತ್ತು ಕೆಲವು ಸೇವೆಗಳ ಮೇಲೆ ಖರ್ಚು ಮಾಡುತ್ತಾರೆ. ಅಲ್ಲಿ ಲಾಭದ-ಅಂತರ (ಮತ್ತು ಅದರಿಂದ ಸೃಷ್ಟಿಯಾಗುವ ಆದಾಯದ ಪ್ರತಿ ಯೂನಿಟ್ ಮೇಲಿನ ಉಳಿತಾಯ) ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಮತ್ತೊಂದೆಡೆ, ಅದೇ ಮೊತ್ತವನ್ನು ಆಧುನಿಕ ಮೂಲಸೌಕರ್ಯ ಯೋಜನೆಗಳಿಗೆ ಖರ್ಚು ಮಾಡಿದರೆ, ಪ್ರತಿ ಹಂತದಲ್ಲೂ, ಆರಂಭದಲ್ಲಿ ಮತ್ತು ನಂತರದಲ್ಲಿ ಉದ್ಭವಿಸುವ ಪ್ರತಿ ಸುತ್ತಿನಲ್ಲಿ, ಖರ್ಚು ಮಾಡುವ ಮೊತ್ತವು ಸಣ್ಣದೇ ಇರುತ್ತದೆ. ಹಾಗಾಗಿ ದೊಡ್ಡ ಮೊತ್ತದ ಹಣ ಉಳಿತಾಯವಾಗುತ್ತದೆ ಇಲ್ಲವೇ ಆಮದುಗಳ ಮೂಲಕ ಸೋರಿಕೆಯಾಗುತ್ತದೆ. ಇದರ ಅರ್ಥವೆಂದರೆ, ಆಧುನಿಕ ಮೂಲಸೌಕರ್ಯದ ಮೇಲೆ ಮಾಡುವ ಖರ್ಚುಗಳು ಹೊಂದಿರುವ "ಗುಣಕ" ಪರಿಣಾಮಗಳು ದುಡಿಯುವ ಜನರಿಗೆ ವರ್ಗಾವಣೆ ಮಾಡಿದಾಗ ಉಂಟಾಗುವ "ಗುಣಕ" ಪರಿಣಾಮಗಳಿಗಿಂತಲೂ ಕಡಿಮೆ ಇರುತ್ತವೆ.

ಹಾಗಾಗಿ, ಸರ್ಕಾರದ ಒಟ್ಟು ವೆಚ್ಚಗಳನ್ನು ಹೆಚ್ಚಿಸುವುದು ಸಾಧ್ಯವಾಗದಿದ್ದರೂ ಸಹ, ನಿಖರವಾಗಿ ಅದನ್ನು ಯಾವ ಉದ್ದೇಶಕ್ಕಾಗಿ ಖರ್ಚು ಮಾಡಲಾಗುತ್ತದೆ ಎಂಬುದು ಒಟ್ಟು ಬೇಡಿಕೆಯ ಮೇಲೆ ಮತ್ತು ಆ ಮೂಲಕ ಆರ್ಥಿಕ ಬೆಳವಣಿಗೆಯ ದರದ ಮೇಲೆ ಒಂದು ವ್ಯತ್ಯಾಸವನ್ನು ಉಂಟುಮಾಡಬಲ್ಲದು. ದುಡಿಯುವ ಜನರಿಗೆ ಮಾಡುವ ವರ್ಗಾವಣೆಯ ರೂಪದ ಅಥವಾ ದುಡಿಯುವ ಜನರ ಯೋಗಕ್ಷೇಮವನ್ನು ವರ್ಧಿಸುವ ಸಾರ್ವಜನಿಕ ವೆಚ್ಚವು ಇತರ ಯಾವುದೇ ಉದ್ದೇಶಕ್ಕಾಗಿ ಮಾಡಿದ ಸಾರ್ವಜನಿಕ ವೆಚ್ಚಕ್ಕಿಂತಲೂ

ಪುಟ 15 ಕ್ಕೆ

ಡಾರ್ವಿನ್, ಪೈಥಾಗೊರಸ್‌ಗೂ

ಪುಟ 12 ರಿಂದ

ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಗಮನಾರ್ಹ ಸಂಗತಿಯೆಂದರೆ ಹಿಂದುತ್ವವಾದಿಗಳಿಗೆ ಆನುವಂಶಿಕತೆಯ ಬಗ್ಗೆ ಆಕ್ಷೇಪವೇನೂ ಇಲ್ಲ. ಏಕೆಂದರೆ ಅದರಿಂದ ಕೆಲವು ಭಾರತೀಯರ 'ಜನಾಂಗೀಯ ಶುದ್ಧತೆ' ಮತ್ತು ಕೆಲವು ಜಾತಿಗಳ ಮೇಲರಿಮೆಯನ್ನು, ಈಗಂತೂ ದೇಸೀ ಹಸುಗಳ ತಳಿಗಳ ಮೇಲ್ಮೆಯನ್ನು ಕೂಡ ತೋರಿಸಲು ಸಾಧ್ಯವಾಗಿದೆ ಎಂದು ಅವರು ನಂಬಿದ್ದಾರೆ(ರಘು, ಪೀಪಲ್ಸ್ ಡೆಮಾಕ್ರಸಿ, ಎಪ್ರಿಲ್23).

ವಿಕಾಸವಾದದ ಅಧ್ಯಾಯವನ್ನು ತೆಗೆದು ಹಾಕಿರುವುದು ಹಲವು ರೀತಿಗಳಲ್ಲಿ ಒಂದು ದೊಡ್ಡ ನಷ್ಟ ಎನ್ನುತ್ತಾರೆ ಪರಿಣಿತರು(ರಘು, ಪೀಪಲ್ಸ್ ಡೆಮಾಕ್ರಸಿ, ಎಪ್ರಿಲ್ 23). ಏಕೆಂದರೆ ಇದು ವೈಜ್ಞಾನಿಕ ಪರಿಕಲ್ಪನೆಯ ಒಂದು ಗಟ್ಟಿ ತಳಪಾಯ, ಹಲವು ಪರಿಕಲ್ಪನೆಗಳನ್ನು ಒಂದು ವಿಶಾಲ ದೃಷ್ಟಿಯಲ್ಲಿ ಅರ್ಥೈಸಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ. ಇದು "ಅರಿವಿನ ಒಂದು ದಾರಿ"ಯಾಗಿ ನಂಬಿಕೆ ಮತ್ತು ವಿಜ್ಞಾನದ ನಡುವಿನ ವ್ಯತ್ಯಾಸವನ್ನು ತಿಳಿಯುವ ಒಂದು ಮಹತ್ವದ ವಿಷಯ ಕೂಡ ಎನ್ನುತ್ತಾರೆ ಅವರು. ಬಹುಶಃ ಅದಕ್ಕಾಗಿಯೇ ಕೈಬಿಟ್ಟಿರಬಹುದು!

ಸತ್ಪಾಲ್ ಸಿಂಗ್ ಹೇಳಿಕೆ ಬಂದಾಗ ಭಾರತದ ಮೂರೂ ಪ್ರಮುಖ ವಿಜ್ಞಾನ ಅಕಾಡೆಮಿಗಳು ಅದನ್ನು ಖಂಡಿಸಿ ಜಂಟಿ ಹೇಳಿಕೆ ನೀಡಿದ್ದವು. ವಿಕಾಸವಾದದ ಸಿದ್ಧಾಂತ ಹಲವಾರು ಪ್ರಯೋಗಗಳು ಮತ್ತು ವೀಕ್ಷಣೆಗಳಿಂದ ಮತ್ತೆ–ಮತ್ತೆ ಪ್ರಮಾಣಿತವಾದ ಸಿದ್ಧಾಂತ, ಇದರ ಬೋಧನೆಯನ್ನು ಶಾಲಾ ಮತ್ತು ಕಾಲೇಜು ಪಠ್ಯದಿಂದ ತೆಗೆಯುವುದು ಒಂದು ಪ್ರತಿಗಾಮಿ ಕ್ರಮವಾಗುತ್ತದೆ ಎಂದು ಎಚ್ಚರಿಸಿದ್ದವು. ಈಗ ಭಾರತದ ಪ್ರಮುಖ ವಿಜ್ಞಾನಿಗಳ ಆ ಎಚ್ಚರಿಕೆಯನ್ನು ಉಪೇಕ್ಷಿಸಲಾಗಿದೆ.

ಇನ್ನು, ಪೈಥಾಗೊರಸ್ ಪ್ರಮೇಯವನ್ನು ಕೈಬಿಡಲು ಕಾರಣ, ಇದು ನಮ್ಮ ಪೂರ್ವಜರಿಗೆ ಮೊದಲೇ ತಿಳಿದಿತ್ತು ಎಂಬ ಹಿಂದುತ್ವವಾದಿಗಳ ಪ್ರತಿಪಾದನೆಯೇ ಎನ್ನಲಾಗುತ್ತದೆ.

ಇದೇ ರೀತಿಯಲ್ಲಿ ಕೈಗಾರಿಕಾ ಕ್ರಾಂತಿಯ ಅಧ್ಯಾಯವನ್ನು ಕೈಬಿಡಲು ಕೂಡ ಆಧುನಿಕ ವಿಜ್ಞಾನಕ್ಕೆ ತಿಳಿದಿರುವ ಎಲ್ಲವೂ ನಮ್ಮ ಪ್ರಾಚೀನ ಪೂರ್ವಜರಿಗೆ ತಿಳಿದಿತ್ತು ಎಂಬ ಈ ಪ್ರತಿಪಾದನೆಯೇ ಕಾರಣವಿರಬಹುದೇನೋ ಎಂದು ಇನ್ನೊಬ್ಬ ಪರಿಣಿತರು ಹೇಳಿದ್ದಾರೆ. ಇಂಗ್ಲೆಂಡಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ನಂತರವೇ ಜಗತ್ತಿನಲ್ಲಿ ಆಧುನಿಕತೆಯತ್ತ ಎಲ್ಲ ಬದಲಾವಣೆಗಳು ಸಂಭವಿಸಲು ಪ್ರಾರಂಭಿಸಿದವು ಎನ್ನುವುದಾದರೆ, ರಾಮಾಯಣದ ಪುಷ್ಪಕ ವಿಮಾನಗಳು, ಗಣೇಶನ ಪ್ಲಾಸ್ಟಿಕ್ ಸರ್ಜರಿ, ಮಹಾಭಾರತದ ಸಂಜಯನ ಇಂಟರ್ನೆಟ್ ಬಗ್ಗೆ ಹೇಳಿಕೊಳ್ಳಲು ಹೇಗೆ ಸಾಧ್ಯ ಎಂದು ಅವರು ಪ್ರಶ್ನಿಸಿದ್ದಾರೆ.

'ದಶಾವತಾರ' ಸಿದ್ಧಾಂತ ವಿಕಾಸವಾದಕ್ಕೆ ಪರ್ಯಾಯ ಎಂದು ಹೇಳುವ ಪ್ರಬಂಧ ಮಂಡಿಸಲ್ಪಟ್ಟ 2019ರ ಭಾರತೀಯ ವಿಜ್ಞಾನ ಸಮ್ಮೇಳನದಲ್ಲಿ ನ್ಯೂಟನ್ ಮತ್ತು ಐನ್‌ಸ್ಟೈನ್ ಸಿದ್ಧಾಂತಗಳು ಕೂಡ ಹುಸಿ ಎನ್ನುವ ಪ್ರಬಂಧಗಳನ್ನೂ ಮಂಡಿಸಲಾಯಿತಂತೆ. ಅಂದರೆ ಈಗ ಡಾರ್ವಿನ್ ಇಲ್ಲದ ಜೀವಶಾಸ್ತ್ರದ ಬೋಧನೆಯಂತೆ, ಮುಂದೆ ಎನ್.ಸಿ.ಇ.ಆರ್.ಟಿ. ಕೃಪೆಯಿಂದ ನ್ಯೂಟನ್ ಮತ್ತು ಐನ್‌ಸ್ಟೈನ್ ಇಲ್ಲದ ಭೌತಶಾಸ್ತ್ರದ ಬೋಧನೆ ಬರಬಹುದೇ ಎಂದು ಶಿಕ್ಷಣವೇತ್ತರು ಕೇಳುವಂತಾಗಿದೆ(ದಿನೇಶ್ ಸಿ ಶರ್ಮ, ದಿ ವೈರ್, ಎಪ್ರಿಲ್23).

ವೈಜ್ಞಾನಿಕ ಪರಿಕಲ್ಪನೆಗಳ ಜ್ಞಾನದಿಂದ ವಿದ್ಯಾರ್ಥಿಗಳನ್ನು ದೂರವಿಡುವುದು ಶಿಕ್ಷಣ ಎಂಬುದರ ಅಣಕವಾಗುತ್ತದಷ್ಟೇ ಎಂದು ವಿಜ್ಞಾನಿಗಳು ಮತ್ತು ಶಿಕ್ಷಣವೇತ್ತರ ಒಂದು ಸ್ವತಂತ್ರ ಸಮೂಹ 'ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿ' ಎನ್.ಸಿ.ಇ.ಆರ್.ಟಿ.ಯ ನಿಲುವನ್ನು ವಿಮರ್ಶಿಸುವ ಬಹಿರಂಗ ಪತ್ರದಲ್ಲಿ ಹೇಳಿದೆ.

ಪ್ರತಿಭಟನಾ ನಿರತ ಮಹಿಳಾ ಕುಸ್ತಿಪಟುಗಳಿಗೆ ಬೆಂಬಲವಾಗಿ ಎಪ್ರಿಲ್ 27ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ

ಡಬ್ಲ್ಯುಎಫ್ಐ ಅಧ್ಯಕ್ಷರ ಲೈಂಗಿಕ ಕಿರುಕುಳದ ವಿರುದ್ಧ ಮಹಿಳಾ ಕುಸ್ತಿಪಟುಗಳ ಹೋರಾಟಕ್ಕೆ ವಿದ್ಯಾರ್ಥಿ–ಯುವಜನ, ರೈತರು, ಕಾರ್ಮಿಕರು ಮತ್ತು ಕೃಷಿಕೂಲಿಕಾರರ ಸಂಘಟನೆಗಳ ಬೆಂಬಲ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆಲ್ಲುವ ಮೂಲಕ ದೇಶಕ್ಕೆ ಗೌರವ, ಪ್ರತಿಷ್ಠೆ ತಂದುಕೊಡುತ್ತಿರುವ ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟುಗಳು, ಅದರಲ್ಲೂ ಮಹಿಳಾ ಕುಸ್ತಿಪಟುಗಳು ಎಪ್ರಿಲ್ 24ರಿಂದ ಎರಡನೇ ಬಾರಿಗೆ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಧರಣಿ ಕುಳಿತ್ತಿದ್ದಾರೆ. ಭಾರತದ ಕುಸ್ತಿ ಒಕ್ಕೂಟ(ಡಬ್ಲ್ಯುಎಫ್ಐ)ದ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳದ ದೂರಿನ ಮೇಲೆ ಮೂರು ತಿಂಗಳ ನಂತರವೂ ಯಾವುದೇ ಕ್ರಮ ಕೈಗೊಳ್ಳದ ಕಾರಣ ತಾವು ಈ ಪ್ರತಿಭಟನೆಗೆ ಇಳಿದಿರುವುದಾಗಿ ಅವರು ಹೇಳುತ್ತಿದ್ದಾರೆ. ಬ್ರಿಜ್ ಭೂಷಣ್ ಶರಣ್ ಸಿಂಗ್ ಬಿಜೆಪಿ ಸಂಸದರೂ ಆಗಿದ್ದಾರೆ.



ಎಪ್ರಿಲ್ 26ರಂದು ರೈತರು, ಕಾರ್ಮಿಕರು, ಕೃಷಿ ಕಾರ್ಮಿಕರು, ಯುವಕರು ಮತ್ತು ವಿದ್ಯಾರ್ಥಿಗಳ ಜಂಟಿ ನಿಯೋಗ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳನ್ನು ಭೇಟಿ ಮಾಡಿತು.

ದೇಶಕ್ಕೆ ಗೌರವ, ಪ್ರತಿಷ್ಠೆ ತಂದುಕೊಡುತ್ತಿರುವ ನಮ್ಮ ಅಗ್ರಮಾನ್ಯ ಕ್ರೀಡಾಪಟುಗಳು ನ್ಯಾಯಕ್ಕಾಗಿ ಆಗ್ರಹಿಸಿ ಜಂತರ್‌ಮಂತರ್‌ನಲ್ಲಿ ಧರಣಿ ಕುಳಿತಿರುವುದು ದುರದೃಷ್ಟಕರ ಎಂದಿರುವ ನಿಯೋಗ, ದೂರು ನೀಡಿದ ನಂತರ, ಮೂರು ತಿಂಗಳ ಹಿಂದೆ ಇದೇ ಜಂತರ್ ಮಂತರ್‌ನಲ್ಲಿ ಧರಣಿ ನಡೆಸಿದ ನಂತರವೂ ಪೊಲೀಸರು ಇನ್ನೂ ಎಫ್ಐಆರ್ ದಾಖಲಿಸಿಲ್ಲ, ನ್ಯಾಯಯುತ ತನಿಖೆಯನ್ನು ಮಾತ್ರ ಕೇಳುತ್ತಿದ್ದೇವೆ ಎನ್ನುವ ಪ್ರತಿಭಟನಾ ನಿರತ ಕುಸ್ತಿಪಟುಗಳು ಮಾಡಿರುವ ಆರೋಪಗಳನ್ನು ತನಿಖೆ ಮಾಡಿದ ಮೇಲುಸ್ತುವಾರಿ ಸಮಿತಿಯ ವರದಿಯನ್ನು ಸಾರ್ವಜನಿಕಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಡಬ್ಲ್ಯುಎಫ್ಐ ಮುಖ್ಯಸ್ಥರು ಮತ್ತು ಡಬ್ಲ್ಯುಎಫ್ಐನಿಂದ ನೇಮಕಗೊಂಡ ಇತರ ಕೆಲವು ತರಬೇತುದಾರರಿಂದ ಮಹಿಳಾ ಕುಸ್ತಿಪಟುಗಳು ಲೈಂಗಿಕ ಶೋಷಣೆಗೆ ಒಳಗಾಗಿದ್ದಾರೆ ಮತ್ತು ಅವರೊಂದಿಗೆ ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ ಎಂಬ ಪ್ರಮುಖ ಮಹಿಳಾ ಕುಸ್ತಿಪಟುಗಳ ದೂರು ಅತ್ಯಂತ ಆತಂಕಕಾರಿ. ಒಂದೆಡೆ ಕೇಂದ್ರ ಸರ್ಕಾರವು ತನ್ನ "ಬೇಟಿ ಬಚಾವೋ ಬೇಟಿ ಪಢಾವೋ" ಅಭಿಯಾನದ ಬಗ್ಗೆ ಅಬ್ಬರದ ಪ್ರಚಾರ ಮಾಡುತ್ತಿದ್ದರೆ, ಇನ್ನೊಂದೆಡೆಯಲ್ಲಿ ಈ ಘೋರ ಅಪರಾಧದ ಆರೋಪಕ್ಕೆ ಒಳಗಾಗಿರುವ ಆಳುವ ಪಕ್ಷದ ಸಂಸದರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ. ಇದು ಬರಿಯ ಬೂಟಾಟಿಕೆ ಎಂದು ನಿಯೋಗ ಆಕ್ರೋಶ ವ್ಯಕ್ತಪಡಿಸಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೂ ತಾವು ಹಿಂದೆ ಸರಿಯುವುದಿಲ್ಲ ಎಂದು ದೇಶದ ಉನ್ನತ ಕುಸ್ತಿಪಟುಗಳು ತಮ್ಮ ನಿಯೋಗಕ್ಕೆ ತಿಳಿಸಿರುವುದಾಗಿ ಅದು ಹೇಳಿದೆ.

ಆರೋಪಿಗಳ ವಿರುದ್ಧ ಪೋಕ್ಸೋ ಕಾಯ್ದೆ ಸೇರಿದಂತೆ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಪೊಲೀಸರನ್ನು ಒತ್ತಾಯಿಸಿರುವ ನಿಯೋಗ, ಕಿರುಕುಳ ಮತ್ತು ಶೋಷಣೆಯ ಆರೋಪಗಳನ್ನು ಸರಿಯಾಗಿ ತನಿಖೆ ಮಾಡಬೇಕು ಮತ್ತು ನ್ಯಾಯವನ್ನು ನಿರಾಕರಿಸಬಾರದು, ಇದು ನಮ್ಮ ಭವಿಷ್ಯದ ಕ್ರೀಡಾಪಟುಗಳಿಗೆ ಭಯಪಡಲು ಮತ್ತು ಅವರ ಕನಸುಗಳನ್ನು ಸಾಕಾರಗೊಳಿಸಲು ಹಿಂದೇಟು ಹಾಕಲು ಕಾರಣವಾಗಬಾರದು ಎಂದು ಸರಕಾರವನ್ನು ಆಗ್ರಹಿಸಿದೆ.

ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಉಪಾಧ್ಯಕ್ಷ ಹನ್ನನ್ ಮೊಲ್ಲಾ, ಎಐಕೆಎಸ್ ಹಣಕಾಸು ಕಾರ್ಯದರ್ಶಿ ಪಿ. ಕೃಷ್ಣಪ್ರಸಾದ್, ಸಿಐಟಿಯು ಕಾರ್ಯದರ್ಶಿ ಎ.ಆರ್. ಸಿಂಧು ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು)ದ ಕಾರ್ಯದರ್ಶಿ ವಿಕ್ರಮ್ ಸಿಂಗ್‌ಸಂಸತ್ ಸದಸ್ಯ ಎ.ಎ. ರಹೀಂ, ಡಿವೈಎಫ್ಐ ಪ್ರಧಾನ ಕಾರ್ಯದರ್ಶಿ ಹಿಮಂಗರಾಜ್ ಭಟ್ಟಾಚಾರ್ಯ ಮತ್ತು ಎಸ್ಎಫ್ಐ ಪ್ರಧಾನ ಕಾರ್ಯದರ್ಶಿ ಮಯೂಖ್ ಬಿಶ್ವಾಸ್ ಈ ನಿಯೋಗದಲ್ಲಿದ್ದರು.

"ನಮ್ಮ ಕ್ರೀಡಾಪಟುಗಳಿಗೆ ನಾವು ಸಂಪೂರ್ಣ ಬೆಂಬಲವನ್ನು ನೀಡುತ್ತೇವೆ. ಈ ದೇಶದ ರೈತರು, ಕಾರ್ಮಿಕರು, ಯುವಕರು ಮತ್ತು ವಿದ್ಯಾರ್ಥಿಗಳು ನಮ್ಮ ಗೌರವಾನ್ವಿತ ಕ್ರೀಡಾಪಟುಗಳನ್ನು ಘನತೆ ಮತ್ತು ನ್ಯಾಯಕ್ಕಾಗಿ ಅವರ ಹೋರಾಟದಲ್ಲಿ ಬೆಂಬಲಿಸುತ್ತಾರೆ ಎಂದು ನಾವು ಭರವಸೆ ನೀಡುತ್ತೇವೆ" ಎಂದಿರುವ ಈ ನಿಯೋಗ, ಎಐಕೆಎಸ್, ಸಿಐಟಿಯು, ಎಐಎಡಬ್ಲ್ಯುಯು, ಡಿವೈಎಫ್ಐ ಮತ್ತು ಎಸ್ಎಫ್ಐ 27 ಏಪ್ರಿಲ್ 2023 ರಂದು ಪ್ರತಿಭಟನಾನಿರತ ಕ್ರೀಡಾಪಟುಗಳಿಗೆ ಬೆಂಬಲವಾಗಿ ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕರೆ ನೀಡಿವೆ ಎಂದು ಹೇಳಿತು.

ದೇಶಾದ್ಯಂತ ಪ್ರತಿಭಟನೆ–ರಾಷ್ಟ್ರಾಧ್ಯಕ್ಷರಿಗೆ ಮನವಿ

ಎಪ್ರಿಲ್ 27ನ್ನು ದೇಶಾದ್ಯಂತ ಪ್ರತಿಭಟನಾ ದಿನ ಎಂದು ಆಚರಿಸಲಾಗಿದೆ, ಡಬ್ಲ್ಯುಎಫ್ಐ ಅಧ್ಯಕ್ಷ ಮತ್ತು ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ತಕ್ಷಣವೇ ಬಂಧನ ಮತ್ತು ಇತರ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿ ವ್ಯಾಪಕ ಮತಪ್ರದರ್ಶನಗಳು, ಧರಣಿಗಳು, ಪ್ರತಿಕೃತಿ ದಹನ, ಮತ್ತು ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಕೆಗಳು ನಡೆದಿವೆ, ಇವುಗಳಲ್ಲಿ ಸಾವಿರಾರು ಮಹಿಳೆಯರೂ ಭಾಗವಹಿಸದ್ದಾರೆ ಎಂದು ವರದಿಗಳು ತಮಗೆ ಬಂದಿರುವುದಾಗಿ ಈ ಐದು ಸಂಘಟನೆಗಳು ಮತ್ತು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. ನಗರಗಳು, ಪಟ್ಟಣಗಳು ಮತ್ತು ಹಳ್ಳಿಗಳಲ್ಲೂ ಪ್ರತಿಭಟನೆಗಳು ನಡೆದಿವೆ ಎಂದು ಅವು ತಿಳಿಸಿವೆ.

ಆರೋಪಿಯು ಆಳುವ ಪಕ್ಷಕ್ಕೆ ಸೇರಿದ ಸಂಸದರಾಗಿದ್ದು, ಆರೋಪಿಗಳನ್ನು ರಕ್ಷಿಸಲು ಪ್ರಧಾನಿ ಮತ್ತು ಅವರ ಸರ್ಕಾರವು ಸರ್ವಪ್ರಯತ್ನ ನಡೆಸುತ್ತಿದ್ದಾರೆ ಎಂಬುದು ಎದ್ದು ಕಾಣುತ್ತಿದೆ. ಸಂತ್ರಸ್ತ ಮಹಿಳೆಯರು ನ್ಯಾಯ ಪಡೆಯಲು ಓಡಾಡಬೇಕಾದ, ಬೀದಿಯಲ್ಲಿ ಮಲಗಬೇಕಾದ ಈ ಅರಾಜಕ ಪರಿಸ್ಥಿತಿಗೆ ಮೋದಿ ಸರಕಾರವನ್ನು ಕ್ಷಮಿಸಲಾಗದು. ಹೀನಾಯ ವೈಫಲ್ಯದ ಹೊಣೆ ಹೊತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಕೂಡಲೇ ರಾಜೀನಾಮೆ ನೀಡಬೇಕು. ಎಲ್ಲ ಆರೋಪಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು. ದೂರುದಾರರ ಗುರುತನ್ನು ಬಹಿರಂಗಪಡಿಸಿ ಸಂತ್ರಸ್ತ ಮಹಿಳೆಯರಿಗೆ ಕ್ರಿಮಿನಲ್ ಮಾಫಿಯಾದಿಂದ ಬೆದರಿಕೆಗಳು ಬರುವಂತಾಗಿರುವ ಬಗ್ಗೆ ಕನ್ನಾಟ್ ಪ್ಲೇಸ್ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳ ಮೇಲೂ ಕಾನೂನು ಅಡಿಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಈ ಆರು ಸಂಘಟನೆಗಳ ಪ್ರಧಾನ ಕಾರ್ಯದರ್ಶಿಗಳು ಜಂಟಿ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.


"ನಾವು ಶ್ರೀಮತಿ ದ್ರೌಪದಿ ಮುರ್ಮು, ಗೌರವಾನ್ವಿತ ಭಾರತದ ರಾಷ್ಟ್ರಾಧ್ಯಕ್ಷರು, ತಕ್ಷಣವೇ ಮಧ್ಯಪ್ರವೇಶಿಸಿ ಎಫ್ಐಆರ್ ದಾಖಲಿಸಲು ಮತ್ತು ಅಪರಾಧಿಯನ್ನು ಬಂಧಿಸಲು ಮತ್ತು ಸಂತ್ರಸ್ತರಿಗೆ ನ್ಯಾಯವನ್ನು ಒದಗಿಸುವಂತೆ ದೆಹಲಿ ಪೊಲೀಸರಿಗೆ ಆದೇಶ ನೀಡುವಂತೆ ಪ್ರಧಾನ ಮಂತ್ರಿಗೆ ನಿರ್ದೇಶಿಸಬೇಕು ಎಂದು ಅವರನ್ನು ಬಲವಾಗಿ ಒತ್ತಾಯಿಸುತ್ತೇವೆ. ದೇಶದ ಉನ್ನತ ಆಡಳಿತದ ಸ್ಥಾನದಲ್ಲಿರುವ ಮಹಿಳೆಯಾಗಿ, ಇದು ಗೌರವಾನ್ವಿತ ರಾಷ್ಟ್ರಾಧ್ಯಕ್ಷರಿಂದ ನಿರೀಕಿಸುವ ಕನಿಷ್ಠ ಬಾಧ್ಯತೆಯಾಗಿದೆ" ಎಂದು ಅವರು ಹೇಳಿದ್ದಾರೆ.

ಕೇಂದ್ರ ಸರಕಾರ ಕೂಡಲೇ ಕ್ರಮ ಕೈಗೊಳ್ಳಲು ವಿಫಲವಾದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಎಂದೂ ತಪನ್ ಸೇನ್ (ಸಿ.ಐ.ಟಿ.ಯು), ವಿಜೂ ಕೃಷ್ಣನ್ (ಎಐಕೆಎಸ್), ಬಿ. ವೆಂಕಟ್ (ಎಐಎಡಬ್ಲ್ಯುಯು), ಮರಿಯಮ್ ಧವಳೆ (ಎಐಡಿಡಬ್ಲ್ಯುಎ), ಹಿಮಂಗನರಾಜ್ ಭಟ್ಟಾಚಾರ್ಯ (ಡಿ.ವೈ.ಎಫ್.ಐ) ಮತ್ತು ಮಯೂಖ್ ಬಿಸ್ವಾಸ್ (ಎಸ್ಎಫ್ಐ) ಎಚ್ಚರಿಸಿದ್ದಾರೆ.

ಮಹಿಳಾ ಸಂಘಟನೆಗಳ ಪ್ರತಿಭಟನಾ ಮೆರವಣಿಗೆ

ದೇಶದ ಪ್ರಮುಖ ಮಹಿಳಾ ಸಂಘಟನೆಗಳಾದ ಎಐಡಿಡಬ್ಲ್ಯುಎ, ಎನ್ಎಫ್ಐಡಬ್ಲ್ಯು, ಎಐಎಂಎಸ್ಎಸ್, ಪಿಎಂಸ್ ಮತ್ತು ಸಿಎಸ್‌ಡಬ್ಲ್ಯು ಎಪ್ರಿಲ್ 27ರಂದು ದೇಶದ ರಾಜಧಾನಿಯಲ್ಲಿ ದಿಲ್ಲಿ ಪೋಲೀಸ್ ಕಮಿಷನರ್ ಕಚೇರಿಗೆ ಆರೋಪಿಯ ಮೇಲೆ ಎಫ್ಐಆರ್ ಹಾಕಬೇಕೆಂದು ಆಗ್ರಹಸಿ ಪ್ರತಿಭಟನಾ ಮೆರವಣಿಗೆ ಹೊರಟರು. ಮಾರ್ಗಮಧ್ಯದಲ್ಲೇ ಅವರನ್ನು ತಡೆದು, ಹಲ್ಲೆ ನಡೆಸಿ ಬಂಧಿಸಲಾಯಿತು, ನಂತರ ಜಂತರ್ ಮಂತರ್‌ನಲ್ಲಿ ಬಿಡುಗಡೆ ಮಾಡಲಾಯಿತು.

ಈ ನಡುವೆ ದೇಶದ ಗೌರವಾನ್ವಿತ ಓಟಗಾರ್ತಿ ಮತ್ತು ಈಗ ಭಾರತ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷೆ ಪಿ.ಟಿ.ಉಷಾ ಜಂತರ್ ಮಂತರ್‌ನಲ್ಲಿ ಮಹಿಳಾ ಕುಸ್ತಿ ಪಟುಗಳು ಧರಣಿ ಕೂತಿರುವುದು ಅಶಿಸ್ತಿನ ಕೃತ್ಯ ಎಂದಿರುವುದು ದುರದೃಷ್ಟಕರ ಮತ್ತು ನಿರಾಶಾದಾಯಕ ಸಂಗತಿ ಎಂದು ಎಐಡಿಡಬ್ಲ್ಯುಎ ಅಧ್ಯಕ್ಷರಾದ ಪಿ.ಕೆ.ಶ್ರೀಮತಿ ಮತ್ತು ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಖೇದ ವ್ಯಕ್ತ ಪಡಿಸಿದ್ದಾರೆ. ಮಹಿಳಾ ಕ್ರೀಡಾಪಟುಗಳ ಭದ್ರತೆ ಅವರ ಹೊಣೆ. ಲೈಂಗಿಕ ಕಿರುಕುಳದ ಆರೋಪಕ್ಕೆ ಒಳಗಾಗಿರುವ ವ್ಯಕ್ತಿಯನ್ನು ಆತನ ಹುದ್ದೆಯಿಂದ ತೆಗೆದು ಹಾಕುವಂತೆ ಮಾಡುವ ಬದಲು, ಆತನಿಗೆ ಪರೋಕ್ಷವಾಗಿ ಬೆಂಬಲವನ್ನೇ ನೀಡಿರುವುದು ನಾಚಿಕೆಗೇಡಿನ ಸಂಗತಿ, ಇಂತಹ ವರ್ತನೆಯನ್ನು ಅವರಿಂದ ನಿರೀಕ್ಷಿಸಿರಲಿಲ್ಲ ಎಂದು ಅವರು ಹೇಳಿದ್ದಾರೆ.



ಯು.ಎಸ್ ನಲ್ಲಿ 3.4 ಲಕ್ಷ ಪಾರ್ಸೆಲ್ ಕಾರ್ಮಿಕರು ಮುಷ್ಕರದತ್ತ

ಜಗದ ಸುತ್ತ

ವಸಂತರಾಜ ಎನ್.ಕೆ.

ಜಗತ್ತಿನ ಅತಿ ದೊಡ್ಡ ಪಾರ್ಸೆಲ್ ಕಂಪನಿಯಾದ ಯು.ಪಿ.ಎಸ್ (ಯುನೈಟೆಡ್ ಪಾರ್ಸೆಲ್ ಸರ್ವೀಸ್) ನ 3.4 ಲಕ್ಷ ಯು.ಎಸ್ ಕಾರ್ಮಿಕರು ಮುಷ್ಕರದ ಹಾದಿಯಲ್ಲಿದ್ದಾರೆ. ಯು.ಪಿ.ಎಸ್ ನ ಈಗಿರುವ ಒಪ್ಪಂದ ಜುಲೈ 31ಕ್ಕೆ ಮುಗಿಯಲಿದ್ದು, ಹೊಸ ಒಪ್ಪಂದದ ಕುರಿತು ಚೌಕಾಶಿ ನಡೆಯುತ್ತಿದೆ. ಉತ್ತಮ ವೇತನ, ಹೆಚ್ಚು ಪೂರ್ಣಾವಧಿಯ ಉದ್ಯೋಗಗಳು, ಉದ್ಯೋಗ ಭದ್ರತೆ, ಕಾರ್ಮಿಕರ ತೀವ್ರ ಅತೃಪ್ತಿಗೆ ಕಾರಣವಾಗಿರುವ '22.4' ಎಂದು ಕರೆಯಲಾದ ಎರಡು ಹಂತದ ಉದ್ಯೋಗ ವರ್ಗೀಕರಣವನ್ನು ಕೊನೆಗೊಳಿಸುವುದು ಒಪ್ಪಂದದ ಭಾಗವಾಗದಿದ್ದರೆ 3.4 ಲಕ್ಷ ಕಾರ್ಮಿಕರು ಮುಷ್ಕರ ಹೂಡುವ ತಯಾರಿಯನ್ನೂ ಮಾಡುತ್ತಿದ್ದಾರೆ. ಹಲವು ಕಡೆ ಬಹಿರಂಗ ಸಭೆಗಳು, ಮುಷ್ಕರಕ್ಕೆ ಅಣಿ ನೆರೆಸುವುದು ನಡೆಯುತ್ತಿದೆ.

ಅತಿ ಹೆಚ್ಚು ಓವರ್ ಟೈಮ್ ನ ಕಡಿತ, ಕಂಪನಿ ಕಿರುಕುಳದ ವಿರುದ್ಧ ರಕ್ಷಣೆ, ಚಾಲಕರತ್ತ ಮುಖ ಮಾಡಿರುವ ಕ್ಯಾಮೆರಾಗಳನ್ನು ತೆಗೆದು ಹಾಕುವುದು ಮತ್ತು ತೀವ್ರ ಸೆಕೆಯ ಹವಾಮಾನದಿಂದ ರಕ್ಷಣೆಗಳಿಗೂ ಕಾರ್ಮಿಕರು ಒತ್ತಾಯಿಸುತ್ತಿದ್ದಾರೆ. ಕಳೆದ ಬೇಸಿಗೆ ಕಾಲದಲ್ಲಿ ಟ್ರಕ್ ಗಳ ಒಳಗೆ ತೀವ್ರ ಸೆಕೆಯಿಂದಾಗಿ ಕೆಲವು ಟ್ರಕ್ ಚಾಲಕರು ಸತ್ತಿದ್ದರು.

ಈ ವರೆಗೆ ಯೂನಿಯನ್ ಮತ್ತು ಯು.ಪಿ.ಎಸ್ ಮ್ಯಾನೇಜ್ ಮೆಂಟ್ ನಡುವಿನ ಚೌಕಾಶಿಯ ನಡೆಯುತ್ತಿರುವಾಗಲೇ ಗರಿಷ್ಠ ಒತ್ತಡ ಹಾಕಲು ಯೂನಿಯನ್ ಮುಷ್ಕರಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಈ ಮುಷ್ಕರ ನಡೆದರೆ ಇದು ಯು.ಎಸ್ ಇತಿಹಾದಲ್ಲೇ ಅತ್ಯಂತ ದೊಡ್ಡ ಮುಷ್ಕರವಾಗುತ್ತದೆ. ಕಳೆದ ಬಾರಿ ಯು.ಪಿ.ಎಸ್ ಕಾರ್ಮಿಕರು ಮುಷ್ಕರ ಹೂಡಿದ್ದು 1997ರಲ್ಲಿ. ಆಗ 1.85 ಲಕ್ಷ ಕಾರ್ಮಿಕರು 15 ದಿವಸಗಳ ಕಾಲ ಮುಚ್ಕರ ಹೂಡಿದ್ದರು. ಯು,ಪಿ.ಎಸ್ ಕಂಪನಿಗೆ 85 ಕೋಟಿ ಡಾಲರುಗಳ ನಷ್ಟವಾಗಿತ್ತು

ಈಗ ಯು,ಪಿ.ಎಸ್ ದೇಶದ ಜಿಡಿಪಿಯ ಶೇ.6 ರಷ್ಟು ಮೌಲ್ಯದ ಸರಕುಗಳ ಸಾಗಾಣಿಕೆ ಮಾಡುತ್ತದೆ. ಪ್ರತಿ ವರ್ಷ 600 ಕೋಟಿ ಪಾರ್ಸೆಲುಗಳನ್ನು ತಲುಪಿಸುತ್ತದೆ. ಕೊವಿಡ್ ಕಾಲದಲ್ಲಿ ಅವರನ್ನು 'ಅಗತ್ಯ ಸೇವಾ ಕಾರ್ಮಿಕರು' ಎಂದು ಗುರುತಿಸಲಾಗಿತ್ತು.

'ಪಾರ್ಟ್–ಟೈಂ ಉದ್ಯೋಗ ಬೇಡ' ಎಂಬುದು 1997 ಮುಷ್ಕರದಲ್ಲೂ ಪ್ರಮುಖ ಘೋಷಣೆಯಾಗಿತ್ತು. ಫುಲ್–ಟೈಂ ಉದ್ಯೋಗಗಳನ್ನು 'ಪಾರ್ಟ್–ಟೈಂ' ಉದ್ಯೋಗಗಳಾಗಿ ಮಾಡುವುದನ್ನು ವಿರೋಧಿಸಿ, ಸುಮಾರು 10 ಸಾವಿರ 'ಫುಲ್–ಟೈಂ' ಉದ್ಯೋಗಗಳನ್ನು ಉಳಿಸಿಕೊಳ್ಳಲಾಗಿತ್ತು. ಈಗ ನಡೆಯುತ್ತಿರುವ ಸಭೆಗಳಲ್ಲೂ 'ಪಾರ್ಟ್–ಟೈಂ ಉದ್ಯೋಗ ಬೇಡ' ಎಂಬ ಘೋಷಣೆಗಳು ಕೇಳಿ ಬರುತ್ತಿವೆ.

'ಫುಲ್–ಟೈಂ' ಶಿಫ್ಟ್ ಗಳನ್ನು ಸಹ ಎರಡು ಅಥವಾ ಹೆಚ್ಚು 'ಪಾರ್ಟ್–ಟೈಂ' ಶಿಫ್ಟ್ ಗಳಾಗಿ ಒಡೆಯಲಾಗುತ್ತಿದೆ. ಇದರಿಂದಾಗಿ ಕಾರ್ಮಿಕರಿಗೆ ಗಂಭೀರ ನಿದ್ದೆಗೆಡುವ ಮತ್ತು ವಿಶ್ರಾಂತಿಯ ಕೊರತೆಯಿಂದ ಆರೋಗ್ಯದ ಮತ್ತು ಸಾಮಾನ್ಯ ಜೀವನ ಏರುಪೇರು ಮಾಡುವ ಸಮಸ್ಯೆಗಳು ತಲೆದೋರುತ್ತಿವೆ. ಯು.ಪಿ.ಎಸ್ ಉದ್ಯೋಗಗಳಲ್ಲಿ ದೊಡ್ಡ ಪಾಲು ಪಾರ್ಸೆಲ್ ಸಾಗಾಣಿಕೆ ಮಾಡುವ ಟ್ರಕ್ ಚಾಲಕರದ್ದಾಗಿದ್ದು ಇದು ಅಪಾಯಕಾರಿ ಸಹ. ಉದಾಹರಣೆಗೆ ಒಬ್ಬ ಟ್ರಕ್ ಡ್ರೈವರ್ ನ 'ಪಾರ್ಟ್–ಟೈಂ' ಶಿಫ್ಟ್ ಗಳು ಬೆಳಿಗ್ಗೆ 4ರಿಂದ



8 ಮತ್ತು ಸಂಜೆ 4.30ರಿದ 8.30 ವರೆಗೆ ಇದೆ. ಟ್ರಕ್ ಚಾಲಕರು ಅವರ ಕೆಲಸದ ನಿಮಿತ್ತ ಅವರ ವಾಸದ ಸ್ಥಳದಿಂದ ದೂರದ ಸ್ಥಳಕ್ಕೆ ಹೋಗಬೇಕಾಗಿದ್ದು ವಾಸ್ತವ್ಯದ ಯಾವುದೇ ವ್ಯವಸ್ಥೆಯಿಲ್ಲದೆ ಟ್ರಕ್ ನಲ್ಲೇ ಮಲಗಬೇಕಾದ ಪರಿಸ್ಥಿತಿಯಿದೆ.

ವೇತನ ಸಹ ತೀರಾ ಕಡಿಮೆಯಿದೆ. 'ಪಾರ್ಟ್–ಟೈಂ' ನೌಕರರರಿಗೆ ವೇತನ ಗಂಟೆಗೆ 15.5 ಡಾಲರು ಇದ್ದು ಯೂನಿಯನ್ 20 ಡಾಲರಿಗೇರಿಸಲು ಹಕ್ಕೊತ್ತಾಯ ಮಂಡಿಸಿದೆ. ಕಳೆದ ವರ್ಷ ಯು.ಪಿ.ಎಸ್ ಮೊದಲ ಬಾರಿಗೆ 100 ಶತಕೋಟಿ ಡಾಲರು ವಹಿವಾಟು ಸಾಧಿಸಿದ್ದು ಅದರ ಮುಖ್ಯಸ್ಥನ ವಾರ್ಷಿಕ ವೇತನ 1.9 ಕೋಟಿ ಡಾಲರಾಗಿತ್ತು. ಇಷ್ಟು ಶ್ರೀಮಂತ ಕಂಪನಿಯ ಕಾರ್ಮಿಕರು ಏಕೆ ಇಷ್ಟು ಬಡತನದಲ್ಲಿರಬೇಕು ಎಂದು ಯೂನಿಯನ್ ಕೇಳುತ್ತಿದೆ.

ಈ ಬಾರಿಯ ಯೂನಿಯನ್ ಹಕ್ಕೊತ್ತಾಯಗಳ ಬಗ್ಗೆ ಚೌಕಾಶಿ ತೀವ್ರವಾಗಿರುತ್ತದೆ. ಕಂಪನಿ ಇದಕ್ಕೆ ಒಪ್ಪಬೇಕು ಅಥವಾ ಮುಷ್ಕರ ಖಂಡಿತ ಎನ್ನುವ ಪರಿಸ್ಥಿತಿಯಿದೆ. ಇದಕ್ಕೆ ಕಾರಣ 2022ರಲ್ಲಿ ಆಯ್ಕೆಯಾದ ಹೊಸ ಯೂನಿಯನ್ ಅಧ್ಯಕ್ಷ ಸೀನ್ ಒಬ್ರಿಯಾನ್ ಸಹ. ಅವರು ಹಿಂದಿನ ಯು.ಪಿ.ಎಸ್ ಅಧ್ಯಕ್ಷರನ್ನು ಸೋಲಿಸಿ ಆಯ್ಕೆಯಾಗಿದ್ದಾರೆ. ಹಿಂದಿನ ಅಧ್ಯಕ್ಷ ಕಾರ್ಮಿಕರು ತಿರಸ್ಕರಿಸಿದ ಒಪ್ಪಂದವನ್ನು ಕಂಪನಿ ಜತೆ ಶಾಮೀಲಾಗಿ ಸಹಿ ಹಾಕಿದ್ದ. ಈ ಒಪ್ಪಂದದ ಹಲವು ಅಂಶಗಳು ಕಾರ್ಮಿಕರಲ್ಲಿ ತೀವ್ರ ಆಕ್ರೋಶವನ್ನು ತಂದಿದ್ದವು. '22.4' ಎಂದು ಕರೆಯಲಾದ ಎರಡು ಹಂತದ ಉದ್ಯೋಗ ವರ್ಗೀಕರಣ ಅದರಲ್ಲೊಂದು. ಕಾರ್ಮಿಕರನ್ನು ಒಡೆಯುವ ಅದನ್ನು ಪೂರ್ಣವಾಗಿ ರದ್ದು ಮಾಡಬೇಕು ಎಂದು ಯೂನಿಯನ್ ಆಗ್ರಹಿಸುತಿದೆ.

ನವ–ಉದಾರವಾದಕ್ಕೆ ಸವಾಲು ಹಾಕುತ್ತಿರುವ ಯು.ಎಸ್ ಕಾರ್ಮಿಕರು

ಕಳೆದ ವರ್ಷದಿಂದ ಕೊವಿಡ್ ಮಹಾರೋಗ ಹಿಂದೆ ಸರಿಯುತ್ತಿದ್ದಂತೆ ಮತ್ತು ಬೆಲೆಏರಿಕೆ, ಹಣದುಬ್ಬರ, ಬಿಗಿ ಮಾರುಕಟ್ಟೆ ಪರಿಸ್ಥಿತಿ ಉಂಟಾಗುತ್ತಿದ್ದಂತೆ ಕಾರ್ಮಿಕರು ಹೋರಾಟದ, ಮುಷ್ಕರದ ಹಾದಿ ಹಿಡಿಯುವುದು ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ (2012) ಹೋಲಿಸಿದರೆ, ಮುಷ್ಕರಗಳು 50% ನಷ್ಟು ಮುಷ್ಕರನಿರತ ಕಾರ್ಮಿಕರ ಸಂಖ್ಯೆ 60%ದಷ್ಟು ಹೆಚ್ಚಿದೆ 2021ರ 279 ಮುಷ್ಕರಗಳಿಗೆ ಹೋಲಿಸಿದರೆ 424 ಮುಷ್ಕರಗಳಲ್ಲಿ 2.24 ಲಕ್ಷ ಕಾರ್ಮಿಕರು ಮುಷ್ಕರ ನಿರತರಾಗಿದ್ದರು. ಫಾಸ್ಟ್ ಫುಡ್ ಕಾರ್ಮಿಕರ 'ಗಂಟೆಗೆ 15 ಡಾಲರು ವೇತನ' ಮತ್ತು ಸ್ಟಾರ್ ಬಕ್ಸ್ ಬಾರಿಸ್ಟಾಸ್ ಕಾರ್ಮಿಕರು ಸುಮಾರು 100 ಮುಷ್ಕರಗಳನ್ನು ಸಂಘಟಿಸಿದರು.

ಶಿಕ್ಷಣ ಕಾರ್ಮಿಕರ ಮುಷ್ಕರಗಳು 2022ರಲ್ಲಿ ಪ್ರಧಾನವಾಗಿತ್ತು, ಮುಷ್ಕರನಿರತ ಕಾರ್ಮಿಕರಲ್ಲಿ 60% ಶಿಕ್ಷಣ ಕ್ಷೇತ್ರಕ್ಕೆ ಸೇರಿದ್ದರು. 2021ರಲ್ಲಿ ಕೊವಿಡ್ ಮಹಾರೋಗದ ಹಿನ್ನೆಲೆಯಲ್ಲಿ ಆರೋಗ್ಯ ಕ್ಷೇತ್ರದ ಕಾರ್ಮಿಕರು ಮುಷ್ಕರಗಳಲ್ಲಿ ಬಹುಸಂಖ್ಯಾತರಾಗಿದ್ದರು. ಕ್ಯಾಲಿಫೋರ್ನಿಯಾ ವಿವಿ ಯ 48 ಸಾವಿರ ಶಿಕ್ಷಕರು ಒಂದು ತಿಂಗಳ ಮುಷ್ಕರ ದ ನಂತರ 50% ವೇತನ ಹೆಚ್ಚಳ ಮತ್ತು ಹೆಚ್ಚಿನ ರಜಾಗಳನ್ನು ಗೆದ್ದುಕೊಂಡರು. ಇದು 2022ರ ಅತಿ ದೊಡ್ಡ ಮುಷ್ಕರ ಮಾತ್ರವಲ್ಲ, 90ರ ದಶಕದ ನಂತರ ಶಿಕ್ಷಣ ಕ್ಷೇತ್ರದ ಅತಿ ದೊಡ್ಡ ಮುಷ್ಕರವಾಗಿತ್ತು.

ಆದರೆ 2022ರ ಮುಷ್ಕರಗಳು ಹಿಂದಿನ ದಶಕಗಳಿಗೆ ಹೋಲಿಸಿದರೆ ದೊಡ್ಡವೇನಲ್ಲ. 1950 ರಿಂದ ದಶಕದ ವರೆಗೆ ಪ್ರತಿ ವರ್ಷ 10 ಲಕ್ಷ ದಷ್ಟು ಕಾರ್ಮಿಕರು ಮುಷ್ಕರನಿರತರಾಗಿರುವುದು ಸಾಮಾನ್ಯವಾಗಿತ್ತು. ಅದೇ ರೀತಿಯಲ್ಲಿ ಕಾರ್ಮಿಕರ ಯೂನಿಯನೀಕರಣದ ಪ್ರಮಾಣ ಸಹ ಹೆಚ್ಚಳವನ್ನು ಸಾಧಿಸಿಲ್ಲ. ಯೂನಿಯನೀಕರಣದ ಪ್ರಮಾಣ ಇಳಕೆ ಇನ್ನೂ ನಿಂತಿಲ್ಲ. 1950ರ ದಶಕದಲ್ಲಿ ಇದ್ದ ಸುಮಾರು 33% ಯೂನಿಯನೀಕರಣ ಈಗ 10% ಕ್ಕೆ ಇಳಿದಿದೆ. ಆದರೆ ವಿಶೇಷವೇನೆಂದರೆ ಕಳೆದ ಎರಡು ವರ್ಷಗಳಲ್ಲಿ ನಡೆದ ಮುಷ್ಕರಗಳಲ್ಲಿ ಮೂರನೆಯ ಒಂದು ಭಾಗ ಯೂನಿಯನೀಕರಣವಾಗದ ಕಾರ್ಮಿಕರು ಸಂಘಟಿಸಿದ್ದು ವಿಶೇಷವಾಗಿತ್ತು.

ಮುಷ್ಕರಗಳು ಮುಷ್ಕರನಿರತ ಕಾರಮಿಕರ ಸಂಖ್ಯೆ ಹೆಚ್ಚುತ್ತಿದ್ದರೂ ಯೂನಿಯನೀಕರಣದ ಅಧಿಕೃತ ಪ್ರಮಾಣ ಕಡಿಮೆ ಇರುವುದಕ್ಕೆ ಇನ್ನೊಂದು ಕಾರಣ ಲೇಬರ್ ಇಲಾಖೆ ಅದರ ಬಜೆಟ್ ಕಡಿತದಿಂದಾಗಿ, ಸಾವಿರಕ್ಕಿಂತ ಕಡಿಮೆ ಕಾರ್ಮಿಕರು ಭಾಗವಹಿಸಿದ ಮುಷ್ಕರಗಳ ಅಂಕೆ–ಸಂಖ್ಯೆಗಳ ಸಂಗ್ರಹ ನಿಲ್ಲಿಸಿದ್ದು ಎಂದೂ ಹೇಳಲಾಗಿದೆ. ಉದಾಹರಣೆಗೆ 2022ರಲ್ಲಿ ಅರ್ಧಕ್ಕಿಂತ ಹೆಚ್ಚು ಮುಷ್ಕರಗಳಲ್ಲಿ 50ಕ್ಕಿಂತ ಕಡಿಮೆ ಕಾರ್ಮಿಕರು ಭಾಗವಹಿಸಿದ್ದರು. ಮಾತ್ರವಲ್ಲ, ಸುಮಾರು 6 ಕೋಟಿ ಕಾರ್ಮಿಕರು ಯೂನಿಯನ್ ಸೇರಲು ಬಯಸಿದ್ದರು, ಆದರೆ ಸಾಧ್ಯ ವಾಗಲಿಲ್ಲ, ಇದಕ್ಕೆ ಯು.ಎಸ್ ನ ವಿಚಿತ್ರ ಕಾರ್ಮಿಕ ಕಾನೂನುಗಳು ಕಾರಣ. ಯಾವುದೇ ಯೂನಿಯನ್ ರಚನೆ ಮಾಡಬೇಕಾದರೆ ಕಾರ್ಮಿಕರ ಅಭಿಪ್ರಾಯ ಸಂಗ್ರಹ ಮಾಡಬೇಕು, ಅದಕ್ಕೆ ಮ್ಯಾನೇಜ್ ಮೆಂಟ್ ಸಹಕಾರ ಭಾಗವಹಿಸುವಿಕೆ ಬೇಕು. ಆ ಹಂತದಲ್ಲಿ ಯೂನಿಯನ್ ಕಟ್ಟುವ ಪ್ರಕ್ರಿಯೆಯನ್ನು ಬೆದರಿಕೆ ಇತ್ಯಾದಿ ಬಳಸಿ ತಡೆಯಲಾಗುತ್ತದೆ. ಅದನ್ನು ಲೇಬರ್ ಇಲಾಖೆ ಅನುಮೋದನೆ ನೀಡಬೇಕು. ಅದನ್ನು ಮ್ಯಾನೇಜ್ ಮೆಂಟ್ ಕೋರ್ಟ್ ಮೂಲಕ ಪ್ರಶ್ನಿಸಬಹುದು. ಕೋರ್ಟಿನಲ್ಲಿ ದೀರ್ಘ ಕಾಲ ನೆನೆಗುದಿಗೆ ಬೀಳಬಹುದು. ಹೀಗೆ ಕಾರ್ಮಿಕ ಯೂನಿಯನೀಕರಣ ಪ್ರಮಾಣ ಕಾರ್ಮಿಕರ ನಿರಾಸಕ್ತಿ ಕಾರಣವಲ್ಲ, ಯುಎಸ್ ಕಾರ್ಮಿಕ–ವಿರೋಧೀ ಕಾನೂನು ವ್ಯವಸ್ಥೆಯೇ ಕಾರಣ.

ಭಾರತದ ಅರ್ಥವ್ಯವಸ್ಥೆಯ ಅವ್ಯವಸ್ಥೆ......

ಪುಟ 13 ರಿಂದ

ಒಂದು ದೊಡ್ಡ ಗುಣಕ ಪರಿಣಾಮವನ್ನು ಹೊಂದಿದೆ.

ಇಲ್ಲಿ ಸ್ಪಷ್ಟೀಕರಣದ ಎರಡು ಟಿಪ್ಪಣಿಗಳು ಬೇಕಾಗುತ್ತವೆ. ಮೊದಲನೆಯದು, ಅರ್ಥವ್ಯವಸ್ಥೆಯು ಪೂರೈಕೆಯ ಬದಿಯಿಂದ ನಿರ್ಬಂಧಿಸಲ್ಪಟ್ಟಿದ್ದರೆ, ಈ ವಾದವು ಸಮಂಜಸವಾಗುವುದಿಲ್ಲ. ಉದಾಹರಣೆಗೆ, ಬೆಳವಣಿಗೆಯ ದರವನ್ನು ತಡೆಹಿಡಿಯುವ ಮಟ್ಟಿನ ಮೂಲಸೌಕರ್ಯದ ಕೊರತೆ ಇದ್ದರೆ ಈ ವಾದವು ಸಂಗತವಾಗುವುದಿಲ್ಲ. ಆದರೆ, ಭಾರತದಲ್ಲಿ ಈಗಿರುವ ಪರಿಸ್ಥಿತಿ ಹಾಗಿಲ್ಲ. ನಮ್ಮ ಅರ್ಥವ್ಯವಸ್ಥೆಯನ್ನು ಬೇಡಿಕೆಯ ಕೊರತೆ ನಿರ್ಬಂಧಿಸಿದೆ ಎಂಬುದನ್ನು ಐಎಂಎಫ್ ಕೂಡ ಅನುಮೋದಿಸುತ್ತದೆ. ಎರಡನೆಯದು, ಬಡವರಿಗೆ ಅಥವಾ ದುಡಿಯುವ ಜನರಿಗೆ ಮಾಡುವ ಯಾವುದೇ ವರ್ಗಾವಣೆಯು ಆಹಾರ ಧಾನ್ಯಗಳ ಮೇಲೆ ಹೆಚ್ಚು ಬೇಡಿಕೆಯನ್ನು ಸೃಷ್ಟಿಸುತ್ತದೆ ಎಂದು ಭಾವಿಸಬಹುದು. ಅದರಿಂದ ಸರ್ಕಾರದ ಬಳಿ ಇರುವ ಆಹಾರ ಧಾನ್ಯಗಳ ದಾಸ್ತಾನುಗಳು ಕಡಿಮೆಯಾಗುತ್ತವೆಯಲ್ಲದೆ ಇಂತಹ ವರ್ಗಾವಣೆಗಳು ಯಾವುದೇ ಗುಣಕ ಪರಿಣಾಮಗಳನ್ನು ಹೊಂದಿರುವುದಿಲ್ಲ ಎಂದು ವಾದಿಸಬಹುದು. ಈ ವಾದವು ಹಿಂದೆ ಪ್ರಸ್ತುತವಾಗಿತ್ತು, ನಿಜ. ಈಗ ಬಹಳಷ್ಟು ಕಡಿಮೆಯಾಗಿದೆ. ಏಕೆಂದರೆ, ಕೊರೋನಾ ಸಾಂಕ್ರಾಮಿಕದ ಸನ್ನಿವೇಶದಲ್ಲಿ ಸರ್ಕಾರವು ಬಡ ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವುದು ಅನಿವಾರ್ಯವಾಗಿತ್ತು. ಅದರಿಂದಾಗಿ ಧಾನ್ಯ–ಅಭಾವವೇನೂ ಈಗ ಉದ್ಭವಿಸಿಲ್ಲ. ಆದ್ದರಿಂದ ದುಡಿಯುವ ಬಡ ಜನರಿಗೆ ಮಾಡುವ ಯಾವುದೇ ರೀತಿಯ ವರ್ಗಾವಣೆಗಳು ಸರಕುಗಳು ಮತ್ತು ಸೇವೆಗಳಿಗೆ ಬೇಡಿಕೆಯನ್ನು ಸೃಷ್ಟಿಸುತ್ತವೆ. ಅದರಿಂದಾಗಿ ಅವುಗಳ ಉತ್ಪಾದನೆಯನ್ನು ಹೆಚ್ಚಿಸಬಹುದು. ಹಾಗಾಗಿ ಇದು ಮೇಲೆ ಹೇಳಿದ ಹಾಗೆ ಗಣನೀಯ ಪ್ರಮಾಣದ ಗುಣಕ ಪರಿಣಾಮಗಳನ್ನು ಹೊಂದಿದೆ.

ಗುಣಕ ಪರಿಣಾಮವು ದೊಡ್ಡದಿದ್ದಾಗ ಉದ್ಯೋಗ ಸೃಷ್ಟಿಯೂ ದೊಡ್ಡ ಪ್ರಮಾಣದಲ್ಲೇ ಆಗುತ್ತದೆ. ಆದ್ದರಿಂದ ನವ–ಉದಾರವಾದಿ ಆಳ್ವಿಕೆಯಲ್ಲಿ ಸರ್ಕಾರದ ವೆಚ್ಚಗಳ ಮೇಲೆ ಜಿಡಿಪಿಯ ಅನುಪಾತದಲ್ಲಿ ಹೇರಿದ ನಿರ್ಬಂಧಗಳಿದ್ದರೂ ಸಹ, ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹೇರುವ ಮತ್ತು ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯನ್ನು ಹೊಂದುವ ಈ ಎರಡೂ ಕ್ರಮಗಳನ್ನೂ ಕೈಗೊಳ್ಳಲಿಕ್ಕಿಲ್ಲ ಎಂದು ತಳ್ಳಿಹಾಕಿದರೂ ಸಹ, ತನ್ನ ವೆಚ್ಚಗಳ ದಿಕ್ಕನ್ನು ಬದಲಾಯಿಸುವ ಮೂಲಕವೂ ತನಗೆ ಕೈಕಾಲಾಡಿಸುವಷ್ಟು ಜಾಗವನ್ನು ಸರ್ಕಾರವು ಸೃಷ್ಟಿಸಿಕೊಳ್ಳಬಹುದು. ಅಂತಹ ಒಂದು ಬದಲಾವಣೆಯು ಸರ್ಕಾರದ ಆದಾಯವನ್ನು ಹೆಚ್ಚಿಸುತ್ತದೆ ಮತ್ತು ಅದರಿಂದಾಗಿ ಬೆಳವಣಿಗೆಯ ದರದ ಕುಸಿತ ತಪ್ಪುತ್ತದೆ. ಮಾತ್ರವಲ್ಲ, ಈ ರೀತಿಯ ಬದಲಾವಣೆಯು ಹೆಚ್ಚು ಹೆಚ್ಚು ಉದ್ಯೋಗಗಳನ್ನೂ ಸೃಷ್ಟಿಸುತ್ತದೆ. ಈಗಾಗಲೇ ಆರ್ಥಿಕ ಬಿಕ್ಕಟ್ಟಿನ ಭಾರದಿಂದ ನರಳುತ್ತಿರುವ ದುಡಿಯುವ ಜನರಿಗೆ ಪರಿಹಾರ ಒದಗಿಸಲು ಇದು ಅವಶ್ಯವೂ ಹೌದು. ಆದರೆ, ಮೋದಿ ಸರ್ಕಾರವು ಬಂಟ ಬಂಡವಾಳಶಾಹಿಗಳ ಬಗ್ಗೆ ಕಾಳಜಿ ಹೊಂದಿದೆಯೇ ಹೊರತು ದುಡಿಯುವ ಜನರ ಬಗ್ಗೆ ಅಲ್ಲ.

NEW No. MAG(3)/NPP/205/2021-2022
JANASHAKTHI KANNADA VARA PATRIKE MAY 1-7, 2023 Price: Rs. 10/- Date of Publication: 28 APRIL 2023 RNI No. KARKAN /2006/17926 Posted on 2-05-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಕರ್ನಾಟಕ: ಅಂತಿಮ ಚುನಾವಣಾ ಕದನ ಆರಂಭವಾಗಿದೆ

ವಸಂತರಾಜ ಎನ್.ಕೆ.



ಎಲ್ಲಾ ಅರ್ಜಿಗಳ ಪರಿಶೀಲನೆ ಮತ್ತು ಏಪ್ರಿಲ್ 24 ರಂದು ನಾಮಪತ್ರ ಹಿಂಪಡೆಯಲು ಗಡುವು ಮುಗಿದ ನಂತರ, ಸ್ಪರ್ಧೆಯ ಚಿತ್ರ ಸ್ಪಷ್ಟವಾಗಿದೆ. ರಾಜ್ಯ ಮಾತ್ರವಲ್ಲದೆ ದೇಶದ ರಾಜಕೀಯ ಸಮೀಕರಣಗಳನ್ನು ಬದಲಾಯಿಸುವ ಸಾಧ್ಯತೆಯಿರುವ ಸ್ಪರ್ಧೆಗೆ ಕದನ–ರೇಖೆಗಳನ್ನು ಎಳೆಯಲಾಗಿದೆ. ಚುನಾವಣಾ ದಿನಕ್ಕೆ ಇನ್ನೆರಡು ವಾರಗಳು ಬಾಕಿ ಇರುವಂತೆಯೇ ಅಂತಿಮ ಚುನಾವಣಾ ಕದನ ಬಿರುಸಿನಿಂದ ಆರಂಭವಾಗಿದೆ.

ಪುತ್ತೂರಿನಲ್ಲಿ (ಕರಾವಳಿ ದಕ್ಷಿಣ ಕನ್ನಡ ಜಿಲ್ಲೆಯಿಂದ) ಬಿಜೆಪಿ ಮತ್ತು 'ಹಿಂದುತ್ವ' ನಡುವೆ ಪ್ರಮುಖ ಸ್ಪರ್ಧೆಯಿದೆ. ಬಿಜೆಪಿ ಅಭ್ಯರ್ಥಿ ವಿರುದ್ಧ ಆಕ್ರೋಶ ವ್ಯಕ್ತವಾಗಿದ್ದು, ಅಭ್ಯರ್ಥಿಯು ಭ್ರಷ್ಟ ಅಥವಾ ಕ್ರಿಮಿನಲ್ ಅಥವಾ ಆ ಹುದ್ದೆಗೆ ಅಸಮರ್ಥ ಎಂಬ ಕಾರಣಕ್ಕಲ್ಲ. ಆದರೆ 'ಹಿಂದುತ್ವಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಯುವಕರ' ಬಗ್ಗೆ ಕಾಳಜಿ ವಹಿಸಿಲ್ಲ ಮತ್ತು ಅಂಥವರನ್ನು ಟಿಕೆಟ್ಗೆ ಪರಿಗಣಿಸಿಲ್ಲ ಎಂಬ ಕಾರಣಕ್ಕಾಗಿ ವಿರೋಧಿಸುತ್ತಿದ್ದಾರೆ. ಹಾಗಾಗಿ ಉಗ್ರ ಹಿಂದುತ್ವ ಕಾರ್ಯಕರ್ತರ ಪ್ರತಿನಿಧಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಬಹುಕಾಲದಿಂದ ಬಿಜೆಪಿ ಕಾರ್ಯಕರ್ತರಾಗಿದ್ದು, ಇತ್ತೀಚೆಗಷ್ಟೇ ಕಾಂಗ್ರೆಸ್ಗೆ ಪಕ್ಷಾಂತರ ಮಾಡಿದ್ದಾರೆ. ಈ ಕ್ಷೇತ್ರದ ಎಸ್ಡಿಪಿಐ ಅಭ್ಯರ್ಥಿ, ಪ್ರವೀಣ್ ನೆಟ್ಟಾರು ಎಂಬುವವರ ಕುಖ್ಯಾತ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ. ಎಲ್ಲೆಡೆ ಸುದ್ದಿಯಾದ ಮತ್ತು ವ್ಯಾಪಕ ಟೀಕೆಗೆ ಕಾರಣವಾದ 'ರಸ್ತೆ, ಮೂಲಸೌಕರ್ಯ ಮುಖ್ಯ ವಿಷಯವಲ್ಲ, ಆದರೆ ಲವ್ ಜಿಹಾದ್ ಮುಖ್ಯ ವಿಷಯ' ಎಂಬ ಹೇಳಿಕೆ ನೀಡಿದ್ದ ರಾಜ್ಯ ಬಿಜೆಪಿ ಅಧ್ಯಕ್ಷರೂ ಇಲ್ಲಿಯವರೇ. ಹೀಗೆ ಕೋಮುವಾದಿಗಳ ನಡುವೆಯೇ ಸ್ಪರ್ಧೆ ಇರುವಂತಿದೆ.

ಕಲಬುರ್ಗಿ ನಗರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕ್ ಖರ್ಗೆ ಅವರ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ರೌಡಿ ಶೀಟರ್, ಕೊಲೆ, ಮಾದಕ ವ್ಯಸನ, ಪಿಡಿಎಸ್ ಅಕ್ಕಿ ಕಳ್ಳಸಾಗಣೆ (ನೆರೆಯ ರಾಜ್ಯಗಳಲ್ಲೂ ಸೇರಿದಂತೆ) ಇತ್ಯಾದಿ 40 ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಪ್ರಧಾನಿ ಮೋದಿ ಎರಡನೇ ಸುತ್ತಿನ ಪ್ರಚಾರ ಆರಂಭಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕುಲಕರ್ಣಿ ಅವರು ತಮ್ಮ ಕ್ಷೇತ್ರದಲ್ಲಿ ಪ್ರಚಾರ ಮಾಡಲು ಧಾರವಾಡ ಜಿಲ್ಲೆಗೆ ಪ್ರವೇಶಿಸಲು ತಮಗೆ ಜಾಮೀನು ನೀಡುವಂತೆ ಹೈಕೋರ್ಟ್ ಗೆ ಮನವಿ ಮಾಡಿದ್ದರು. ಆದರೆ, ಈ ಪ್ರಯತ್ನ ವಿಫಲವಾಗಿದೆ. ವರುಣಾದಲ್ಲಿ ಸಿದ್ದರಾಮಯ್ಯ ವಿರುದ್ಧ ತೀವ್ರ ಹೋರಾಟ ಎದುರಿಸುತ್ತಿರುವ ವಿ. ಸೋಮಣ್ಣ,. ಜೆಡಿಎಸ್ ಅಭ್ಯರ್ಥಿ ಸ್ಪರ್ಧೆಯಿಂದ ಹಿಂದೆ ಸರಿದರೆ 'ಗ'ಊಟದ' ಕಾರು ಕೊಡಿಸುವುದಾಗಿ' ಕರೆಯ ಆಡಿಯೋ ಫೈಲ್ ವೈರಲ್ ಆಗಿದೆ. ಇದು ಸಾಕಷ್ಟು ಸುದ್ದಿಮಾಡಿದೆ. ಪ್ರಚಾರದ ವೇಳೆ ಅನೇಕ ಪ್ರದೇಶಗಳಲ್ಲಿ ಜನರು ಸೋಮಣ್ಣ ಅವರನ್ನು ಮತ್ತು ಬಿಜೆಪಿ ಸಂಸದ ಪ್ರತಾಪ್ ಸಿಂಹ ಅವರನ್ನು ಓಡಿಸಿದ್ದಾರೆ.

ಈಗ ಸ್ಪಷ್ಟವಾಗುತ್ತಿರುವ ವೈವಿಧ್ಯಮಯ ಮತ್ತು ಸಂಕೀರ್ಣ ಸ್ಪರ್ಧೆಯ ಕೆಲವು ಚಿತ್ರಣಗಳಿವು.

ಸ್ಪರ್ಧೆಯ ಅಂತಿಮ ಚಿತ್ರ

224 ಸ್ಥಾನಗಳಿಗೆ ಸ್ಪರ್ಧಿಸಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆ 2399, ಅದರಲ್ಲಿ ಮಹಿಳೆಯರು ಕೇವಲ 184. ಬಿಜೆಪಿ ಎಲ್ಲಾ 224 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಕಾಂಗ್ರೆಸ್ 223 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದು, ಒಂದು ಸ್ಥಾನದಲ್ಲಿ ಸರ್ವೋದಯ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಿದೆ. ಜೆಡಿಎಸ್ 207 ಸ್ಥಾನಗಳಲ್ಲಿ ಕಣಕ್ಕಿಳಿದಿದೆ. 18 ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗಳು, 14 ಬಿಜೆಪಿ ಮತ್ತು 2 ಜೆಡಿಎಸ್ ಬಂಡಾಯ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮೂರು ಪಕ್ಷಗಳ ನಡುವೆ ಸುಮಾರು 30 ಅಭ್ಯರ್ಥಿಗಳು ಕಣಕ್ಕಿಳಿದಿದ್ದು, ಅದರಲ್ಲಿ ಅರ್ಧದಷ್ಟು ಬಿಜೆಪಿ ಅಭ್ಯರ್ಥಿಗಳು.

ಕಾಂಗ್ರೆಸ್ 11 ಮಹಿಳೆಯರಿಗೆ ಮತ್ತು ಬಿಜೆಪಿ 12 ಮಹಿಳೆಯರಿಗೆ ಟಿಕೆಟ್ ನೀಡಿದ್ದು, ಇದು ಕೇವಲ 5% ಅಭ್ಯರ್ಥಿಗಳು. ಜೆಡಿಎಸ್ ಕೂಡ 11 ಮಹಿಳೆಯರಿಗೆ ಟಿಕೆಟ್ ನೀಡಿದೆ. ಕಾಂಗ್ರೆಸ್ 14 ಸ್ಥಾನಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಿದ್ದು, ಅದರಲ್ಲಿ 11 ಮುಸ್ಲಿಮರಿಗೆ ಹಾಗೂ ಒಬ್ಬ ಮಹಿಳೆ ಸೇರಿದಂತೆ ಕ್ರಿಶ್ಚಿಯನ್ನರಿಗೆ 3 ಟಿಕೆಟ್ ಗಳನ್ನುನೀಡಿ ಕಣಕ್ಕಿಳಿಸಿದೆ. ಸಿಎಂ ಬೊಮ್ಮಾಯಿ ವಿರುದ್ಧ ಕಾಂಗ್ರೆಸ್ ನಿಂದ ಮುಸ್ಲಿಂ ಅಭ್ಯರ್ಥಿ ಕಣಕ್ಕಿಳಿದಿದ್ದಾರೆ. ನಿರೀಕ್ಷಿತವಾಗಿ ಬಿಜೆಪಿ ಯಾವುದೇ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಿಲ್ಲ ಮತ್ತು ಅದರ ಅಭ್ಯರ್ಥಿಗಳೆಲ್ಲರೂ ಹಿಂದೂಗಳು. ಒಬ್ಬ ಮಹಿಳೆ ಸೇರಿದಂತೆ ಮುಸ್ಲಿಮರಿಗೆ ಜೆಡಿಎಸ್ 22 ಟಿಕೆಟ್ ನೀಡಿದೆ.

ಎಡಪಕ್ಷಗಳ ಪೈಕಿ ಅಂತಿಮವಾಗಿ ಸಿಪಿಐ(ಎಂ) 4, ಸಿಪಿಐ–7, ಸಿಪಿಐ–ಎಂಎಲ್ (ಲಿಬರೇಷನ್)–2, ಎಸ್‌ಯುಸಿಐ(ಸಿ)–14 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಸಿಪಿಐ(ಎಂ) ಅಭ್ಯರ್ಥಿಗಳು ಕೆಜಿಎಫ್ (ಎಸ್ಸಿ) ಕ್ಷೇತ್ರದಲ್ಲಿ ಸಿಪಿಐನಿಂದ, ಕೆಆರ್ ಪುರಂನಲ್ಲಿ ಸಿಪಿಐ–ಎಂಎಲ್ (ಎಲ್)ನಿಂದ ಮತ್ತು ಕಲ್ಬುರ್ಗಿ ಗ್ರಾಮೀಣ(ಎಸ್ಸಿ) ಕ್ಷೇತ್ರಗಳಲ್ಲಿ ಎಸ್‌ಯುಸಿಐ(ಸಿ) ನಿಂದ 'ಮಿತ್ರರ ನಡುವಿನ ಸ್ಪರ್ಧೆ' ಎದುರಿಸುತ್ತಿದೆ. ಜೆಡಿಎಸ್ 3 ಕ್ಷೇತ್ರಗಳಲ್ಲಿ (ಕೆ.ಜಿ.ಎಫ್ ಹೊರತುಪಡಿಸಿ) ಸಿಪಿಐ(ಎಂ) ಅಭ್ಯರ್ಥಿಗಳಿಗೆ ಬೆಂಬಲ ಘೋಷಿಸಿದೆ. ಬಾಗೇಪಲ್ಲಿ ಜೆಡಿಎಸ್‌ನಲ್ಲಿ ಕಣದಲ್ಲಿಲ್ಲ, ಆದರೆ ಉಳಿದ ಎರಡು ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳು ಅಧಿಕೃತವಾಗಿ ಹಿಂದೆ ಸರಿದಿಲ್ಲ. ಬಾಗೇಪಲ್ಲಿಯಲ್ಲಿ ಜೆಡಿಎಸ್ ಕೂಡ ಸಿಪಿಐ(ಎಂ) ಅಭ್ಯರ್ಥಿ ಪರ ಪ್ರಚಾರ ನಡೆಸುತ್ತಿದೆ.

ಆರ್‌ಪಿಐ (ಪ್ರಕಾಶ್ ಅಂಬೇಡ್ಕರ್ ಗ್ರೂಪ್) 7 ಮತ್ತು ಸರ್ವೋದಯ 14 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ಇತರ ಪಕ್ಷಗಳ ಪೈಕಿ ಎಎಪಿ 209, ಬಿಎಸ್ಪಿ 133, ಎಸ್‌ಡಿಪಿಐ 16, ಕೆಆರ್‌ಪಿಪಿ 49, ಎನ್‌ಸಿಪಿ 9, ಜೆಡಿಯು 8, ಎಂಇಎಸ್ 4, ಎಐಎಂಐಎಂ 2 ಮತ್ತು ಕೆಆರ್‌ಎಸ್ 200 ಸ್ಥಾನಗಳಲ್ಲಿ ಸ್ಪರ್ಧೆ ಮಾಡಿವೆ.

ಶ್ರೀಮಂತ ಅಭ್ಯರ್ಥಿಗಳು ಮತ್ತು ಹಣಬಲ

ನಾಮಪತ್ರ ಸಲ್ಲಿಸುವಾಗ ಅಭ್ಯರ್ಥಿಗಳು ತಮ್ಮ ಆಸ್ತಿ ಮತ್ತು ಆದಾಯದ ಬಗ್ಗೆ ಮಾಹಿತಿ ನೀಡಿದ್ದಾರೆ. ಕರ್ನಾಟಕದ ಹಾಲಿ ಶಾಸಕರ ಸರಾಸರಿ ಆಸ್ತಿ 34.50 ಕೋಟಿ ರೂ. ಆಗಿದ್ದು ದೇಶದಲ್ಲೇ ಅತ್ಯಂತ ಶ್ರೀಮಂತರು ಎಂಬುದು ಈಗಾಗಲೇ ಎಲ್ಲರಿಗೂ ತಿಳಿದಿರುವ ವಿಷಯ. ಅಭ್ಯರ್ಥಿಗಳು ಸಲ್ಲಿಸಿರುವ ಅಫಿಡವಿಟ್ ಗಳನ್ನು ನೋಡಿದರೆ ಕರ್ನಾಟಕದ ಶಾಸಕರು ಈ ಸ್ಥಾನವನ್ನು ಇನ್ನೂ ಹೆಚ್ಚಿನ ಅಂತರದಲ್ಲಿ ಉಳಿಸಿಕೊಳ್ಳುವ ಸಾಧ್ಯತೆಯಿದೆ. ಹೆಚ್ಚಿನ ಶಾಸಕರ ಆಸ್ತಿ ಗಣನೀಯವಾಗಿ–ಕೆಲವು ದ್ವಿಗುಣ ಮತ್ತು ಬಹುಪಟ್ಟು–ಹೆಚ್ಚಾಗಿದೆ ಎಂದು ಅಫಿಡವಿಟ್‌ಗಳು ಬಹಿರಂಗಪಡಿಸುತ್ತವೆ. ಬಹಳಷ್ಟು ಹೊಸ ಅಭ್ಯರ್ಥಿಗಳು 50 ಕೋಟಿ ರೂ.ಗಿಂತ ಹೆಚ್ಚಿನ ಆಸ್ತಿಯನ್ನು ಹೊಂದಿದ್ದಾರೆ, ಅವರು ಆಯ್ಕೆಯಾಗುವ ಸಾಧ್ಯತೆ ಇತರರಿಗಿಂತ ಹೆಚ್ಚಾಗಿದೆ.

ಅಫಿಡವಿಟ್‌ಗಳ ಪ್ರಕಾರ, ಅತ್ಯಂತ ಶ್ರೀಮಂತ ಅಭ್ಯರ್ಥಿ ಎಂ.ಟಿ.ಬಿ. ನಾಗರಾಜ್ (ಹೊಸಕೋಟೆ ಬಿಜೆಪಿ ಅಭ್ಯರ್ಥಿ) ಅವರ ಘೋಷಿತ ಆಸ್ತಿ 1615 ಕೋಟಿ ರೂಪಾಯಿ ಮತ್ತು 2018 ರಲ್ಲಿ ಘೋಷಿಸಿದ್ದಕ್ಕಿಂತ 600 ಕೋಟಿ ರೂಪಾಯಿ ಹೆಚ್ಚಳವಾಗಿದೆ. 2019ರ ಆಪರೇಷನ್ ಕಮಲದ 'ಫಲಾನುಭವಿ'ಗಳಲ್ಲಿ ಇವರೂ ಒಬ್ಬರು. ಡಿಕೆ ಶಿವಕುಮಾರ್ (ಕನಕಪುರದ ಕಾಂಗ್ರೆಸ್ ಅಭ್ಯರ್ಥಿ ಮತ್ತು ಸಿಎಂ ಆಕಾಂಕ್ಷಿ) ಅವರ ಘೋಷಿತ ಆಸ್ತಿ 62% ರಷ್ಟು ಏರಿಕೆಯಾಗಿ 1358 ಕೋಟಿ ರೂ. ಆಗಿದೆ. ಮೂರನೆಯ ಸ್ಥಾನದಲ್ಲಿರುವ ಮುನಿರತ್ನ ನಾಯ್ಡು (ರಾಜರಾಜೇಶ್ವರಿ ಬಿಜೆಪಿ ಅಭ್ಯರ್ಥಿ) 293 ಕೋಟಿ ರೂಪಾಯಿ ಆಸ್ತಿ ಘೋಷಿಸಿದ್ದಾರೆ. ಕಳೆದ ಬಾರಿಯ 43 ಕೋಟಿ ರೂಪಾಯಿಗಳಿಂದ ಅವರ ಆಸ್ತಿ ಐದು ಪಟ್ಟು ಹೆಚ್ಚಳವಾಗಿದೆ. ನಂತರದ ಅತಿ ಹೆಚ್ಚು ಆಸ್ತಿ ಘೋಷಿಸಿದ ಇಬ್ಬರೆಂದರೆ, ಹೆಚ್.ಡಿ. ಕುಮಾರಸ್ವಾಮಿ (ಚನ್ನಪಟ್ಟಣದಿಂದ ಜೆಡಿಎಸ್ ಅಭ್ಯರ್ಥಿ ಮತ್ತು ಮಾಜಿ ಸಿಎಂ)–ರೂ. 181 ಕೋಟಿ ಮತ್ತು ಬಿ.ವಿ. ವಿಜಯೇಂದ್ರ (ಶಿಕಾರಿಪುರದಿಂದ ಬಿಜೆಪಿ ಅಭ್ಯರ್ಥಿ)–ರೂ. 126 ಕೋಟಿ. ಆದ್ದರಿಂದ ಐವರು ಶ್ರೀಮಂತ ಅಭ್ಯರ್ಥಿಗಳಲ್ಲಿ 3 ಬಿಜೆಪಿ, ತಲಾ ಒಬ್ಬರು ಕಾಂಗ್ರೆಸ್ ಮತ್ತು ಜೆಡಿಎಸ್ನವರು.

ಚುನಾವಣಾ ಸ್ಪರ್ಧೆಯಲ್ಲಿ ಹಣದ ಬಲ ಮತ್ತು ಚುನಾವಣಾ ಅಕ್ರಮಗಳು ಕಣ್ಣಿಗೆ ರಾಚುವಂತೆ ಹೆಚ್ಚುತ್ತಿವೆ. ಇದುವರೆಗಿನ ಕರ್ನಾಟಕ ಚುನಾವಣೆಯಲ್ಲಿ ಚುನಾವಣಾ ಆಯೋಗ ನಡೆಸಿದ ವಶಪಡಿಸಿಕೊಂಡ ಮೌಲ್ಯದಲ್ಲಿ ಇದನ್ನು ಕಾಣಬಹುದಾಗಿದೆ. ಇದುವರೆಗೆ ವಶಪಡಿಸಿಕೊಂಡ ಒಟ್ಟು ಮೌಲ್ಯವು 240 ಕೋಟಿ ರೂಪಾಯಿಗಳನ್ನು ಮೀರಿದೆ, ಇದರಲ್ಲಿ 80 ಕೋಟಿ ರೂಪಾಯಿ ನಗದು, ರೂ. 48 ಕೋಟಿ ಮೌಲ್ಯದ ಮದ್ಯ, ರೂ. 78 ಕೋಟಿ ಮೌಲ್ಯದ ಚಿನ್ನ / ಬೆಳ್ಳಿ, ರೂ. 19 ಕೋಟಿ ಮೌಲ್ಯದ ಉಚಿತ ಪುಟ 12 ಕ್ಕೆ



ಕೃಪೆ: ಪಿ. ಮಹಮ್ಮದ್, ವಾ.ಭಾ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**